ಜೂನ್ 1, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1987
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಮಂಡ್ಯದ ಸಂಚಾರಿ ಪೊಲೀಸರ ಕ್ರೌರ್ಯಕ್ಕೆ

# ಅನ್ಯಾಯವಾಗಿ ಬಲಿಯಾಯ್ತು ಕಂದಮ್ಮ!



ಈ ಸಾವು ನ್ಯಾಯವೇ?



## ‘ಸ್ಪಾ’ ನೆಪದಲ್ಲಿ ಹೈಟೆಕ್ ದಂಧೆ!

## ಜಮೀನು ಪಾಲು ವಿವಾದ; ಡಬಲ್ ಮರ್ಡರ್!

## GBA ವಿರುದ್ಧ ದಂಗೆ?!



## ಲೇವಾದೇವಿ ಲಫಡಾ–ಕೊಲೆ!

## ಮಡೆನೂರ್ ಮನು ಬ್ಯಾನ್?!



# ಕರ್ನಾಟಕ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ 'ಕನ್ನಡಿಗ' ಡಾ. ಎಂ.ಎ. ಸಲೀಂ ಸರ್

ಕರ್ನಾಟಕ ರಾಜ್ಯ ಸರ್ಕಾರ ಹಿರಿಯ ಐಪಿಎಸ್ ಅಧಿಕಾರಿ 'ಕನ್ನಡಿಗ' ಡಾ. ಎಂ.ಎ. ಸಲೀಂ ಅವರನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನಾಗಿ (ಪ್ರಭಾರ) ನೇಮಕ ಮಾಡಿರುವುದು ಇಡೀ ರಾಜ್ಯದ ಜನತೆಯಲ್ಲಿ ಹರ್ಷ ತಂದಿದೆ. ಕಳೆದ ಮೇ 21, ಬುಧವಾರದಂದು ಸೇವೆಯಿಂದ ಡಿಜಿ ಮತ್ತು ಐಜಿಪಿ ಡಾ.ಅಲೋಕ್ ಮೋಹನ್ ಅವರ ಸ್ಥಾನಕ್ಕೆ ಡಾ. ಎಂ.ಎ. ಸಲೀಂ ಅವರನ್ನು ನೇಮಿಸಲಾಗಿದೆ. ಮಾನ್ಯ ಅಲೋಕ್ ಮೋಹನ್ ಸರ್ ನೃಪತುಂಗ ರಸ್ತೆಯಲ್ಲಿರುವ ಡಿಜಿಪಿ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಡಾ. ಸಲೀಮ್ ಅವರಿಗೆ ಸೇವಾ ದಂಡ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದ್ದಾರೆ.



ಸಂತಸಕರ ಸಂಗತಿ ಎಂದರೆ, ಸಲೀಮ್ ಸಾಹೇಬರು ನಮ್ಮ ಕನ್ನಡಿಗರು. 1966ರ ಜೂನ್ 25ರಂದು ಬೆಂಗಳೂರು ಸಮೀಪದ ಚಿಕ್ಕಬಾಣಾವರದಲ್ಲಿ ಜನಿಸಿದ ಡಾ. ಎಂ.ಎ. ಸಲೀಂ ಅವರು, 1989ರಲ್ಲಿ ವಾಣಿಜ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 1993ರಲ್ಲಿ ಹೈದ್ರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಪೊಲೀಸ್ ಕರ್ತವ್ಯ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಪಡೆದ ಅವರು, 2010ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಟ್ರಾಫಿಕ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ.

1993ರಲ್ಲಿ ಅವರು ಆಲ್ ಇಂಡಿಯಾ ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಆಯ್ಕೆಯಾಗುವ ಮೂಲಕ ಪ್ರಾರಂಭವಾಯಿತು. ಡಾ. ಎಂ.ಎ. ಸಲೀಂ ಅವರು ಈವರೆವಿಗೂ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ 26 ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ.

ಕಲಬುರ್ಗಿ, ಉಡುಪಿ ಮತ್ತು ಹಾಸನ ಜಿಲ್ಲೆಗಳಲ್ಲಿ ಪೊಲೀಸ್ ಅಧೀಕ್ಷಕರಾಗಿ, ಮೈಸೂರು ನಗರದ ಪೊಲೀಸ್ ಆಯುಕ್ತರಾಗಿ, ಬೆಂಗಳೂರು ನಗರದಲ್ಲಿ ವಿಶೇಷ ಪೊಲೀಸ್ ಆಯುಕ್ತರಾಗಿ, ಪೂರ್ವ ವಲಯದ ಪೊಲೀಸ್ ಮಹಾ ನಿರೀಕ್ಷಕರಾಗಿ ಕಾರ್ಯನಿರ್ವಹಿಸಿರುವ ಡಾ.ಎಂ.ಎ. ಸಲೀಂ ಅವರು, ಭ್ರಷ್ಟಾಚಾರ ನಿಗ್ರಹ ಘಟಕದ, ಕರ್ನಾಟಕ ರಾಜ್ಯ ಪೊಲೀಸ್ ಅಪರಾಧ ವಿಭಾಗ ಮತ್ತು ಆಡಳಿತ ವಿಭಾಗಗಳಿಗೆ ಮುಖ್ಯಸ್ಥರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ.

ಪ್ರಸ್ತುತ ಅವರು ಅತ್ಯಂತ ಮಹತ್ವದ ಹಾಗೂ ಸೂಕ್ಷ್ಮವಾದ ಅಪರಾಧ ಪ್ರಕರಣಗಳ ತನಿಖೆಯನ್ನು ನಡೆಸುವ ಸಂಸ್ಥೆಯಾದ ಅಪರಾಧ ತನಿಖಾ ಇಲಾಖೆ (ಸಿಐಡಿ)ಯ ಪೊಲೀಸ್ ಮಹಾನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಡಾ.ಎಂ.ಎ. ಸಲೀಂ ಅವರು ಕರ್ನಾಟಕ ರಾಜ್ಯದಲ್ಲಿ ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಹಾಗೂ ಮಾನವ ಹಕ್ಕುಗಳ ರಕ್ಷಣೆಯಲ್ಲಿ ಮಹತ್ತರವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಗಣನೀಯ ಸಾಧನೆಗಳಲ್ಲಿ ಮಹಿಳೆಯರಿಗೆ (ಸ್ಪಂದನ), ಮಕ್ಕಳಿಗೆ(ಮಕ್ಕಳ ಸಹಾಯವಾಣಿ) ಹಾಗೂ ಹಿರಿಯ ನಾಗರಿಕರಿಗೆ (ಆಸರೆ ಮತ್ತು ಅಭಯ) ಸಹಾಯವಾಣಿ ಮತ್ತು ಬೆಂಬಲ ವ್ಯವಸ್ಥೆಗಳ ಸ್ಥಾಪನೆಯು ಸೇರಿವೆ. ಇಷ್ಟೇ ಅಲ್ಲದೇ, ಗರುಡ ಪ್ಯಾಟ್ರೋಲ್ ಪಡೆಯ ಸ್ಥಾಪನೆ, ವಿವಿಧ ಜಿಲ್ಲೆಗಳಲ್ಲಿ ವಿಶೇಷ ಕಾರ್ಯ ಪಡೆಗಳ ಅಭಿವೃದ್ಧಿ ಮತ್ತು ಸಂಚಾರ ನಿಯಮಗಳ ಜಾರಿ ತಂತ್ರಜ್ಞಾನದಲ್ಲಿ ಮಹತ್ವದ ಪ್ರಗತಿ ಸಾಧಿಸಿರುವ ಮತ್ತು ಹಲವಾರು ವಿಭಿನ್ನ ಯೋಜನೆಗನ್ನು ಪ್ರಾರಂಭಿಸಿರುವ ಹೆಗ್ಗಳಿಕೆ ಇವರಿಗಿದೆ.

ಸಂಚಾರ ದಟ್ಟಣೆ ನಿರ್ವಹಣೆಯಲ್ಲಿ ಡಾ. ಎಂ.ಎ. ಸಲೀಂ ಅವರು ಪ್ರವೀಣರೆನಿಸಿಕೊಂಡಿದ್ದು, ರಸ್ತೆಯ ಸುರಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸಲು ಹಲವು ವಿನೂತನ ಉಪಕ್ರಮಗಳನ್ನು ರೂಪಿಸಿದ್ದಾರೆ.ಅವರ ಪ್ರಯತ್ನಗಳ ಫಲವಾಗಿ ಬೆಂಗಳೂರು ನಗರದಲ್ಲಿ 122 ಏಕಮುಖ ಸಂಚಾರದ ರಸ್ತೆಗಳನ್ನಾಗಿ ಪರಿವರ್ತಿಸಲಾಗಿದೆ.



ರಸ್ತೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ 'ಸೇಫ್ ರೂಟ್ಸ್ ಟು ಸ್ಕೂಲ್' ಯೋಜನೆ, ಸ್ವಯಂಚಾಲಿತ ಟ್ರಾಫಿಕ್ ದಂಡ ವ್ಯವಸ್ಥೆ, ಲೋಕಲ್ ಏರಿಯಾ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಯೋಜನೆಗಳು ಮತ್ತು ಸಂಚಸಂಚಾರ ನಿಯಮ ಜಾರಿಯಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗಾಗಿ "Public Eye" ಯೋಜನೆ ಮುಂತಾದ ಇನ್ನೂ ಹಲವಾರು ಪ್ರತಿಷ್ಠಿತ ಸಂಚಾರ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಿರುವ ಗರಿಮೆ ಸಲೀಮ್ ಸಾಹೇಬರಿಗೆ ಸಲ್ಲುತ್ತದೆ. ಎಲ್ಲಿ ಸಂಚಾರ ಧಟ್ಟಣೆ ಇದೆಯೋ, ಸಂಚಾರಕ್ಕೆ ಭಾರಿ ಸಮಸ್ಯೆ ಇದೆಯೋ, ಅಂತಾ ಕಡೆ 'ಒನ್ ವೇ' ನಿಯಮ ಜಾರಿಗೆ ತಂದು, ಒನ್ ವೇ ಪೊಲೀಸ್ ಕಮಿಷನರ್ ಎಂದೇ ಖ್ಯಾತರಾಗಿದ್ದರು ಸಲೀಮ್ ಸರ್!

ಟ್ರಾಫಿಕ್ ನಿರ್ವಹಣೆಯಷ್ಟೇ ಅಲ್ಲದೇ, ಕ್ರಿಮಿನಲ್ ಪ್ರಕರಣಗಳ ತನಿಖೆ ಡಾ.ಎಂ.ಎ. ಸಲೀಂ ಅವರ ಅಚ್ಚುಮೆಚ್ಚಿನ ಹಾಗೂ ಸವಾಲಿನ ಕ್ಷೇತ್ರವಾಗಿದೆ. ಅತ್ಯುತ್ತಮ ತನಿಖಾ ಸಾಮರ್ಥ್ಯಗಳನ್ನು ಹೊಂದಿರುವ ಇವರು ಹಲವಾರು ಮಹತ್ವದ, ಸೂಕ್ಷ್ಮ ಮತ್ತು ಕ್ಲಿಷ್ಟಕರ ಕ್ರಿಮಿನಲ್ ಪ್ರಕರಣಗಳ ತನಿಖೆಗೆ ರಚಿಸಲಾದ ವಿಶೇಷ ತನಿಖಾ ತಂಡಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ.

ಡಾ. ಎಂ.ಎ. ಸಲೀಂ ಅವರ ಉನ್ನತ ಮಟ್ಟದ ಸೇವೆ, ಸಾಧನೆಗಳು, ಸಾರ್ವಜನಿಕ ಸ್ನೇಹಿ ಕಾರ್ಯಕ್ರಮಗಳನ್ನು ಗುರುತಿಸಿ ಅವರಿಗೆ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಂದ ಗೌರವಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ 2017ರಲ್ಲಿ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪೊಲೀಸ್ ಪದಕ, 2009ರಲ್ಲಿ ನೀಡಲಾದ ರಾಷ್ಟ್ರಪತಿಗಳ ಶ್ಲಾಘನೀಯ ಪೊಲೀಸ್ ಪದಕ, ಭಾರತ ಸರಕಾರದ ಮಾಹಿತಿ ತಂತ್ರಜ್ಞಾನವನ್ನು ಮಾದರಿಯಾಗಿ ಬಳಸಿಕೊಂಡ ಸಾಧನೆಗೆ ನೀಡಲಾಗುವ ರಾಷ್ಟ್ರೀಯ ಇ-ಗವರ್ನನ್ಸ್ ಪ್ರಶಸ್ತಿ, ರಸ್ತೆ ಸುರಕ್ಷತೆ ಅಭಿವೃದ್ಧಿಗೆ ಇವರ ಮಹತ್ವದ ಕೊಡುಗೆಗಾಗಿ IRTE Prince Michael International Road Safety Award ಪ್ರಶಸ್ತಿ ಮುಂತಾದ ಹಲವು ಗೌರವಗಳು ಇವರ ಮುಡಿಗೇರಿವೆ. ಡಾ.ಸಲೀಂ ಅವರು ನಗರ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆ ಎಂಬ ಒಂದು ಗ್ರಂಥವನ್ನೂ ಸಹ ರಚಿಸಿದ್ದಾರೆ.

ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಬೆರೆತು ಹೃತ್ಪೂರ್ವಕ ವಾಗಿ ಮಾತನಾಡಿದ ನೂತನ ಡಿಜಿ-ಐಜಿಪಿ ಡಾ. ಎಂ.ಎ. ಸಲೀಂ ಅವರು, ಸೇವೆಯಿಂದ ನಿವೃತ್ತಿ ಹೊಂದಿದ ಡಾ.ಅಲೋಕ್ ಮೋಹನ್ ಅವರ ಕುರಿತು, ರಾಜ್ಯದ ಪೊಲೀಸ್ ಇಲಾಖೆಯನ್ನು ದೇಶದಲ್ಲೇ ಅತ್ಯುತ್ತಮ ಸ್ಥಾನಕ್ಕೆ ಕೊಂಡೊಯ್ದಿದ್ದಾರೆ. ಅವರು ಪೊಲೀಸ್ ಇಲಾಖೆಯಲ್ಲಿ ಹಲವಾರು ಸುಧಾರಣೆಗಳಿಗೆ ಕಾರಣಕರ್ತರಾಗಿದ್ದಾರೆ. ಅವರ ಮಾದರಿಯನ್ನು ನಾವು ಅನುಸರಿಸಿಕೊಂಡು ಬರುತ್ತಿದ್ದೇವೆ, ಅಷ್ಟೇ. ಎಂಬುದಾಗಿ ಮೆಚ್ಚುಗೆ ಸೂಚಿಸಿದ್ದಾರೆ. ಅಲ್ಲದೆ, ರಾಜ್ಯ ಪೊಲೀಸ್ ಮಹಾ ನಿರ್ದೇಶಕನಾಗಿ ತಾನು ಕೂಡ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಸುಭದ್ರವಾಗಿಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಪ್ರಾಮಾಣಿಕವಾಗಿ ನುಡಿದಿದ್ದಾರೆ.

ಶ್ರೀಯುತರು ನುಡಿದಂತೆಯೇ ನಡೆದು, ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ಒಳಿತು ಮಾಡಿ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಇತಿಹಾಸದಲ್ಲಿ 'ಧ್ರುವತಾರೆ'ಯಾಗಿ ಮಿನುಗಲಿ... ಎಂದು 'ಪೊಲೀಸ್ ನ್ಯೂಸ್' ವಾರಪತ್ರಿಕೆ ಹಾರೈಸುತ್ತದೆ.

# ಅಧಿಕಾರ ವಹಿಸಿಕೊಂಡ ಕೂಡಲೇ ಸಹೋದ್ಯೋಗಿಗಳಿಗೆ ಪತ್ರ ಬರೆದರು.....

ಪ್ರಿಯ ಸಹೋದ್ಯೋಗಿಗಳೇ,

ಪ್ರಪ್ರಥಮವಾಗಿ ನನ್ನೆಲ್ಲ ಸಹೋದ್ಯೋಗಿಗಳಿಗೆ ನಾನು ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇನೆ. ಕರ್ನಾಟಕ ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥನಾಗಿ ಅಧಿಕಾರವನ್ನು ವಹಿಸಿಕೊಂಡಿರುವುದು ನನಗೆ ಅಪಾರ ಸಂತಸ ತಂದಿದೆ. ನಮ್ಮ ನಾಡಿನಲ್ಲಿ ಶಾಂತಿ-ಸೌಹಾರ್ದಯುತ, ಸುರಕ್ಷತೆಯ ವಾತಾವರಣ ನಿರ್ಮಿಸುವ ಹಾಗೂ ಇಲಾಖೆಯನ್ನು ಸಮಾಜ ಸ್ನೇಹಿಯಾಗಿ ಬದಲಿಸಿ, ಇಲಾಖೆಯನ್ನು ಆಧುನೀಕರಣದೆಡೆಗೆ ಕೊಂಡೊಯ್ಯಲು ನಮ್ಮೆಲ್ಲ ಸಾಮರ್ಥ್ಯ ಮೀರಿ ದುಡಿಯುವ ಧ್ಯೆಯದೆಡೆಗೆ ನಾವೆಲ್ಲರೂ ಒಮ್ಮತವಾಗಿ ಕಾರ್ಯಪ್ರವೃತ್ತರಾಗೋಣ.

ಈ ಗುರಿಸಾಧನೆಗೆ, ಪೊಲೀಸ್ ಇಲಾಖೆಯ ಅಡಿಪಾಯವಾಗಿರುವ ಕಿರಿಯ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಹಿಡಿದು ಹಿರಿಯ ಪೊಲೀಸ್ ಅಧಿಕಾರಿಗಳ ವರೆಗಿನ ಎಲ್ಲಾ ಸಹೋದ್ಯೋಗಿಗಳಿಂದ ಸದಾಕಾಲವೂ ನಿರಂತರ ಬೆಂಬಲವನ್ನು ಅಪೇಕ್ಷಿಸುತ್ತೇನೆ. ಪೊಲೀಸ್ ಇಲಾಖೆಯ ಕ್ರಿಯಾಶೀಲತೆ ಮತ್ತು ಸಾಮರ್ಥ್ಯ ಹೆಚ್ಚಿಸುವ ಹಲವು ಪರಿಕಲ್ಪನೆಗಳನ್ನು ನಾವೆಲ್ಲರೂ ಅನುಷ್ಠಾನಗೊಳಿಸಬೇಕಾಗಿದೆ. ಅವುಗಳೆಂದರೆ, ಕಾನೂನು-ಸುವ್ಯವಸ್ಥೆ, ಸೌಹಾರ್ದತೆಗಳನ್ನು ಕಾಪಾಡುವುದು, ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದವಿಲ್ಲದಂತೆ ಪರಿಣಾಮಕಾರಿ ಹಾಗೂ ಸಮಯೋಚಿತ ಕ್ರಮಗಳನ್ನು ಕೈಗೊಳ್ಳುವುದು. ಕಾನೂನು-ಸುವ್ಯವಸ್ಥೆ ಮತ್ತು ಸೌಹಾರ್ದತೆಗಳಿಗೆ ಅಪಾಯ ತಂದೊಡ್ಡಬಹುದಾದ ವ್ಯಕ್ತಿಗಳ ಮತ್ತು ಶಕ್ತಿಗಳ ವಿರುದ್ಧ ಅವಶ್ಯಕ ಮುನ್ನೆಚ್ಚರಿಕಾ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು.

ಅಪರಾಧಗಳನ್ನು ವ್ಯವಸ್ಥಿತವಾಗಿ ತಡೆಯುವ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅಪರಾಧ ಪ್ರಕರಣಗಳ ಸಮರ್ಥ ಹಾಗೂ ನಿಖರ ತನಿಖೆಯನ್ನು ನಡೆಸುವ ಮೂಲಕ, ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದನ್ನು ತಡೆದು, ನೊಂದವರಿಗೆ ಶೀಘ್ರ ನ್ಯಾಯ ದೊರಕಿಸಿಕೊಡಲು ಅನುವಾಗುವುದು.

ಪ್ರಸ್ತುತದವರೆಗೆ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಅನುಸರಿಸುತ್ತಿದ್ದ ಪಥವಾದ ಅಪರಾಧಿ ಕೇಂದ್ರಿತ ವ್ಯವಸ್ಥೆಯನ್ನು ಸಂತ್ರಸ್ತ ಕೇಂದ್ರಿತ ವ್ಯವಸ್ಥೆಯ ಪಥವನ್ನಾಗಿ ಬದಲಿಸಿಕೊಳ್ಳುವುದು. ಇಂತಹ ಕ್ರಮದಿಂದ ಅಪರಾಧಿಗಳಿಗೆ ಶಿಕ್ಷೆಗೆ ಗುರಿಪಡಿಸುವುದರ ಜೊತೆಗೆ, ಸಂತ್ರಸ್ತರಿಗೆ ನ್ಯಾಯ ದೊರಕುವುದರೊಂದಿಗೆ, ಅರ್ಹ ಸವಲತ್ತುಗಳನ್ನು ದೊರಕಿಸಿಕೊಡಲು ಮತ್ತು ಅವರನ್ನು ಪುನಃಶ್ಚೇತನಗೊಳಿಸಲು ಪ್ರಯತ್ನಿಸಬಹುದಾಗಿದೆ.

ಪೊಲೀಸ್ ಅಧಿಕಾರಿಗಳು ಪ್ರಾಮಾಣಿಕತೆಯಲ್ಲಿ ಎಂದೂ ರಾಜಿಯಾಗಕೂಡದು. ನಮ್ಮೆಲ್ಲ ಸಹೋದ್ಯೋಗಿಗಳಿಂದ ಎಲ್ಲರ ನಿರೀಕ್ಷೆಯೂ ಇದೇ ಆಗಿದೆ. ಸದಾಕಾಲ ನೀವೆಲ್ಲರೂ ಪ್ರಾಮಾಣಿಕತೆಗೆ ಮೊದಲ ಆದ್ಯತೆ ನೀಡುವಿರೆಂಬ ವಿಶ್ವಾಸವಿದೆ. ಪ್ರತಿಯೊಂದು ಅಧಿಕೃತ ಪ್ರಕ್ರಿಯೆಗಳಲ್ಲೂ ಸಹ ಪಾರದರ್ಶಕತೆಗೆ ಅತಿ ಹೆಚ್ಚು ಒತ್ತು ನೀಡುವುದರಿಂದ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆಯನ್ನು ಮೂಡಿಸುತ್ತವೆ ಮತ್ತು ದುರ್ಬಲ ವರ್ಗ, ಆರ್ಥಿಕವಾಗಿ ಹಿಂದುಳಿದವರಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯ. ಇಂತಹ ಪ್ರಾಮಾಣಿಕತೆಯ ಸಿದ್ಧಾಂತಗಳು ನಮ್ಮ ನೈತಿಕತೆ ಮತ್ತು ಆತ್ಮತೃಪ್ತಿಯನ್ನು ದ್ವಿಗುಣಗೊಳಿಸುತ್ತವೆ.

ಉತ್ತಮ ಮಾನವ ಸಂಪನ್ಮೂಲವೇ ಪೊಲೀಸ್ ಇಲಾಖೆಯ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ನಮ್ಮ ಸಹೋದ್ಯೋಗಿಗಳು

☞ 13




# 'ಬಿಬಿಎಂಪಿ' ಖೇಲ್ ಖತಂ... 'ಜಿಬಿಎ' ಭೂಮ್ ಭೂಮ್!!

**ಬೆಂಗಳೂರು ನಗರವನ್ನು ಬ್ರಾಂಡ್ ಬೆಂಗಳೂರ್ ಮಾಡಲು ಹೊರಟಿದ್ದ ಕಾಂಗ್ರೆಸ್ ಸರ್ಕಾರ, ಅದನ್ನು ಸೈಡಿಗೆ ಸರಿಸಿ GBA ಎಂದು ಬದಲಿಸಿ ಬಿಟ್ಟಿದೆ! ಅಚ್ಚ ಕನ್ನಡದಲ್ಲಿ ವ್ಯವಹರಿಸುತ್ತಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈಗ ಗ್ರೇಟರ್ ಬೆಂಗಳೂರು ಅಥಾರಿಟಿ (GBA) ಅಡಿಯಲ್ಲಿ ಮೂರು ಮೂರು ಚೂರಾಗಿ, ಮೂರು ಪಾಲಿಕೆಗಳಾಗಿ ಹಿಂದಿ ತಮಿಳ್ ತೆಲುಗು ಆಡಳಿತ ನಡೆಸಲು ಸಜ್ಜಾಗುತ್ತಿದೆ!! ಈ ಬಗ್ಗೆ ಕನ್ನಡ ಸಂಘಟನೆಗಳು ಕನ್ನಡ ಹೋರಾಟಗಾರರು ಮೌನ ಆಚರಿಸುತ್ತಿರುವುದೇಕೋ?! ಗ್ರೇಟರ್ ಬೆಂಗಳೂರು ಅಥಾರಿಟಿ ಬದಲು ಬೃಹತ್ ಬೆಂಗಳೂರು ಪ್ರಾಧಿಕಾರ ಮಾಡಬಹುದಲ್ವಾ...**



ಬ್ಯಾಂಗಲೋರ್ ಬೆಂಗಳೂರು ಆಯ್ತು ಸಂತೋಷ. ಬೆಂಗಳೂರು ಬೃಹತ್ ಬೆಂಗಳೂರು ಆಯ್ತು ಸಂತೋಷ. ಬೃಹತ್ ಬೆಂಗಳೂರು ಬ್ರಾಂಡ್ ಬೆಂಗಳೂರ್ ಎಂದು ಹೆಸರು ಬದಲಿಸುವುದು ತಪ್ಪಿತು ಸಂತೋಷ. ಬ್ಯಾಂಗಳೋರ್ ಸಿಟಿ ಕಾರ್ಪೊರೇಶನ್ ಬೆಂಗಳೂರು ಮಹಾನಗರ ಪಾಲಿಕೆ ಆಯ್ತು ಭಾರಿ ಸಂತೋಷ.

ಸಿಟಿ ಬಸ್ ಸ್ಟಾಂಡ್ ಕೆಂಪೇಗೌಡ ಬಸ್ ನಿಲ್ದಾಣ ಆಯ್ತು ಸಂತೋಷ. ಹೀಗೇ, ಬೆಂಗಳೂರು ಮಹಾನಗರದಲ್ಲಿ ಆಯಾ ಕಾಲಕ್ಕೆ ಏನೇ ಬದಲಾವಣೆ ಆದರೂ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದ ನಗರದಲ್ಲಿ 'ಕನ್ನಡ' ವಿಜೃಂಭಿಸುತ್ತಿದ್ದರಿಂದ ಕನ್ನಡಿಗರಾದ ನಾವೆಲ್ಲ ಸಂತೋಷವಾಗಿದ್ದೆವು. ಅದರೀಗ ಏನಾಗುತ್ತಿದೆ?

ಕನ್ನಡ ಭಾಷೆಯ ಜಾಗಕ್ಕೆ ನಿಧಾನವಾಗಿ ಇಂಗ್ಲೀಷ್ ಹಿಂದಿ ಲಗ್ಗೆ ಇಡುತ್ತಿವೆ! ಮೊನ್ನೆ ಚಂದಾಪುರದಲ್ಲಿ ಅದ್ಯಾವಳೋ ಬ್ಯಾಂಕ್ ಮ್ಯಾನೇಜರ್ ನಾನು ಕನ್ನಡ ಬಳಸುವುದೇ ಇಲ್ಲಾ ಹಿಂದಿ ಮಾತ್ರ... ಎಂದಿದ್ದಕ್ಕೆ ಆ ಭಾಗದ ಕನ್ನಡ ಹೋರಾಟಗಾರರು ಅವಳನ್ನು ಅಲ್ಲಿಂದ ಟ್ರಾನ್ಸ್‌ಪರ್ ಮಾಡುವ ತನಕ ಬಿಡಲಿಲ್ಲ, ಖುದ್ದು ಸಿದ್ದರಾಮಯ್ಯನವರೇ ಆಕೆಯ ಉದ್ಧಟತನವನ್ನು ಖಂಡಿಸಿ ಟ್ವೀಟ್ ಮಾಡಿದ್ದರು! ಮತ್ತು ಆ ಕೂಡಲೇ ಹಿಂದಿವಾಲಿಯನ್ನು ಅಲ್ಲಿಂದ ವರ್ಗಾವಣೆ ಮಾಡಿಸಿದರು.


ವಾಟಾಳ್ ನಾಗರಾಜ್


ಕನ್ನಡ ಕುಮಾರ್


ನಾರಾಯಣಗೌಡ


ಪ್ರವೀಣ್ ಶೆಟ್ಟಿ


ಆರ್. ಪುನೀತ್


ಶಿವರಾಮೇಗೌಡ

ಈ ವಿಚಾರದಲ್ಲಿ ಕನ್ನಡ ಹೋರಾಟಗಾರರಿಗೆ ಮುಖ್ಯಮಂತ್ರಿಗಳು ಸ್ಪಂದಿಸಿದ ರೀತಿ ನಿಜಕ್ಕೂ ಹೃದಯ ಸ್ಪರ್ಶಿಯಾಗಿತ್ತು. ಆದರೆ, ಗ್ರೇಟರ್ ಬೆಂಗಳೂರು ಅಥಾರಿಟಿ (GBA) ವಿಚಾರದಲ್ಲಿ ಹೀಗಾಗುತ್ತಿಲ್ಲವೇಕೆ? ನಿಮಗೆಲ್ಲ ತಿಳಿದಿರುವಂತೆ, ಕಳೆದ ಮೇ 14,2025ರಂದು ಮಧ್ಯಾಹ್ನ 3.45 ಕ್ಕೆ ಕರ್ನಾಟಕ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರ (GBA) ರಚನೆಯನ್ನು ಅಧಿಕೃತವಾಗಿ ಪ್ರಕಟಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ನಗರದ ಆಡಳಿತ ಮಂಡಳಿಯ ಅವಧಿಯನ್ನು ಕೊನೆಗೊಳಿಸಿ, ಮೇ 15ರಿಂದ ಬೆಂಗಳೂರು ಹೊಸದಾಗಿ ರಚನೆಯಾದ GBA ಅಡಿಯಲ್ಲಿ ಆಡಳಿತ ನಡೆಸಲ್ಪಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಬಿಎ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದು, ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ! ಇಲ್ಲಿಗೆ, ಬೆಂಗಳೂರು ಆಡಳಿತ ಕಾಯ್ದೆ 2024 ರ ಅನುಷ್ಠಾನದೊಂದಿಗೆ, ಬಿಬಿಎಂಪಿ ಅಧಿಕೃತವಾಗಿ ಅಸ್ತಿತ್ವ ಕಳೆದುಕೊಂಡಿದೆ! ಹೊಸ ಪ್ರಾಧಿಕಾರವು ನಗರದ ಆಡಳಿತ ರಚನೆಯಲ್ಲಿ ವ್ಯಾಪಕ ಬದಲಾವಣೆಗಳನ್ನು ತರುವ ನಿರೀಕ್ಷೆಯಿದೆ. ಇದರಲ್ಲಿ ಹಿಂದಿನ ಬಿಬಿಎಂಪಿ ಪ್ರದೇಶವನ್ನು ಹೊಸ ವಿಕೇಂದ್ರೀಕೃತ ನಗರ ಆಡಳಿತ ಮಾದರಿಯ ಭಾಗವಾಗಿ ಏಳು ಪ್ರತ್ಯೇಕ ಪುರಸಭೆಗಳಾಗಿ ವಿಭಜಿಸುವ ಸಾಧ್ಯತೆಯೂ ಸೇರಿದೆ, ಪ್ರತಿಯೊಂದೂ ತನ್ನದೇ ಆದ ಆಯುಕ್ತರ ನೇತೃತ್ವದಲ್ಲಿರಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಮಹಾನಗರ ಪ್ರದೇಶದ ನಿರ್ಣಾಯಕ ಯೋಜನೆ ಮತ್ತು ಹಣಕಾಸಿನ ವಿಷಯಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ. ಜಿಬಿಎಯ ಅಧಿಕಾರ ವ್ಯಾಪ್ತಿ ಸುಮಾರು 1,400 ಚದರ ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿರಲಿದೆ. ಹೆಚ್ಚುವರಿಯಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ), ಮತ್ತು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ನಂತಹ ಪ್ರಮುಖ ನಾಗರಿಕ ಮತ್ತು ಮೂಲಸೌಕರ್ಯ ಸಂಸ್ಥೆಗಳು ಈಗ ಜಿಬಿಎ ವ್ಯಾಪ್ತಿಗೆ ಬರುತ್ತವೆ. ಇದೆಲ್ಲ ನಮ್ಮ ಬೆಂಗಳೂರು ಸಿಟಿಯ ಉದ್ಧಾರದ ಭಾಗವಾಗಿದೆ ಅಂತಾದರೆ ಒಪ್ಪಿಕೊಳ್ಳೋಣ. ಆದರೆ, ಅಚ್ಚಕನ್ನಡದ ಹೆಸರು ಮತ್ತು ಆಡಳಿತವನ್ನು ತೆಗೆದು ಇಂಗ್ಲೀಷ್‌ಮಯ ಮಾಡಿರುವುದೇಕೆ?!

ಗ್ರೇಟರ್ ಬೆಂಗಳೂರು ಪ್ರಾಧಿಕಾರ (Greater Bengaluru Authority) ಜಾರಿಗೆ ಬಂದಿದ್ದರೂ ಕೂಡ ಅದಿನ್ನೂ ಸಂಪೂರ್ಣವಾಗಿ ಅನುಷ್ಠಾನವಾಗಿಲ್ಲ, ಅದು ಹಂತ ಹಂತವಾಗಿ ಅನುಷ್ಠಾನವಾಗಲಿದೆ ಎನ್ನಲಾಗಿದೆ. ಕಾಂಗ್ರೆಸ್ ಸರ್ಕಾರದ ಈ ನಿರ್ಧಾರಕ್ಕೆ ಪರ ವಿರೋಧ ಎರಡೂ ಇದೆ. ಪ್ರಾರಂಭದಲ್ಲಿ ನಮ್ಮ ವಾಟಾಳ್ ನಾಗರಾಜ್ ಮತ್ತವರನ್ನು ಹಿಂಬಾಲಿಸುವ ಕನ್ನಡ ಪರ ಸಂಘಟನೆಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಆದರೆ, ಆಮೇಲೆ ಮೌನ ಆಚರಿಸತೊಡಗಿದವು! ಇನ್ನು, ಕೆಲ ರಾಜಕೀಯ ಧುರೀಣರ ಅಭಿಪ್ರಾಯ ಏನೆಂದರೆ, ಇದು ಕಾರ್ಪೊರೇಶನ್ ಚುನಾವಣೆ ಮುಂದೂಡುವ ಷಡ್ಯಂತ್ರ!

ಕೆಲ ಕನ್ನಡ ಪರ ಹೋರಾಟಗಾರರು ಈಗಲೂ ಹೇಳುತ್ತಾರೆ, GBA ಜಾರಿಯಾಗುವುದರಿಂದ, ಬಿಬಿಎಂಪಿ ವಿಭಜನೆಯಗುವುದರಿಂದ ಬೆಂಗಳೂರಲ್ಲಿ ಪರಭಾಷಿಕರ ಹಾವಳಿ ಹೆಚ್ಚಾಗುತ್ತದೆ! ಈಗಿರುವ ಬೆಂಗಳೂರು ಮಹಾನಗರ ಪಾಲಿಕೆ ಮೂರು ಭಾಗವಾಗಿ, ಮುಂದೆ ಮೇಯರ್‌ಗಳ ಸಂಖ್ಯೆ ಹೆಚ್ಚಾಗಿ ಪರಭಾಷಿಕರಿಗೆ ಹೆಚ್ಚು ಅವಕಾಶ ಸಿಕ್ಕಿ ಭ್ರಷ್ಟಾಚಾರ ಹೆಚ್ಚಾಗುತ್ತದೆ! ಕೆಂಪೇಗೌಡ ಕಟ್ಟಿದ ಭವ್ಯ ಬೆಂಗಳೂರನ್ನು ವಿಭಜನೆ ಮಾಡುವುದು ದ್ರೋಹ! ಗ್ರೇಟರ್ ಬೆಂಗಳೂರ್ ವ್ಯಾಪ್ತಿಯಲ್ಲಿ ಬೃಹತ್ ಕೈಗಾರಿಕಾ ಪ್ರದೇಶಗಳು ಹಾಗೂ ಐಟಿ-ಬಿಟಿ ಕಂಪನಿಗಳಿರುವ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೂಡು, ಬಿಡದಿ, ಕಗ್ಗಲೀಪುರ, ಹಾರೋಹಳ್ಳಿ.... ಮುಂತಾದ ಪ್ರದೇಶಗಳು ಬರುತ್ತವೆ. ಇಲ್ಲೆಲ್ಲಾ ಹತ್ತಾರು ಹಳ್ಳಿಗಳು ನಾಶವಾಗಿ ರಿಯಲ್ ಎಸ್ಟೇಟ್ ವ್ಯವಹಾರ ಮುಗಿಲು ಮುಟ್ಟಿ ರಕ್ತ ಹರಿಯುತ್ತದೆ!

ಡಿ.ಕೆ. ಶಿವಕುಮಾರ್ ರಾಜಕೀಯ ಉನ್ನತಿಗೆ, ದುಡ್ಡಿನ ದಾಹಕ್ಕೆ ಬೆಂಗಳೂರು ವಿಭಜನೆಯಾಗಿ ರಿಯಲ್ ಎಸ್ಟೇಟ್ ಮಾಫಿಯಾಗೆ ಅನುಕೂಲ ಆಗುತ್ತದೆ! ಬಡವರ ಬದುಕು ಬೀದಿಗೆ ಬೀಳುತ್ತದೆ!! ಹೀಗೆ ಹಲವು ಕಾರಣಗಳನ್ನು ಮುಂದಿಟ್ಟು ಪ್ರಾಮಾಣಿಕ ಹೋರಾಟಗಾರರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ! ಸದ್ಯ, ಪಾಲಿಕೆ ವಿಭಜನೆಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಈಗಾಗಲೇ ಬಿಬಿಎಂಪಿ ಹೆಸರಿನ ಬದಲಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಎಂದು ನಾಮಕರಣ ಮಾಡಿ ಸರ್ಕಾರಿ ಅಧಿಸೂಚನೆಯೂ ಹೊರಡಿಸಿಯಾಗಿದೆ.ಆದರೆ, ನಾವು ಸಾರ್ವಜನಿಕರು,ಕನ್ನಡ ಹೋರಾಟಗಾರರು ಒಂದಾಗಿ ಹೋರಾಡಿದರೆ.... GBA ಬದಲು 'ಬೃಹತ್ ಬೆಂಗಳೂರು ಪ್ರಾಧಿಕಾರ' ಎಂದು ಹೆಸರಿಸಬಹುದು!

ನಿಜ, ಯಾವುದೇ ಸರ್ಕಾರ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುವ ಕಾರ್ಯಗಳನ್ನು ನಿರ್ವಹಿಸುವಾಗ, ರಾಜ್ಯಪಾಲರ ನಿರ್ದೇಶನ, ಮಾರ್ಗದರ್ಶನ ಪಡೆಯಬೇಕು. ಯಾವುದೇ ಕಾರ್ಯನೀತಿಯ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಉದ್ಭವಿಸಿದರೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕಲಂ 131ರಲ್ಲಿ ಹೇಳಲಾಗಿದೆ. ಆದರೆ, ಸರ್ಕಾರದ ನಡವಳಿಕೆಯನ್ನು ಪ್ರಶ್ನಿಸುವ ಹಕ್ಕು ಪ್ರಜೆಗಳಿಗೆ ಇದ್ದೇ ಇದೆ! ಅದನ್ನು ಯಾರೂ ಮರೆಯಬಾರದು. ಬೆಂಗಳೂರಿನ ಉದ್ಧಾರಕ್ಕೆ ಕನ್ನಡಿಗರಾದ ನಾವು ಯಾವ ತ್ಯಾಗಕ್ಕೆ ಬೇಕಾದರೂ ಸಿದ್ದ. ಆದರೆ, ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಅನ್ಯಾಯವಾದರೆ?! ಈ ಸಂದರ್ಭದಲ್ಲಿ ಕನ್ನಡ ಚಳುವಳಿಯ ಹಿರಿಯ ಹೋರಾಟಗಾರರಾದ ವಾಟಾಳ್ ನಾಗರಾಜ್ ಅವರು, ಕನ್ನಡ ಸೇನೆ ಕುಮಾರ್ ಅವರು, ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟರು, ಪುನೀತ್ ರವರು, ನಾರಾಯಣ ಗೌಡರು, ಶಿವರಾಮೇಗೌಡರು, ಕೃಷ್ಣೇಗೌಡರು, ಜಯಕರ್ನಾಟಕ ಸಂಘಟನೆ ಜಗದೀಶ್ ಗೌಡರು, ವೀರ ಕನ್ನಡಿಗರ ಸೇನೆಯ ಆನಂದ್ ಕೆ. ಮಂಡ್ಯ, ಕರುನಾಡ ವಿಜಯ ಸೇನೆಯ ಹೆಚ್.ಎನ್. ದೀಪಕ್ ಮುಂತಾದ ಕನ್ನಡ ಪರ ಹೋರಾಟಗಾರರು ಮುಂದೆ ನಿಂತು ಕನ್ನಡ ಭಾಷೆ ಹಾಗೂ ಕರ್ನಾಟಕ ರಾಜ್ಯದ ಮುಕುಟಮಣಿಯಾದ ಬೆಂಗಳೂರನ್ನು ರಕ್ಷಿಸಬೇಕಿದೆ! ☯


ಜಗದೀಶ್


ಕೃಷ್ಣೇಗೌಡ


ಆನಂದ್ ಕೆ. ಮಂಡ್ಯ


ದೀಪಕ್


ರಮೇಶ್‌ಗೌಡ

# ಜಮೀನು ಪಾಲು ವಿವಾದಕ್ಕೆ ಅಮ್ಮ-ಮಗ ಕೊಲೆಯಾದರು!

**ಹೆಣ್ಣು, ಹೊನ್ನು, ಮಣ್ಣಿಗಾಗಿ ರಾಮಾಯಣ, ಮಹಾಭಾರತದಂತಹ ಪೌರಾಣಿಕ ಘಟನೆಗಳು ಸಾಕ್ಷಿಯಾಗಿದೆ. ಆದರೆ ಈ ಕಲಿಯುಗದಲ್ಲಿ ಮನುಷ್ಯರ ಮಧ್ಯೆ ನಡೆಯುತ್ತಿರುವುದು ಸಹಜವಾಗಿದೆ. ಅದೇ ರಿತಿಯಲ್ಲಿ ಇಲ್ಲಿ ಐವರು ಸಹೋದರರಿಗೆ ಪಿತ್ರಾರ್ಜಿತವಾಗಿ ಜಮೀನು ಪಾಲಾಗಿತ್ತು. ಅದರಲ್ಲಿ ಒಬ್ಬನಿಗೆ 19 ಎಕರೆ ಹೆಚ್ಚಿಗೆ ಬಂದಿದ್ದು, ಐವರು ಸಹೋದರರಲ್ಲಿ ಇಬ್ಬರು ಸಹೋದರರು ಆ ಜಮೀನೂ ಸಹ ಪಾಲಾಗಬೇಕು ಅಂತಾ ದುಂಬಾಲು ಬಿದ್ದಿದ್ದರು. ಆದರೆ ಆ ಜಮೀನು ಉಳುಮೆ ಮಾಡುತ್ತಿದ್ದ ಸಹೋದರ ಆ ಇಬ್ಬರು ಸಹೋದರರಿಗೆ ನಿಮಗೆ ಬರಬೇಕಾದ ಜಮೀನು ಬಂದಿದೆ, ಯಾಕೆ ನಿಮಗೆ ಮತ್ತೆ ಕೊಡಬೇಕು ಅಂತಾ ನಿರಾಕರಿಸುತ್ತಿದ್ದ. ಇದರಿಂದ ಸಿಟ್ಟಾಗಿದ್ದ ಇನ್ನುಳಿದ ಇಬ್ಬರೂ ಸಹೋದರರು ಇವನು ಹೀಗೆ ಕೇಳಿದರೇ ಕೊಡುವ ಮಗನಲ್ಲ, ಇವನಿಗೆ ಇವನ ಕುಟುಂಬಕ್ಕೆ ಒಂದು ದಾರಿ ತೊರಿಸಿದರೆ ಮಾತ್ರ ಜಮೀನು ನಮಗೆ ದೊರಕುವುದು ಅಂದುಕೊಂಡು ತಮ್ಮ ಪಾಲಿನ ಜಮೀನು ಕೇಳಿದ ಸಹೋದರನೊಬ್ಬ ಒಂದು ದಿನ ತಮ್ಮ ಕುಟುಂಬದವರೊಡನೆ ಚರ್ಚಿಸಿ ಹತ್ಯೆಗೆ ಸಂಚು ರೂಪಿಸಿ ಒಂದು ದಿನ ಜಮೀನು ಪಾಲು ಕೊಡಲು ನಿರಾಕರಿಸಿದ ಪತ್ನಿ ಹಾಗೂ ಆತನ ಮಗನನ್ನು ಜಮೀನಿನಲ್ಲಿ ಕೊಡಲಿಯಿಂದ ಕೊಚ್ಚಿ ಕೊಚ್ಚಿ ಹತ್ಯೆಗೈದ ಘಟನೆ ಬಾಗಲಕೋಟ ಜಿಲ್ಲೆಯ ಇಳಕಲ್ ತಾಲ್ಲೂಕಿನ ನಂದವಾಡಗಿ ಗ್ರಾಮದಲ್ಲಿ ಜರಿಗಿದರ ಬಗ್ಗೆ ಇಳಕಲ್ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

**ಬಾಗಲಕೋಟೆ**
✍ ಮಂಜುನಾಥ ಈಶ್ವರ ಕರೋಳಿ



ಕೊಲೆಯಾದ ಸಂಗವ್ವ ಹಾಗೂ ಸೋಮನಾಥ

ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನ ನಂದವಾಡಗಿ ಗ್ರಾಮ ಇಲ್ಲಿ ರೈತಾಪಿ ಕುಟುಂಬಗಳೇ ಹೆಚ್ಚಿನದಿದ್ದು ಕೃಷಿಯನ್ನೆ ಅವಂಭಿಸಿರುವ ಗ್ರಾಮ. ಈ ಗ್ರಾಮದ ನಿವಾಸಿಗಳಾದ ಯಮನಪ್ಪ ಗೋನಾಳ, ಹಿರೇಸೋಮಪ್ಪ ಗೋನಾಳ, ಸಣ್ಣಸೋಮಪ್ಪ, ಬಸಪ್ಪ ಗೋನಾಳ, ನಿಂಗಪ್ಪ ಗೋನಾಳ ಎಂಬ ಐದು ಜನ ಸಹೋದರರು ಕೃಷಿ ಅವಲಂಬಿತ ಕುಟುಂಬ ಇವರದಾಗಿತ್ತು. ಈ ಐದರು ಸಹೊದರರಿಗೆ ಪಿತ್ರಾರ್ಜಿತ ಆಸ್ತಿ ಭಾಗವಾಗಿ ಒಬ್ಬೊಬ್ಬರಿಗೆ ತಲಾ 15 ಎಕರೆ ಭೂಮಿ ಬಂದಿದ್ದು ಎಲ್ಲರೂ ಬೇರೆ ಬೇರೆ ಕುಟುಂಬಗಳು ಮಾಡಿಕೊಂಡು ಸಂಸಾರ ಸಾಗಿಸಿದ್ದರು. ಅದರಲ್ಲಿ ಇನ್ನೂ 19 ಎಕರೆ ಜಮೀನು ಪಾಲಾಗಿರಲ್ಲಿಲ್ಲ, ಅದು ಈ ಐವರು ಸಹೋದರರಲ್ಲಿ ನಿಂಗಪ್ಪ ಗೋನಾಳ ಎಂಬುವರು ತನ್ನ ಹೆಸರಿಗೆ ಮಾಡಿಕೊಂಡು ಉಳುಮೆ ಮಾಡಿಕೊಂಡು ಜೀವನ ಮಾಡುತ್ತಿದ್ದ.

ಈ ಐವರು ಸಹೋದರರಲ್ಲಿ ಒಬ್ಬನಾದ ನಿಂಗಪ್ಪ ಗೋನಾಳ ಪತ್ನಿ ಸಂಗವ್ವ ಹಾಗೂ ಇಬ್ಬರೂ ಗಂಡು ಮಕ್ಕಳಿದ್ದು ಇವರದೇ ಆದ ಒಂದು ಕುಟುಂಬ ಬೇರೆ ಮಾಡಿಕೊಂಡು ನಂದವಾಡಗಿ ಗ್ರಾಮದಲ್ಲಿ ಜೀವನ ಸಾಗಿಸುತ್ತಿದ್ದ.



ಎಸ್ಪಿ ಅಮರನಾಥ ರೆಡ್ಡಿ



ಸಿಪಿಐ ಸುನಿಲ್ ಸವದಿ

### 19 ಎಕರೆ ಪಾಲು ಕೇಳಿದ ಸಹೋದರರರು!

ನಿಂಗಪ್ಪ ಗೋನಾಳ ಹೆಸರಿನಲ್ಲಿದ್ದ ಉಳಿದ 19 ಎಕರೆ ಜಮೀನದಲ್ಲಿ ಇನ್ನುಳಿದ ಸಹೋದರರಲ್ಲಿ ಸಣ್ಣ ಸೋಮಪ್ಪ ಮತ್ತು ಬಸಪ್ಪ ಗೋನಾಳ ಈತ ತೀರಿಕೊಂಡಿದ್ದು, ಆತನ ಮಕ್ಕಳಾದ ಮುದಿಯಪ್ಪ ಹನಮಂತ ಸೇರಿಕೊಂಡು ತನ್ನ ಚಿಕ್ಕಪ್ಪನಾದ ನಿಂಗಪ್ಪನನ್ನು ಉಳಿದ 19 ಎಕರೆ ಜಮೀನಿನಲ್ಲಿ ಎಲ್ಲರಿಗೂ ಪಾಲು ಮಾಡಿಕೊಡು ಅಂತಾ ಕೇಳಿದರು. ಅದಕ್ಕೆ ನಿಂಗಪ್ಪ ಗೋನಾಳ ಮೊದಲಿಗೆ ಕೊಡುತ್ತೆನೆ ಅಂತಾ ಮುಂದೆ ಹಾಕಿಕೊಂಡು ಬರುತ್ತಾ ಪ್ರಾರಂಭಿಸಿದ. ಆದರೆ ಸಣ್ಣಸೊಮಪ್ಪ ತನ್ನ ಸಹೋದರ ಬಸಪ್ಪ ತೀರಿಕೊಂಡಿದ್ದು ಆತನ ಮಕ್ಕಳಾದ ಮುದಿಯಪ್ಪ ಹನಮಂತ ಹಾಗೂ ತನಗೆ ಬರಬೇಕಾದ ಜಮೀನು ಪಾಲು ಮಾಡಿಕೊಡು ಮುಂದಕ್ಕೆ ಒಯ್ಯುಬೇಡ ಅಂತಾ ಸಮಾಧಾನದಿಂದ ಕೇಳುತ್ತಲೇ ಬರುತ್ತಿದ್ದರು. ಆದರೆ ನಿಂಗಪ್ಪ ಇದಕ್ಕೆ ಕ್ಯಾರೇ ಎನ್ನದೇ ಇಂದು ಮಾಡುತ್ತೇನೆ ನಾಳೆ ಮಾಡುತ್ತೇನೆ ಅಂತಾ ಮುಂದಕ್ಕೆ ಹಾಕುತ್ತ ಬರುತ್ತಿದ್ದ.

### ಭಾರತ್ ಮಾಲಾ ಯೋಜನೆ!

ಕೇಂದ್ರ ಸರ್ಕಾರದ ಯೋಜನೆಯಡಿ ಹುನಗುಂದ-ರಾಯಚೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುವ ಯೋಜನೆ ರೂಪುಗೊಂಡ ನಂತರ ಸರ್ಕಾರ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧಿನ ಪ್ರಕ್ರಿಯೆ ಪ್ರಾರಂಭ ಮಾಡಿತ್ತು. ಅದರಲ್ಲಿ ನಂದವಾಡಗಿ ಗ್ರಾಮಕ್ಕೆ ಹೊಂದಿಕೊಂಡಂತೆ ರಸ್ತೆ ನಿರ್ಮಾಣಕ್ಕೆ ಈ ನಿಂಗಪ್ಪ ಗೋನಾಳ ಹಾಗೂ ಆತನ ಸಹೋದರ ಜಮೀನಿನಲ್ಲಿ 53 ಗುಂಟೆ ಸರ್ಕಾರ ಭೂ ಸ್ವಾಧೀನ ಪಡಿಸಿಕೊಂಡು ಪರಿಹಾರ ಧನವಾಗಿ 12 ಲಕ್ಷ 58 ಸಾವಿರ ರೂಪಾಯಿಗಳನ್ನು ಬಿಡುಗಡೆಯಾಗಿತ್ತು. ಆದರೆ ಇಲ್ಲಿಯೇ ಶುರುವಾಗಿತ್ತು ಈ ಕುಟುಂಬಗಳ ಮಧ್ಯೆ ತೀವ್ರ ಕಲಹಗಳು, ಗಲಾಟೆಗಳು. ಅದು ಎನು ಅಂತಿರಾ ಮುಂದೆ ಓದಿ...

ಸರ್ಕಾರ ಹೆದ್ದಾರಿ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡು ಹಣ ಬಿಡುಗಡೆಯಾಗಿದ್ದು, ಈ ಜಮೀನು ಸಣ್ಣ ಸೋಮಪ್ಪ ಬಸಪ್ಪ ನಿಂಗಪ್ಪನ ಹೆಸರಿಗೆ ಸೇರಿದ ಜಮೀನಿನಲ್ಲಿ ಭೂಸ್ವಾಧಿನವಾಗಿತ್ತು. ಆದರೆ ಹಣ ಸಣ್ಣ ಸೋಮಪ್ಪನ ಬ್ಯಾಂಕ್ ಖಾತೆಗೆ ಜಮೆಯಾಗಿತ್ತು. ಇದರಿಂದ ನಿಂಗಪ್ಪ ತನ್ನ ಸಹೋದರ ಸಣ್ಣ ಸೋಮಪ್ಪನಿಗೆ ಸರ್ಕಾರದ ಪರಿಹಾರ ಧನದಲ್ಲಿ ಪಾಲಿಗೂ ಸೇರಿದೆ. ಅದರಲ್ಲಿ ನನ್ನ ಹಣ ನನಗೆ ಕೊಡು ಅಂತಾ ಕೇಳಿದ. ಇದರಿಂದ ಸಣ್ಣಸೋಮಪ್ಪ ಉಳಿದ 19 ಎಕರೆಯಲ್ಲಿ ನೀನೊಬ್ಬನೆ ಇಟ್ಟುಕೊಂಡು ನನಗೆ, ನನ್ನ ಸಹೋದರನ ಮಕ್ಕಳಿಗೆ ಮಾಡಿಕೊಡು ಅಂತಾ ಕೇಳಿದಾಗ ಮುಂದೆ ಮಾಡಿಕೊಡುತ್ತೇನೆ ಅಂತಾ ಹೇಳುತ್ತಾ ಬಂದಿದ್ದು, ಸರ್ಕಾರದಿಂದ ಪರಿಹಾರ ಧನದಲ್ಲಿ ಪಾಲು ಕೇಳಲು ಬಂದಿಯಾ ಅಂತಾ ಅಂದಿದ್ದಾನೆ. ಅದಕ್ಕೆ ನಿಂಗಪ್ಪ ಅದೇನೆ ಆಗಲಿ ನನ್ನ ಪಾಲಿಗೆ ಬರಬೇಕಾದ ಹಣ ಕೊಡು ಅಂದಾಗ ಸಣ್ಣ ಸೋಮಪ್ಪ 19 ಎಕರೆ ಜಮೀನಿನಲ್ಲಿ ನನಗೆ. ನನ್ನ ಸಹೋದರನ ಮಕ್ಕಳಿಗೆ ನಮಗೆ ಬರಬೇಕಾದ ಪಾಲು ಕೊಡು ಅವಾಗ ನಿನ್ನ ಪಾಲಿನ ಹಣ ನಿನಗೆ ಕೊಡುತ್ತೇನೆ ಅಂದಿದ್ದಾನೆ. ಆಗ ಬಾಯಿಗೆ ಬಾಯಿಗೆ ಬೆಳೆದು ಸಹೋದರರ ಜಗಳ ಬಗೆ ಹರಿಯದಿದ್ದಾಗ...

### ಹಿರಿಯರ ರಾಜಿ ಸಂಧಾನ

ಈ ಸಹೋದರರ ಜಮೀನು ಪಾಲು ವಿಷಯವಾಗಿ ಊರಿನ ಹಿರಿಯರನ್ನು ಸೇರಿಸಲಾಗಿದ್ದು ಆಗ ಊರಿನ ಹಿರಿಯರು ನಿಂಗಪ್ಪನಿಗೆ ನಿಮ್ಮ ತಂದೆಯ ಪಿತ್ರಾರ್ಜಿತ ಆಸ್ತಿ ಬಿಟ್ಟು ಇನ್ನುಳಿದ 19 ಎಕರೆ ಜಮೀನನ್ನು ನಿನ್ನ ಸಹೋದರ ಸಣ್ಣ ಸೋಮಪ್ಪ ಹಾಗೂ ಬಸಪ್ಪನು ನಿನ್ನ ಸಹೋದರ ಆದರೆ ಅವನು ತೀರಿಕೊಂಡಿದ್ದಾನೆ, ಹೀಗಾಗಿ ಆತನ ಮಕ್ಕಳಿಗೆ ಜಮೀನು ಪಾಲು ಮಾಡಿಕೊಡು ಅಂತಾ ಬುದ್ಧಿವಾದ ಹೇಳಿದರು. ಅಲ್ಲಿ ಸಣ್ಣಸೋಮಪ್ಪ ಹಾಗೂ ಮೃತ ಬಸಪ್ಪನ ಮಕ್ಕಳು ಹಾಗೂ ನಿಂಗಪ್ಪನ ಮಧ್ಯೆ ಮಾತಿನ ಚಕಮಕಿ ನಡೆದವು. ಅಲ್ಲಿದ್ದ ಹಿರಿಯರು ಇವರದು ಬಗೆಹರಿಯದ ಸಮಸ್ಯೆ ತಾವೇ ಏನು ಬೇಕಾದರೂ ಮಾಡಿಕೊಳ್ಳಲಿ ಅಂತಾ ಎದ್ದು ಹೋದರು. ಮುಂದೆ ಏನಾಯ್ತು ಅಂತಿರಾ.



ಬಂಧಿತ ಆರೋಪಿಗಳು

### ಪಾಲು ಕೊಡದ ಸಹೋದರನ ಪತ್ನಿ ಹಾಗೂ ಮಗನ ಹತ್ಯೆ ಮಾಡಿದರು

ಉಳಿದ 19 ಎಕರೆ ಹಾಗೂಸರ್ಕಾರ ಭೂಸ್ವಾಧಿನ ಪಡಿಸಿಕೊಂಡ ಭೂಮಿಯ ಪರಿಹಾರ ಹಣದ ವಿಚಾರವಾಗಿ ಹಿರಿಯ ರಾಜಿ ಸಂಧಾನ ವಿಫಲವಾಗಿ ಅಂದು ದಿನಾಂಕ 11/05/2025ರಂದು ಸಣ್ಣಸೋಮಪ್ಪ ತನ್ನ ತಮ್ಮನ ಮಕ್ಕಳಾದ ಮುದಿಯಪ್ಪ ಹನುಮಂತ ತಮ್ಮ ಕುಟುಂಬದಲ್ಲಿ ಕೂಡಿಕೊಂಡು ತನ್ನ ಸಹೋದರ ನಿಂಗಪ್ಪ ಗೋನಾಳ ಉಳಿದ 19 ಎಕರೆಯಲ್ಲಿ ಜಮೀನು ಪಾಲು ಕೊಡದೆ ಸತಾಯಿಸುತ್ತಿದ್ದು, ಹೀಗೆ ಕೇಳಿದರೆ ಇವನು ಕೊಡುವ ಮಗನಲ್ಲ ಇವನ ಕುಟುಂಬಕ್ಕೆ ಒಂದು ಹಾದಿ ಕಾಣಿಸಿದರೆ ಮಾತ್ರ ಒಂದು ಹಾದಿಗೆ ಬರುತ್ತಾನೆ ಅಂದು ಕೊಂಡು ಇವರ ಕುಟುಂಬ ನಾಶಕ್ಕೆ ಮುಹೂರ್ತ ಫಿಕ್ಸ್ ಮಾಡಿಯೇ ಬಿಟ್ಟಿದ್ದರು. ಅಂದು ರಾತ್ರಿ ಮಚ್ಚು, ಕುಡುಗೋಲು, ಕೊಡಲಿಗಳನ್ನು ಹತ್ಯೆಗೆ ತಯಾರು ಮಾಡಿ ಊಟ ಮುಗಿಸಿ ಮಲಗಿಕೊಂಡು ಮರುದಿನ ಏನು ಮಾಡಿದ್ದು ಮುಂದೆ ಓದಿ...

ಅಂದು ದಿನಾಂಕ 12/05/2025ರಂದು ಬೆಳಿಗ್ಗೆ ನಿಂಗಪ್ಪನ ಪತ್ನಿ ಸಂಗವ್ವ ಜಮೀನಿಗೆ ಗೊಬ್ಬರ ಹಾಕುವ ಸಲುವಾಗಿ ತನ್ನ ಮಗನಾದ ಸೋಮನಾಥ ಸೇರಿಕೊಂಡು ಜಮೀನಿಗೆ ಬಂದು



ಸಂಗವ್ವ ಹಾಗೂ ಸೋಮನಾಥನ ಮೃತದೇಹಗಳು

☞ 5

4 ☜

ಗೊಬ್ಬರ ಹಾಕುವ ಕೆಲಸ ಮಾಡುತ್ತಿದ್ದರು. ಇತ್ತ ಹಿಂದಿನ ರಾತ್ರಿಯೇ ಸಂಚು ರೂಪಿಸಿದ್ದ ನಿಂಗಪ್ಪನ ಸಹೋದರ ಹಾಗೂ ಆತನ ಇನ್ನೊಬ್ಬ ತಮ್ಮ ಮೃತ ಬಸಪ್ಪನ ಮಕ್ಕಳು ಟ್ರ್ಯಾಕ್ಟರ್ ಸಮೇತ ತಾವು ತಮ್ಮ ಜಮೀನಿನಲ್ಲಿ ಕೆಲಸ ಮಾಡುವ ನೆಪದಲ್ಲಿ ಅವರ ಜಮೀನಿಗೆ ಬಂದಿದ್ದಾರೆ. ಅಲ್ಲಿಯೇ ಪಕ್ಕದಲ್ಲಿದ್ದ ಸಂಗವ್ವ ಸೋಮನಾಥ ತಮ್ಮ ಪಾಡಿಗೆ ಪಾಡಿಗೆ ಅವರು ಅವರ ಜಮೀನಿನ'ಲ್ಲಿ ಕೆಲಸ' ಮಾಡುತ್ತಿದ್ದದ್ದರು. ಮೊದಲೇ ಹೊಂಚು ಹಾಕಿ ಬಂದಿದ್ದ ಸಣ್ಣಸೋಮಪ್ಪ ಮುದಿಯಪ್ಪ ಹನವಂತ ನೇರವಾಗಿ ನಿಂಗಪ್ಪನ ಪತ್ನಿ ಹಾಗೂ ಆತನ ಮಗ ಸೋಮನಾಥ ಬಳಿಗೆ ಬಂದು ನಿನ್ನ ಗಂಡ ನಿಂಗಪ್ಪ ನಮ್ಮ ಪಾಲಿನ ಜಮೀನು ಕೊಡಲು ಹಿಂದೇಟು ಹಾಕುತ್ತಿದ್ದು ಇದಕ್ಕೆ ನಿಮಗೆ ಒಂದು ಗತಿ ಕಾಣಿಸಿದರೆ ಅವನಿಗೆ ಬುದ್ಧಿ ಬರೋದು ಅಂದುಕೊಂಡು ಸಂಗವ್ವ ಹಾಗು ಸೋಮನಾಥನ ಮೇಲೆ ಕುಡುಗೋಲು, ಮಚ್ಚು, ಕೊಡಲಿಯಿಂದ ಹಲ್ಲೆ ಮಾಡಿ ಕೊಚ್ಚಿ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದರು.


ಹತ್ಯೆಗೆ ಬಳಸಿದ ಟ್ರ್ಯಾಕ್ಟರ್

ಈ ವಿಷಯ ನಿಂಗಪ್ಪನಿಗೆ ತಿಳಿದು ತಮ್ಮ ಜಮೀನಿಗೆ ಓಡಿ ಬಂದು ನೋಡಲಾಗಿ ಅಲ್ಲಿ ತನ್ನ ಹೆಂಡತಿ ಹಾಗೂ ಮಗ ಸೋಮನಾಥನ ಶವಗಳು ರಕ್ತಸಿಕ್ತವಾಗಿ ಬೇರೆ ಬೇರೆಯಾಗಿ ಇದ್ದವು. ಕೂಡಲೇ ನಿಂಗಪ್ಪ ಇಳಕಲ್ ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯದಲ್ಲಿದ್ದ ಇಳಕಲ್ ಪೊಲೀಸ್ ಠಾಣೆ ಪಿಎಸ್ಐ ಸತ್ತಿಗೌಡರರವರಿಗೆ ನಡೆದ ಘಟನೆ ಬಗ್ಗೆ ವಿವರಿಸಿದಾಗ ನಂತರ ಪಿಎಸ್ಐ ಸತ್ತಿಗೌಡರ ಹಾಗೂ ತಮ್ಮ ಠಾಣಾ ಸಿಬ್ಬಂದಿಯವರೊಂದಿಗೆ ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಇಳಕಲ್ ಠಾಣಾ ಸಿಪಿಐ ಸುನೀಲ ಸವದಿ, ಹುನಗುಂದು ಡಿವೈಎಸ್ಪಿ ವಿಶ್ವನಾಥ ಕುಲಕರ್ಣಿ, ಬಾಗಲಕೋಟ ಎಸ್ಪಿ ಅಮರನಾಥ ರೆಡ್ಡಿಯವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದು ಸ್ಥಳಕ್ಕೆ ಬಂದು ಶವ ಹಾಗೂ ಸ್ಥಳವನ್ನು ಪರಿಶೀಲಿಸಿ ಹತ್ಯೆಗೆ ಸಂಬಂಧಿಸಿದ ಆರೋಪಿಗಳಗಳನ್ನು ಶೀಘ್ರವೇ ಬಂಧಿಸುವಂತೆ ಮಾರ್ಗದರ್ಶನ ನೀಡಿದರು. ನಂತರ ನಿಂಗಪ್ಪ ಗೋನಾಳ ಇಳಕಲ್ ಠಾಣಾ ಪಿಎಸ್ಐರವರಿಗೆ ಲಿಖಿತ ದೂರು ನೀಡಿದ್ದು, ದೂರು ದಾಖಲಿಸಿಕೊಂಡ ಪಿಎಸ್ಐ ಸತ್ತಿಗೌಡರರವರು ಘಟನೆಗೆ ಸಂಬಂಧಿಸಿದ ಆರೋಪಿಗಳ ಪತ್ತೆಗೆ ಜಾಲ ಬೀಸಿದರು. ಘಟನೆ ನಡೆದ ಕೆಲವೇ ಘಂಟೆಗಳಲ್ಲಿ ಸದರಿ ಆರೋಪಿಗಳಾದ ಸಣ್ಣಸೋಮಪ್ಪ ಗೋನಾಳ, ಮುದಿಯಪ್ಪ ಗೋನಾಳ, ಹನುಮಂತ ಗೋನಾಳ ಹಾಗೂ ರೇಣುಕಾರನ್ನು ವಶಕ್ಕೆ ಪಡೆದು ವಿಚಾರಿಸಲಾಗಿ ಆರೋಪಿಗಳು ಮಾಡಿದ ಕೃತ್ಯ ಒಪ್ಪಿಕೊಂಡಿದ್ದು, ಇನ್ನು ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ. ಸದರಿ ಬಂಧಿತ ಆರೋಪಿಗಳನ್ನು ನ್ಯಾಯಾಂಗ ಬಂಧನಕೆ ಒಪ್ಪಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ☯




ಘಟನಾ ಸ್ಥಳದಲ್ಲಿ ಪಂಚನಾಮೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳು

# ಸಂಚಾರಿ ಪೊಲೀಸರ ಅಮಾನವೀಯತೆಯ ಹಿಂದಿದೆ ವರ್ಗಾವಣೆ ದಂಧೆಯ ಕರಾಳ ಮುಖ....?!

**ವಾಣಿ-ಅಶೋಕ್ ಪುತ್ರಿ ಹೃತೀಕ್ಷ್ಗೆ ನಾಯಿ ಕಚ್ಚಿತ್ತು. ಹೀಗಾಗಿ ಹಳ್ಳಿಯಿಂದ ಮಗುವನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಸ್ವರ್ಣಸಂದ್ರ ಬಳಿ ಟ್ರಾಫಿಕ್ ಪೊಲೀಸರು ಹೆಲ್ಮೆಟ್ ತಪಾಸಣೆಗೆಂದು ಬೈಕ್ ಅಡ್ಡಗಟ್ಟಿದ್ದಾರೆ. ಈ ವೇಳೆ ಬೈಕ್‌ನಲ್ಲಿದ್ದ ತಂದೆ, ತಾಯಿ ಹಾಗೂ ಮಗು ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಕೆಳಗೆ ಬಿದ್ದ ಪರಿಣಾಮ ಹೃತೀಕ್ಷಳ ತಲೆಗೆ ಬಲವಾದ ಪೆಟ್ಟು ಬಿದ್ದಿದೆ. ತೀವ್ರ ರಕ್ತಸ್ರಾವದಿಂದ ಮಗು ಸ್ಥಳದಲ್ಲೇ ಜೀವ ಬಿಟ್ಟಿದೆ... ಈ ಸಾವು ಅನ್ಯಾಯವೇ?**




ಹೃತೀಕ್ಷ, ಮೃತ ಮಗು

ಕರ್ನಾಟಕ ಸರ್ಕಾರದ ಲೂಟಿ ಕಾರ್ಯಕ್ರಮಕ್ಕೆ ಮಂಡ್ಯದಲ್ಲಿ ಹಸುಗೂಸೊಂದು ಪ್ರಾಣ ಕಳೆದುಕೊಂಡಿದೆ. ನಾವಿದಕ್ಕೆ ಸಂಚಾರ ಪೊಲೀಸರನ್ನು ಬೈದು ಕೋಪ ತಣಿಸಿಕೊಳ್ಳುತ್ತಿದ್ದೇವೆ. ನಮ್ಮ ಆಕ್ರೋಶವನ್ನು ಶಮನಗೊಳಿಸುವ ಔಷಧಿಯನ್ನು ನಮ್ಮ ಘನ ಸರ್ಕಾರ ಸಿದ್ಧಪಡಿಸಿಕೊಂಡು ಕುಳಿತಿದೆ. ಹೀಗಾಗಿ ಮಾನವೀಯತೆ ಇಲ್ಲದ ಮೂವರು ಎಎಸ್ಐಗಳನ್ನು ಅಮಾನತು ಮಾಡಿ, ನಮಗೆ ಚೆಂದದ ಟೋಪಿಯನ್ನು ಹಾಕಿ ಮತ್ತೆ ಲೂಟಿ ಕಾರ್ಯಕ್ರಮ ಮುಂದುವರಿಸುತ್ತಾರೆ.

ಆದರೆ ಇಂತಹ ಅಮಾನೀಯ ಘಟನೆಗಳಿಗೆ ಮೂಲ ಕಾರಣ ಹುಡುಕುವ ಪ್ರಯತ್ನವನ್ನೇ ಮಾಡುವುದಿಲ್ಲ, ಆದರೆ ಪ್ರಜ್ಞಾವಂತರೆನಿಸಿಕೊಂಡವರು ಕೂಡ ಸರ್ಕಾರದ ಗೂಗ್ಲಿಗೆ ಕ್ಲೀನ್ ಬೌಲ್ಡ್ ಆದರೆ ಕಷ್ಟವಾದೀತು. ಮಂಡ್ಯದ ಹೃದಯ



ವಿದ್ರಾವಕ ಘಟನೆಯ ಜತೆಗೆ ಒಮ್ಮೆ ಇಡೀ ರಾಜ್ಯವನ್ನು ನೆನಪಿಸಿಕೊಳ್ಳಿ ಹಾಗೂ ಕಳೆದೊಂದು ದಶಕಗಳ ವಿವಿಧ ಘಟನೆಯನ್ನು ಒಮ್ಮೆ ಅವಲೋಕಿಸಿ. ಆಗ ಸರ್ಕಾರದ ಬಣ್ಣ-ಬಣ್ಣದ ಎಷ್ಟು ಟೋಪಿ ನಮ್ಮ ತಲೆಯ ಮೇಲಿದೆ ಎನ್ನುವುದು ಗೊತ್ತಾಗುತ್ತದೆ.

ಮಂಡ್ಯದಲ್ಲಿನ ಘಟನೆಗೆ ಮೂಲ ಕಾರಣವಾಗಿದ್ದು ಸಂಚಾರ ಪೊಲೀಸರ ದಂಡ ವಸೂಲಿ ಕಾರ್ಯಕ್ರಮ ಎನ್ನುವುದನ್ನು ಮರೆಯಬೇಡಿ. ನಾನು ಗಮನಿಸಿದಂತೆ ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕದಲ್ಲಿ ಅಧಿಕಾರ ವಹಿಸಿಕೊಂಡ ಪ್ರತಿಯೊಬ್ಬ ಪೊಲೀಸ್ ಮಹಾನಿರ್ದೇಶಕರು ಒಂದು ಆದೇಶ ಹೊರಡಿಸಿದ್ದಾರೆ. ಅದರ ಪ್ರಕಾರ 'ಜನಸಾಮಾನ್ಯರ ಸಂಚಾರಕ್ಕೆ ಅಡ್ಡಿಯಾಗಿ ಸಂಚಾರ ಪೊಲೀಸರು ದಂಡ ವಸೂಲಿ ಮಾಡಬಾರದು ಹಾಗೂ ಸುಖಾಸುಮ್ಮನೇ ವಾಹನಗಳನ್ನು ಅಡ್ಡ ಹಾಕಿ ನಿಲ್ಲಿಸಿ ಕಾಟ ಕೊಡಬಾರದು' ಎನ್ನುವುದು ಆ ಸುತ್ತೋಲೆಗಳ ಪ್ರಮುಖಾಂಶವಾಗಿದೆ.

ಈ ರಾಜ್ಯದ ಯಾವುದಾದರೊಂದು ಸಂಚಾರ ಪೊಲೀಸ್ ಠಾಣೆಯಲ್ಲಿ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆ ನಾವು ಖುಷಿ ಪಡಬಹುದಿತ್ತು. ಪೊಲೀಸ್ ವಿಭಾಗದ ಮುಖ್ಯಸ್ಥರ ಆದೇಶವನ್ನೇ ಅವರ ಸಹೋದ್ಯೋಗಿಗಳು ಪಾಲಿಸುತ್ತಿಲ್ಲ ಎಂದಾದರೆ ಅದಕ್ಕೆ ಪ್ರಮುಖ ಕಾರಣ ಇರಲೇಬೇಕು. ಏಕೆಂದರೆ ಪೊಲೀಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳ ಆದೇಶಕ್ಕಿಂತ ದೊಡ್ಡ ನಿಯಮವಿರಲು ಸಾಧ್ಯವಿಲ್ಲ. ಪೊಲೀಸ್ ಮಹಾನಿರ್ದೇಶಕರ ಆದೇಶವನ್ನು ಮೀರಿಸುವ ಶಕ್ತಿ ಈ ರಾಜ್ಯದಲ್ಲಿರಬೇಕು ಅಥವಾ ಅದೇ ಇಲಾಖೆಯಿಂದ ಇನ್ನೊಂದು ಮೌಖಿಕ ಸೂಚನೆ ಬಂದಿರಬೇಕು. ಇವೆರಡನ್ನು ಬಿಟ್ಟು ಬೇರೆ ಸಾಧ್ಯತೆಗಳಿಗೆ ಅವಕಾಶವೇ ಇಲ್ಲ.

ನಿನ್ನೆ ಮಂಡ್ಯದಲ್ಲಿ ನೋಡಿದ ಘಟನೆಗೆ ಸಂಬಂಧಿಸಿದ ಸಂಚಾರ ಪೊಲೀಸರ ಹಿಮ್ಮೇಳ ಹಾಗೂ ಮುಮ್ಮೇಳವು ರಾಜ್ಯಾದ್ಯಂತ ಏಕರೂಪದಲ್ಲ ಕಾರ್ಯನಿರ್ವಹಿಸುತ್ತಿದೆ. ರಸ್ತೆ ಸುರಕ್ಷತಾ ಅಭಿಯಾನ ಮಾಡುವ ಸಂಚಾರ ಪೊಲೀಸರು, ಅಕ್ಷರಶಃ ಯಮಕಿಂಕರರಾಗುತ್ತಿದ್ದಾರೆ. ಇದು ಕಳೆದೊಂದು ದಶಕದಿಂದ ಅತಿಯಾಗಿಯೇ ನಡೆದುಕೊಂಡು ಬರುತ್ತಿದೆ.

ಕೆಲ ವರ್ಷಗಳ ಹಿಂದೆ ಚಿತ್ರದುರ್ಗ-ಶಿರಾ ನಡುವಿನ ರಾಷ್ಟ್ರೀಯ ಹೆದ್ದಾರಿ ಮಧ್ಯೆಯೇ ಹಣ ವಸೂಲಿ ಶುರು ಮಾಡಿದ್ದರು. ಒಂದು ಬದಿಯಲ್ಲಿನ ಮೂರು ಪಥಗಳಲ್ಲಿ ಒಂದನ್ನು ಬಂದ್ ಮಾಡಿಕೊಂಡು ರಸ್ತೆಗೆ ಅಡ್ಡ ಬಂದು ವೇಗದಲ್ಲಿ ಚಲಿಸುತ್ತಿದ್ದ ವಾಹನಗಳನ್ನು ಅಡ್ಡ ಹಾಕುತ್ತಿದ್ದರು. ಇದಾದ ಕೆಲವೇ ವರ್ಷಗಳಲ್ಲಿ ಕೋವಿಡ್ ಅವಧಿಯಲ್ಲಿ ಶಿರಸಿ-ಸಿದ್ದಾಪುರ ರಸ್ತೆಯಲ್ಲಿಯೂ ಇದೇ ರೀತಿ ಮಧ್ಯ ರಸ್ತೆಗೆ ಓಡಿ ಬಂದು ವಾಹನಗಳನ್ನು ಅಡ್ಡ ಹಾಕುತ್ತಿದ್ದರು. ಜನಾಕ್ರೋಶ ಹೆಚ್ಚಾದಾಗ ಮಾತ್ರ ಇಂತಹ ವಸೂಲಿಗೆ ಕಡಿವಾಣ ಹಾಕುತ್ತಿದ್ದರು. ಹಾಗಂದ ಮಾತ್ರಕ್ಕೆ ರಾಜ್ಯದ ಉಳಿದೆಡೆ ಈ ವಸೂಲಿ ನಿಂತಿದೆಯೆಂದಲ್ಲ, ನಾನೇ ಖುದ್ದಾಗಿ ಇಂತಹ ಅವ್ಯವಸ್ಥೆಗಳ ವಿರುದ್ಧ ಹತ್ತಾರು ದೂರುಗಳನ್ನು ದಾಖಲಿಸಿದ್ದೇನೆ. ಸಾವಿರಾರು ಜನರು ಈ ಕೆಲಸವನ್ನು ಮಾಡಿರಬಹುದು. ಖುದ್ದಾಗಿ ಪೊಲೀಸ್ ಮಹಾ



ನಿರ್ದೇಶಕರಿಂದ ಆದೇಶ ಬಂದರೂ ಸರಿಯಾಗಿಲ್ಲ ಎಂದಾದರೆ ನಿಖರವಾದ ಕಾರಣ ಬೇರೆಯೇ ಇರುತ್ತದೆ.

ಈ ರಾಜ್ಯವನ್ನು ಎರಡು ಪ್ರಮುಖ ವಿಚಾರಗಳು ಕಾಡುತ್ತಿವೆ. ಬಡ ಹಾಗೂ ಮಧ್ಯಮ ವರ್ಗದ ಜನರನ್ನು ತಿಗಣೆಗಳ ರೀತಿ ಇವು ರಕ್ತ ಹೀರುತ್ತಿವೆ. ರಾಜ್ಯ ಸರ್ಕಾರದ ಅಲಿಖಿತ ಟಾರ್ಗೆಟ್ ಹಾಗೂ ವರ್ಗಾವಣೆಯು ಸಾರ್ವಜನಿಕರ ಬಹುತೇಕ ಸಮಸ್ಯೆಗೆ ಕಾರಣವಾಗಿದೆ. ಇದೇ ಕಾರಣದಿಂದ ಹೈಕೋರ್ಟ್, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾ ನಿರ್ದೇಶಕರ ಆದೇಶಗಳು ಈ ಅಲಿಖಿತ ವ್ಯವಸ್ಥೆಯ ಮುಂದೆ ನಗಣ್ಯವಾಗಿವೆ. ಟಾರ್ಗೆಟ್



ಹಾಗೂ ವರ್ಗಾವಣೆಯ ಭಾಗವಾಗಿರುವ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿ ಮಾನವೀಯತೆ ಬಿಟ್ಟು ವರ್ತಿಸುವಂಥ ಸ್ಥಿತಿ ನಿರ್ಮಾಣ ಮಾಡಿದೆ.

### ವರ್ಗಾವಣೆ ಅಂಡ್ ಟಾರ್ಗೆಟ್

2018ರ ಚುನಾವಣೆಯ ನಂತರ ಈ ರಾಜ್ಯದಲ್ಲಿನ ಬಹುತೇಕ ಆಯಕಟ್ಟಿನ ಹುದ್ದೆಗಳಿಗೆ ಹರಾಜು ಪ್ರಕ್ರಿಯೆ ಶುರುವಾಗಿದೆ. ಮೊದಲೆಲ್ಲ ಅತ್ಯಂತ ಪ್ರಭಾವಿ ಹುದ್ದೆಗಳ ವರ್ಗಾವಣೆ ದಂಧೆ ನಡೆಯುತ್ತಿತ್ತು. ಆದರೆ ಕಳೆದ ಆರೇಳು ವರ್ಷಗಳಿಂದ ಬಿಕರಿಯಾಗದ ಆಯಕಟ್ಟಿನ ಹುದ್ದೆಗಳು ತೀರಾ ಕಡಿಮೆ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಪೂರಕವಾಗಿ ಅದೆಷ್ಟೋ ವರದಿಗಳು ಮಾಧ್ಯಮದಲ್ಲಿ ಪ್ರಕಟವಾಗಿವೆ ಹಾಗೂ ವಿಧಾನಸಭೆಯಲ್ಲಿ

☞ 13

## ಕ್ರೈಂ ಪ್ರಪಂಚ

# ಅವಳು ಮತ್ತು ಸಾವು

ರಾತ್ರಿ ಹತ್ತೂವರೆ!

ನಗರದ ಯಾವುದೋ ಒಂದು ಬಡಾವಣೆಯಲ್ಲಿರುವ ತೀರಾ ಸಾಮಾನ್ಯ ಮನೆ. ಆ ಮನೆಯಲ್ಲಿ ಯಾರೂ ಇಲ್ಲ. ಎಲ್ಲರೂ ಹಳ್ಳಿಯಲ್ಲಿ ನಡೆಯುತ್ತಿರುವ ಜಾತ್ರೆಗೆ ಹೋಗಿದ್ದಾರೆ.

ಅವಳು ಡೋರ್‌ಲಾಕ್ ಓಪನ್ ಮಾಡಿಕೊಂಡು ಮನೆಯೊಳಗೆ ಬಂದಳು.

ಟೇಬಲ್ ಲ್ಯಾಂಪ್ ಆನ್ ಮಾಡಿದಳು.

ಪತ್ರ ಬರೆಯುತ್ತಿದ್ದಾಳೆ. ನಿಮಿಷಗಳು ಉರುಳುತ್ತಿವೆ. ಆ ಮನೆಗೆ ಟೂ ವೀಲರ್‌ನಲ್ಲಿ ಒಬ್ಬ ಯುವಕ ಬಂದನು. ಮನೆಯ ಬಾಗಿಲು ಓರೆಯಾಗಿ ತೆರೆದಿದೆ.

ದೀಪ ಬೆಳಗುತ್ತಿದೆ. ಅವನು ಒಳಗೆ ಬಂದನು. ಹತ್ತು ನಿಮಿಷಗಳ ಕಾಲ ಅಲ್ಲಿದ್ದು ಅಲ್ಲಿಂದ ಹೊರಗೆ ಬಂದು ಟೂ ವೀಲರ್ ಸ್ಟಾರ್ಟ್ ಮಾಡಿ ಮನೆಯ ಕಡೆ ಹೊರಟನು.

●●●

ಬೆಳಗಿನ ಎಂಟು ಗಂಟೆ. ಫೋನ್ ಕಾಲ್ ಬಂದಿತು. ಪಿ.ಸಿ.ಗಳಲ್ಲಿ ಒಬ್ಬರು ಅಟೆಂಡ್ ಮಾಡಿ ಮಾತಾಡಿದರು.

''ಸಾರ್... ಚಂದ್ರಿಕ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನೀವು ಬೇಗ ಬನ್ನಿ.''

''ಯಾವ ಚಂದ್ರಿಕ?''

''ಗಾರೆ ನಂಜಪ್ಪನ ಮಗಳು.''

ಪಿ.ಸಿ. ರೇಗುತ್ತಾ ''ಏ... ಏ... ಮೊದಲು ಆ ಮನೆಯ ವಿಳಾಸ ಮತ್ತು ನಿನ್ನ ಬಗ್ಗೆ ವಿವರವಾಗಿ ಹೇಳು'' ಎಂದು ರೇಗಿದರು.

''ಸಾರ್... ಬ್ಯಾಟರಾಯನಪುರದ ಸರ್ಕಲ್‌ನ ಬಲಭಾಗದ ರಸ್ತೆಯಲ್ಲಿ ಆಂಜನೇಯನ ಗುಡಿ ಇದೆ. ಆ ಮನೆ ಎದುರಿಗೆ ಇದೆ. ಅಲ್ಲಿ ಜನಗಳು ಸೇರಿದ್ದಾರೆ.''

ಪಿ.ಸಿ. ವಿವರಗಳನ್ನು ಬರೆದುಕೊಳ್ಳುತ್ತಾ 'ಓಕೆ ಈಗ ನೀವ್ಯಾರು? ಆತ್ಮಹತ್ಯೆ ಮಾಡಿಕೊಂಡಿರೋದು ನಿಮಗೆ ಹೇಗೆ ಗೊತ್ತಾಯಿತು ಅಂತ ಹೇಳಿ.''

''ನಾನು ಆ ಮನೆಗೆ ಪ್ರತಿದಿನ ಬೆಳಿಗ್ಗೆ ಹಾಲು ಕೊಟ್ಟು ಪೇಪರ್ ಹಾಕ್ತೀನಿ. ಇವತ್ತೂ ಸಹ ಅದೇ ರೀತಿ ಮಾಡಿದೆ. ಮನೆ ಬಾಗಿಲು ತೆರೆದಿತ್ತು . ಎಲ್ಲಾ ವಿದ್ಯುತ್ ದೀಪಗಳು ಬೆಳಗುತ್ತಿದ್ದರಿಂದ ನಂಗೆ ಅನುಮಾನ ಬಂದು ಒಳಗೆ ಹೋಗಿ ನೋಡ್ದೆ. ಅಲ್ಲಿ ಚಂದ್ರಿಕ ಆತ್ಮಹತ್ಯೆ ಮಾಡಿಕೊಂಡಿರೋದು ತಿಳಿಯಿತು'' ಎಂದು ಹೇಳಿದನು.

''ನೀನು ಅಲ್ಲೇ ಇರಬೇಕು. ಮೊದಲ ಸಲ ಶವ ನೋಡಿರೋದು ನೀನೇ ಆಗಿರೋದ್ರಿಂದ ನಿನ್ನ ಹೇಳಿಕೆ ತಗೋಬೇಕು.''

''ನೀವು ಬರುವುದರಲ್ಲಿ ನಾನು ನಾನು ಹಾಲು, ಪೇಪರ್ ಹಂಚಿ ಬರ್ತೀನಿ.''

●●●

ಗಲ್ಲಿಯೊಂದರಲ್ಲಿ ಇರುವ ಸಿಂಗಲ್ ಬೆಡ್‌ರೂಮಿನ ಸಾಧಾರಣ ಮನೆ. ಚಂದ್ರಿಕಾಳ ಕುಟುಂಬದವರು ಬಡವರು ಎಂದು ಆ ಮನೆಯ ಸ್ಥಿತಿಯಿಂದ ಗೊತ್ತಾಗುತ್ತಿದೆ.

ಜನಗಳು ಗುಂಪು ಸೇರಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡಿರೋದು ಬಡಕುಟುಂಬದ ಸಾಮಾನ್ಯ ಯುವತಿ ಆಗಿರೋದ್ರಿಂದ ತುಂಬಾ ಮಂದಿ ಸುದ್ದಿ ಮಾಧ್ಯಮದವರು ಬಂದಿಲ್ಲ.

ಎರಡು ಪೊಲೀಸ್ ಜೀಪುಗಳು ನಿಂತಿವೆ. ಪಿ.ಸಿ.ಗಳು ಜನಗಳನ್ನು ದೂರ ಕಳಿಸುತ್ತಿದ್ದಾರೆ. ಪೊಲೀಸ್ ಅಧಿಕಾರಿ ಮಾಧವನ್ ಈಗ ಮನೆ ಒಳಗೆ ಹೋಗುತ್ತಿದ್ದಾನೆ.

ಫೋಟೋಗ್ರಾಫರ್, ಡಾಕ್ಟರ್ ಮತ್ತು ಫಿಂಗರ್ ಪ್ರಿಂಟ್‌ನವರು ಬಂದಿದ್ದಾರೆ.

ಶವ ರೂಮಲ್ಲಿದೆ! ನೆಲದ ಮೇಲೆ ಸ್ಟೂಲ್ ಬಿದ್ದಿದೆ. ಫ್ಯಾನಿನ ಕೊಂಡಿಗೆ ಹಗ್ಗಕಟ್ಟಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಶವ ಹಗ್ಗದಲ್ಲಿ ನೇತಾಡುತ್ತಿದೆ. ಆಕರ್ಷಕ ಸೌಂದರ್ಯ ಇರುವ ಸುಮಾರು ಮುವತ್ತರ ಪ್ರಾಯದ ಅವಳು ಸತ್ತಿದ್ದಾಳೆ. ಮುವತ್ತು ವರ್ಷಗಳಾಗಿದ್ದರೂ ಸಹ ಇಪ್ಪತ್ತರ ಪ್ರಾಯದವಳಂತೆ ಕಂಡು ಬರುತ್ತಿದ್ದಾಳೆ.

ಅದೊಂದು ಸಣ್ಣ ಕೊಠಡಿ. ಮಂಚ, ಸಣ್ಣ ಗಾತ್ರದ ಗೋದ್ರೇಜ್ ಬೀರು, ಟೇಬಲ್, ಕುರ್ಚಿಗಳಿವೆ. ಮಂಚದ ಎದುರಿಗೆ ಕನ್ನಡಿ ಮತ್ತು ಡ್ರೆಸ್ಸಿಂಗ್ ಟೇಬಲ್ ಇದೆ. ಪೊಲೀಸ್ ಅಧಿಕಾರಿ ಮಾಧವನ್ ತುಂಬಾ ಎಚ್ಚರಿಕೆಯಿಂದ ಫೋಟೋಗ್ರಾಫರ್, ಡೆಡ್‌ಬಾಡಿ ನೇತಾಡುತ್ತಿರುವ ಹಲವಾರು ಭಂಗಿಗಳನ್ನು ತೆಗೆದ ನಂತರ ಶವವನ್ನು ಪಿ.ಸಿ.ಗಳು ಕುಣಿಕೆ ಸಡಿಲಿಸಿ ನೆಲದ ಮೇಲೆ ಮಲಗಿಸಿದರು.

ಹಳ್ಳಿ ಜಾತ್ರೆಗೆ ಹೋಗಿದ್ದ ತಾಯಿ ಕಮಲಾದೇವಿ ಮತ್ತು ಕೊನೆಯ ತಮ್ಮ ಶಂಭುನಾಥ ಆಟೋದಲ್ಲಿ ಬಂದರು. ಮನೆಯ ಮಾಲೀಕರು ಫೋನ್ ಮಾಡಿ ಹೇಳಿದ್ದರಿಂದ ಕೂಡಲೇ ಹೊರಟು ಬಂದಿದ್ದಾರೆ.

ಕಮಲಾದೇವಿ ಎದೆ ಬಡಿದುಕೊಂಡು ಅಳುತ್ತಿದ್ದಾರೆ.

ಶಂಭುನಾಥ ಸಹ ಅಳುತ್ತಿದ್ದಾನೆ.

ಕಮಲಾದೇವಿ ''ಈ ಸಂಸಾರಕ್ಕೆ ಆಧಾರ ಸ್ತಂಭದ ರೀತಿ ಇದ್ದವಳು ಚಂದ್ರಿಕ. ಮೂವರು ತಂಗಿಯರು ಮತ್ತು ಇಬ್ಬರು ತಮ್ಮಂದಿರಿಗೆ ಬದುಕಿನ ಭವಿಷ್ಯ ರೂಪಿಸಲು ಹಗಲು-ರಾತ್ರಿ ದುಡಿದಳು. ಅವಳ ಜವಾಬ್ದಾರಿ ಮುಗಿದು ಮದುವೆ ಮಾಡಿಸಬೇಕು ಅಂತ ನಾನೆಲ್ಲಾ ಅಂದುಕೊಂಡಿದ್ದೆವು. ಆದರೆ ಇಷ್ಟು ಬೇಗ ಬದುಕನ್ನೇ ಮುಗಿಸಿಕೊಂಡಿದ್ದಾಳೆ. ಆತ್ಮಹತ್ಯೆ ಮಾಡಿಕೊಳ್ಳುವಂತಾದ್ದು ಅವಳಿಗೆ ಏನಾಗಿತ್ತು ?

ತಮ್ಮ ಶಂಭುನಾಥ ದುಃಖದಿಂದ ''ಈ ವರ್ಷದ ನನ್ನ ವಿದ್ಯಾಭ್ಯಾಸ ಮುಗಿಯಲು ಅಕ್ಕ ತುಂಬಾ ಹಣ ಖರ್ಚು ಮಾಡಿದ್ದಳು. ನಾನು ಅವಳಿಗೆ ಭರವಸೆ ನೀಡಿದ್ದೆ. ಇಷ್ಟು ವರ್ಷ ನೀನು ದುಡಿಮೆ ಮಾಡಿದ್ದು ಸಾಕು. ನಿನಗೆ ನಾನೇ ಗಂಡು ನೋಡಿ ಮದುವೆ ಮಾಡ್ತೀನಿ. ನಮ್ಮೆಲ್ಲರಿಗೂ ತಾಯಿ ಆಗಿರುವ ನೀನು. ನೀನು ಸುಖವಾಗಿರಬೇಕು ಅಂತ ಹೇಳಿದ್ದೆ.''

ಚಂದ್ರಿಕ ತ್ಯಾಗಮಯಿ!

ಮುವತ್ತು ವರ್ಷಗಳಾಗಿದ್ದರೂ ಈ ಅಪರೂಪದ ಚೆಲುವೆಯನ್ನ ಮದುವೆಯಾಗಲು ತುಂಬಾ ಮಂದಿ ಹಂಬಲಿಸಿದ್ದರೂ ಸಹ, ತನ್ನ ಒಡಹುಟ್ಟಿದವರ ಭವಿಷ್ಯ ರೂಪಿಸಲು ಮದುವೆ ನಿರಾಕರಿಸಿ ದುಡಿದು ಈ ಸಂಸಾರದ ಆಧಾರದ ಸ್ತಂಭವಾಗಿದ್ದಳು.

ಇದು ಸಂಬಂಧಿಕರ ಮಾತುಗಳು.

ಹತ್ತು ನಿಮಿಷಗಳ ಅವಧಿಯಲ್ಲಿ ಎರಡು ಕಾರುಗಳಲ್ಲಿ ಬಂದಿದ್ದರು ಚಂದ್ರಿಕಾಳ ವಿವಾಹಿತ ತಂಗಿಯರು. ಇಬ್ಬರು ತಂಗಿಯರಿಗೆ ಮತ್ತು ಒಬ್ಬ ತಮ್ಮನಿಗೆ ವಿವಾಹ ಮಾಡಿಸಿದ್ದಳು. ಆದರೆ ಈಗ ಎಲ್ಲರೂ ಗೋಳಾಡುತ್ತಿದ್ದಾಳೆ. ತಂಗಿಯರ ಪತಿದೇವರು, ಸಣ್ಣ ಮಕ್ಕಳು, ತಮ್ಮ ಮತ್ತು ಅವನ ಹೆಂಡತಿ ಗೋಳಾಡುತ್ತಿದ್ದಾರೆ. ಎಲ್ಲರ ಬದುಕನ್ನು ಕಟ್ಟಿಕೊಟ್ಟವಳು ಈ ಚಂದ್ರಿಕ. ಹಾಗಾಗಿ ಅವಳ ಅನಿರೀಕ್ಷಿತ ಸಾವು ಎಲ್ಲರಿಗೂ ಆಘಾತ ಮತ್ತು ದುಃಖವನ್ನು ಉಂಟು ಮಾಡಿತ್ತು ಎಂಬುದು ನಿಜ.

ಇಬ್ಬರು ತಮ್ಮಂದಿರಲ್ಲಿ ಒಬ್ಬ ತಮ್ಮ ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು. ಅವನು ತನ್ನ ಸಹದ್ಯೋಗಿ ಯುವತಿಯನ್ನು ಲವ್ ಮಾಡಿ ಮದುವೆ ಆಗಿ ಬೇರೆ ಊರಲ್ಲಿ ಸಂಸಾರ ಮಾಡುತ್ತಿದ್ದನು. ಕೊನೆಯ ತಮ್ಮ ಶಂಭುನಾಥ ಮತ್ತು ತಾಯಿ ಕಮಲಾದೇವಿ ಚಂದ್ರಿಕಾಳ ಜೊತೆ ಇದ್ದರು. ಹಾಗಾಗಿ ಪೊಲೀಸ್ ಅಧಿಕಾರಿ ಅವರನ್ನು ಪ್ರಶ್ನೆ ಮಾಡುವುದು ಅನಿವಾರ್ಯವಾಯಿತು.

ಇನ್‌ಸ್ಪೆಕ್ಟರ್ ಮಾಧವನ್ ''ನೀವು ಊರಿಗೆ ಹೋಗಿದ್ದು ಯಾವಾಗ?''

ತಾಯಿ ಕಮಲಾದೇವಿ ''ನೆನ್ನೆ ಬೆಳಿಗ್ಗೆ ಎಂಟು ಗಂಟೆಗೆ ಬೈಲಹಳ್ಳಿಯಲ್ಲಿ ರಥೋತ್ಸವ ಇತ್ತು . ಹಾಗಾಗಿ ಅಲ್ಲಿಗೆ ಹೋಗಿದ್ದೆವು.''

''ನಿಮ್ಮ ಮಗಳು ಆಗ ಎಲ್ಲಿದ್ದಳು?''

''ಅವಳು ಕೆಲಸ ಮುಗಿಸಿಕೊಂಡು ರಾತ್ರಿ ಹನ್ನೊಂದು ಗಂಟೆಗೆ ಬಂದಳು. ತುಂಬಾ ಆಯಾಸವಾಗಿದ್ದರಿಂದ ಊಟ ಮಾಡದೆ ಮಲಗಿದ್ದಳು. ಬೆಳಿಗ್ಗೆ ನಾವು ಎದ್ದು ರೆಡಿಯಾಗುತ್ತಿದ್ದಾಗ ಅವಳು ರೂಮಿನಿಂದ ಬಂದು ನಮ್ಮಿಬ್ಬರ ಜಾತ್ರೆ ಖರ್ಚಿಗೆ ಹಣ ಕೊಟ್ಟಿದ್ದಳು.''

''ಆಗ ಚಂದ್ರಿಕ ಹೇಗಿದ್ದಳು?''

ಶಂಭುನಾಥ ''ಹೇಗಿದ್ದಳು ಅಂದರೆ ಯಾವ ಅರ್ಥದಲ್ಲಿ ಸಾರ್?''

''ಅವಳು ನಾರ್ಮಲ್ ಆಗಿದ್ಲಾ ಅಥವಾ ಡಿಪ್ರೆಸ್ ಆಗಿದ್ಲಾ?''

''ನಾರ್ಮಲ್ ಆಗಿ ಇದ್ಲು. ಬೆಳಿಗ್ಗೆ ನಮ್ಮ ಜೊತೆ ನಗು, ನಗುತ್ತಾ ಮಾತಾಡುತ್ತಲೇ ಹಳ್ಳಿಗೆ ಕಳಿಸಿಕೊಟ್ಲು.''

''ಚಂದ್ರಿಕಾ ಕೆಲಸ ಮಾಡುತ್ತಿದ್ದದ್ದು ಯಾವ ಕಂಪನಿಯಲ್ಲಿ?''

''ಮಾರುತಿನಗರದ ಪ್ರೈವೇಟ್ ಕಂಪನಿಯಲ್ಲಿ ಅಂತ ಆಗಾಗ ಹೇಳುತ್ತಿದ್ಲು.''

''ಯಾವ ಕಂಪನಿ ಅಂತ ಕೇಳಿರಲಿಲ್ವ?''

''ಕೇಳಿದ್ದೆವು ಆದರೆ ಹೇಳಿರಲಿಲ್ಲ.''

''ಯಾಕೆ ಹೇಳಿರಲಿಲ್ಲ?''

ಶಂಭುನಾಥ ''ಅಕ್ಕ ನಗುತ್ತಾ ವ್ಯಂಗ್ಯವಾಗಿ ಹೇಳಿದ್ದಳು. ಆ ಕಂಪನಿಯ ವಿವರಗಳನ್ನು ಹೇಳಲು ಅದೇನು ಸೆಂಟ್ರಲ್ ಗೌರ್ನಮೆಂಟ್ ಕೆಲಸ ಅಲ್ಲ. ಯಾವತ್ತು ಬೇಕಾದರೂ ಕೆಲಸದಿಂದ ತೆಗೆದು ಹಾಕಬಹುದು ಅಂತ ಹೇಳುತ್ತಿದ್ಲು.''

''ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ಲು?''

''ಎರಡು-ಮೂರು ಸಲ ಕಂಪನಿ ಬದಲಿಸಿದ್ದೇನೆ ಅಂತ ಹೇಳಿದ್ಲು. ಇತ್ತೀಚೆಗೆ ಎರಡು ವರ್ಷದಿಂದ ಮಾರುತಿನಗರದಲ್ಲಿದ್ದಳು.''

''ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಯಾಕೆ, ಏನು ಅಂತ ಕಾರಣವನ್ನು ಊಹಿಸಲು ಸಾಧ್ಯವೆ'' ಎಂದು ಕೇಳಿದನು.

''ಅವಳ ಜೊತೆ ನಾವ್ಯಾರೂ ಸಲಿಗೆಯಿಂದ ಮಾತಾಡುತ್ತಿರಲಿಲ್ಲ. ನಾವು ಯಾವಾಗ ಏನು ಕೇಳಿದರೂ ಕೊಡಿಸುತ್ತಿದ್ದಳು. ನಮ್ಮ ಅಪ್ಪ ಬದುಕಿದ್ದರೂ ಸಹ ಇಷ್ಟರಮಟ್ಟಿಗೆ ನಮ್ಮನ್ನು ಸಾಕುತ್ತಿರಲಿಲ್ಲ.''

ಪೊಲೀಸ್ ಅಧಿಕಾರಿ ಮಾಧವನ್ ''ನಿಮ್ಮ ಅಕ್ಕ ಯಾರನ್ನಾದರೂ ಲವ್ ಮಾಡುತ್ತಿದ್ಲಾ? ಅವನನ್ನು ಮದುವೆ ಆಗಲು ಆಸೆ ಇದೆ ಅಂತ ನಿಮ್ಮ ಹತ್ತಿರ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ವ್ಯಕ್ತಪಡಿಸಿದ್ದಳಾ?''

ಆ ಕುಟುಂಬದವರೆಲ್ಲರೂ ಈಗ ಪರಸ್ಪರ ಮುಖ ನೋಡಿಕೊಂಡರು. ನಂತರ ಎರಡನೆಯ ತಮ್ಮ ''ಸಾರ್... ಪ್ರೀತಿ-ಪ್ರೇಮ ಅಂತ ಸ್ಪಷ್ಟವಾಗಿ ಗೊತ್ತಿಲ್ಲ ಸಾರ್. ಆದರೆ ನಮ್ಮ ಮನೆಗೆ ಆಗಾಗ ಬರುತ್ತಿದ್ದ ನಮ್ಮ ಕುಟುಂಬಕ್ಕೆ ಆತ್ಮೀಯನಾಗಿದ್ದ ಮಹೇಂದ್ರನ ಜೊತೆ ಸಲಿಗೆಯಿಂದ ಇರುತ್ತಿದ್ದಳು. ಅವನು ಮನೆಗೆ ಬಂದರೆ ನಗು ನಗುತ್ತಾ ಹರಟೆ ಹೊಡೆಯುತ್ತಿದ್ದಳು. ಅವನ ಜೊತೆ ತಿಂಡಿ, ಊಟ ಮಾಡುತ್ತಾ ರಾಜಕೀಯದ ಸುದ್ದಿ ಬಗ್ಗೆ ಮಾತಾಡುತ್ತಾ , ಟಿ.ವಿ. ಪ್ರೋಗ್ರಾಂ ನೋಡುತ್ತಿದ್ದಳು. ಅವನು ಈ ಮನೆಯಲ್ಲಿ ಆಗಾಗ ಉಳಿದುಕೊಳ್ಳುತ್ತಿದ್ದನು. ಅವನ ತಂದೆ, ತಾಯಿ ಸಹ ಈ ಮನೆಗೆ ಬರುತ್ತಿದ್ದರು. ನಾವೆಲ್ಲರೂ ಅವನ ಮನೇಲಿ ಯಾವ ಫಂಕ್ಷನ್ ಮಾಡಿದ್ರು ಹೋಗುತ್ತಿದ್ದೆವು'' ಎಂದನು.

ಪೊಲೀಸ್ ಅಧಿಕಾರಿ ''ಆ ಮಹೇಂದ್ರ ಯಾರು? ಅವನ ಮನೆ ಇಲ್ಲವೆ? ಆತ್ಮಹತ್ಯೆ ಸಂಗತಿ ಬಹಿರಂಗವಾಗಿದ್ದರೂ ಸಹ ಅವನು ಯಾಕೆ ಇಲ್ಲಿಗೆ ಬಂದಿಲ್ಲ'' ಎಂದು ಕೇಳಿದನು.

''ಅವನ ಮನೆ ಇದೇ ಬೀದಿಯಲ್ಲಿದೆ. ಊರಲ್ಲಿ ಇಲ್ಲ ಅಂತ ಕಾಣುತ್ತೆ . ಇಲ್ಲದಿದ್ದರೆ ಮನೆಯವರೆಲ್ಲಾ ಬಂದಿರುತ್ತಿದ್ದರು.''

''ಅವನು ಎಲ್ಲಿ ಕೆಲಸ ಮಾಡುತ್ತಿದ್ದಾನೆ?''

''ಪ್ರೈವೇಟ್ ಸ್ಕೂಲ್ ಟೀಚರ್. ಇಂದಿರಾನಗರದಲ್ಲಿ ಸ್ಕೂಲ್ ಇದೆ.''

''ಎಷ್ಟು ವರ್ಷಗಳಿಂದ ಈ ಕುಟುಂಬದ ಸಂಪರ್ಕ ಪಡೆದಿದ್ದಾನೆ.''

''ಸುಮಾರು ಹನ್ನೆರಡು ವರ್ಷಗಳಿಂದ.''

ಪೊಲೀಸ್ ಅಧಿಕಾರಿ ಎಲ್ಲರ ಬೆರಳು ಗುರುತುಗಳನ್ನು ಪಡೆಯಲು ಹೇಳಿ ಡೆಡ್‌ಬಾಡಿ ಇರುವ ರೂಮಿಗೆ ಬಂದನು.

ಅಷ್ಟರಲ್ಲಿ ಡಾಕ್ಟರ್ ಶವಪರೀಕ್ಷೆ ಮಾಡಿದ್ದರು. ''ಸಾವು ರಾತ್ರಿ ಹನ್ನೊಂದರಿಂದ ಹನ್ನೆರಡು ಗಂಟೆ ಒಳಗೆ ಆಗಿದೆ. ನೇಣು ಹಾಕಿಕೊಂಡಿರೋದ್ರಿಂದ ಉಸಿರು ಕಟ್ಟಿ ಸಾವು ಸಂಭವಿಸಿದೆ. ಪೋಸ್ಟ್‌ಮಾರ್ಟಂ ಬಂದ ಮೇಲೆ ಉಳಿದ ವಿವರಗಳು ತಿಳಿಯುತ್ತದೆ'' ಎಂದರು.

ಪೊಲೀಸ್ ಅಧಿಕಾರಿ ಎಚ್ಚರಿಕೆಯಿಂದ ಡೆಡ್‌ಬಾಡಿ ಪರೀಕ್ಷೆ ಮಾಡಿದನು. ಅನುಮಾನ ಪಡುವಂತ ಯಾವ ಸುಳಿವೂ ಸಹ ಸಿಗಲಿಲ್ಲ. ಮೂವರು ತಂಗಿಯರು, ಇಬ್ಬರು ತಮ್ಮರಿಂದ ದೊಡ್ಡ ಹಡಗಿನಂತ ಸಂಸಾರವನ್ನು ಇವಳು ಒಬ್ಬಳೇ ಯಾವ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದಳು?

ಎಲ್ಲಿ ಕೆಲಸ ಮಾಡುತ್ತಿದ್ಲು?

ಎಷ್ಟು ಸಂಬಳ ಬರುತ್ತಿತ್ತು ?

ಪೊಲೀಸ್ ಅಧಿಕಾರಿ ಮನೆಯವರ ಸಮಕ್ಷಮದಲ್ಲಿ ಆ ರೂಮಿನಲ್ಲಿದ್ದ ಅವಳು ಉಪಯೋಗಿಸುತ್ತಿದ್ದ ಲಾಕರ್ ಓಪನ್ ಮಾಡಿದವರೇ ಬೆಚ್ಚಿಬಿದ್ದರು. ಹತ್ತು ಲಕ್ಷ ರೂಪಾಯಿಗಿಂತ ಜಾಸ್ತಿ ಇದ್ದ ನೋಟಿನ ಕಂತೆಗಳು. ಬ್ಯಾಂಕ್ ಪಾಸ್ ಬುಕ್‌ಗಳು. ಎಫ್.ಡಿ. ಬಾಂಡ್‌ಗಳು. ಚಿನ್ನದ ಆಭರಣಗಳು ಜಾಸ್ತಿ ಇರಲಿಲ್ಲ. ಆದರೆ ತುಂಬಾ ಸೊಗಸಾಗಿರುವ ಬೆಲೆಬಾಳುವ ಸೀರೆಗಳು, ಮಾಡ್ರನ್ ಡ್ರೆಸ್‌ಗಳು, ನೈಟಿಗಳು ಮತ್ತು ಫಾರಿನ್ ಮೇಕಪ್ ಸೆಟ್‌ಗಳನ್ನು ಕಂಡು ಅನುಮಾನ ಬರುತ್ತಿದೆ.

ವಿಶೇಷತೆ ಏನು? ಆ ಮನೆಯವರೇ ದಂಗಾಗಿ ಹೋಗಿದ್ದಾರೆ. ತಮ್ಮ ಅಕ್ಕನ ಹತ್ತಿರ ಈಗಲೂ ಸಹ ಇಷ್ಟೊಂದು ಹಣ ಇದೆ ಅಂತ ಅವರು ಊಹೆ ಮಾಡಿರಲಿಲ್ಲ. ಯಾವಾಗಲೂ ಬೀರುವನ್ನು ಲಾಕ್ ಮಾಡುತ್ತಿದ್ದಳು. ಯಾರೊಬ್ಬರೂ ಸಹ ಅವಳ ಕೆಲಸದ ಬಗ್ಗೆ ಆಗಲಿ, ಸಂಪಾದನೆ ಬಗ್ಗೆ ಆಗಲಿ, ಉಳಿತಾಯದ ಬಗ್ಗೆ ಆಗಲಿ ಕೇಳಿರಲಿಲ್ಲ. ಇದು ನಿಜವಾಗಿ ಶಾಕ್ ಉಂಟಾಗಿದೆ.

ಇಷ್ಟೊಂದು ಹಣ ಎಲ್ಲಿಂದ ಬಂತು?

ಪೊಲೀಸ್ ಅಧಿಕಾರಿ ಬ್ಯಾಂಕ್ ಪಾಸ್‌ಬುಕ್‌ಗಳನ್ನು ಡೀಟೈಲ್ ಆಗಿ ಚೆಕ್ ಮಾಡಿದನು. ಇತ್ತೀಚೆಗೆ ಅವಳ ಖಾತೆಗೆ ಅಂದರೆ ಆತ್ಮಹತ್ಯೆ ಮಾಡಿಕೊಳ್ಳುವ ಎರಡು ದಿನಗಳ ಹಿಂದೆ ಅವಳ ಎರಡು ಬ್ಯಾಂಕ್ ಖಾತೆಗಳಿಗೆ ತಲಾ ಐದು ಲಕ್ಷದಂತೆ ವರ್ಗ ಆಗಿತ್ತು.

ಈ ಬ್ಯಾಂಕ್ ದಾಖಲೆಗಳ ಫೋಟೋ ಕಾಪಿ ಮಾಡಿಕೊಂಡ ನಂತರ, ಲಾಕರ್ ಒಳಗಿದ್ದ ಎಲ್ಲವನ್ನೂ ಕ್ಲಿಕ್ ಮಾಡುವಂತೆ ಫೋಟೋಗ್ರಾಫರ್‌ಗೆ ಸೂಚನೆ ನೀಡಿದ್ದನು. ಪುನಹ ಡೆಡ್‌ಬಾಡಿ ಇರುವ ಜಾಗವನ್ನೆಲ್ಲಾ ಪರೀಕ್ಷೆ ಮಾಡಿದನು.

ಟೇಬಲ್ ಲಾಕರ್ ಕಂಡಿತು. ಅದರಲ್ಲಿ ಅವಳ ವ್ಯಾನಿಟಿ ಬ್ಯಾಗು ಇತ್ತು. ಮಾಧವನ್ ಎಲ್ಲವನ್ನೂ ಚೆಕ್ ಮಾಡಿದನು.

ಮೊಬೈಲ್ ಹ್ಯಾಂಡ್‌ಸೆಟ್. ಸ್ವಲ್ಪ ಹಣ. ವಿಸಿಟಿಂಗ್ ಕಾರ್ಡ್ ಮತ್ತು ಕೇಸರಿ ಕವರ್ ಇತ್ತು. ಆ ಕವರ್ ಅನ್ನು ನೋಡಿದಾಗ ಅದರ ಮೇಲೆ ಈ ರೀತಿ ಬರೆಯಲಾಗಿತ್ತು.

ಪೊಲೀಸ್ ಅಧಿಕಾರಿಗಳಿಗೆ...!

ಮಾಧವನ್‌ಗೆ ಕುತೂಹಲ ಉಂಟಾಯಿತು. ಕವರ್‌ನಿಂದ ಪತ್ರ ತೆಗೆದು ಓದಲಾರಂಭಿಸಿದನು.

ಆ ಪತ್ರದಲ್ಲಿ ಹೀಗಿದೆ!

ಪತ್ರವನ್ನು ಓದಿ ಮುಗಿಸಿದ ಪೊಲೀಸ್ ಅಧಿಕಾರಿ ಕೋಪದಿಂದ ''ನಿಮ್ಮ ಕುಟುಂಬಕ್ಕೆ ಆತ್ಮೀಯನಾಗಿದ್ದ ಮಹೇಂದ್ರನಿಗೆ ಫೋನ್ ಮಾಡಿ ಈಗಲೇ ಬರಲು ಹೇಳಿ. ನಮ್ಮವರು ಜೀಪಿನಲ್ಲಿ ಹೋಗುತ್ತಾರೆ. ಅವರ ಜೊತೆ ನೀವ್ಯಾರಾದರೂ ಹೋಗಿ ಅವರನ್ನು ಕರ್ಕೊಂಡ್ ಬನ್ನಿ.''

ಶಂಭುನಾಥ ಗಾಬರಿಯಿಂದ ''ಯಾಕೆ... ಯಾಕೆ ಸಾರ್'' ಎಂದು ಕೇಳಿದಳು.

☞ 14

# ಪರಪುರುಷನ ಸಹವಾಸ ಮಾಡಿದ ಮಾದೇವಿ ಕುತ್ತಿಗೆ ಕೊಯ್ದ ಭದ್ರ!



ಕೊಲೆಯಾದ ಮಾದೇವಿ

**ಬಹುತೇಕ ಅಕ್ರಮ ಸಂಬಂಧಗಳು ಅಂತಿಮವಾಗಿ ಕೊಲೆಯಲ್ಲಿ ಅಂತ್ಯ ಕಾಣುತ್ತವೆ. ಅಂತಹ ಘಟನೆಯೊಂದಕ್ಕೆ ಸಾಕ್ಷಿಯಾಗಿರುವುದು ಗಡಿ ಜಿಲ್ಲೆ ಚಾಮರಾಜನಗರದ ಹನೂರು ತಾಲೂಕಿನ ಗೂಳ್ಯದ ಬಯಲು. ಇಲ್ಲಿ ಅಕ್ರಮ ಸಂಬಂಧಕ್ಕೆ ಬಲಿಯಾಗಿರುವುದು ಎರಡು ಮಕ್ಕಳ ತಾಯಿ. ಅದೇಕೋ ಆಕೆಗೆ ತನ್ನೆರಡು ಮಕ್ಕಳು ಹಾಗೂ ಗಂಡನಿಗಿಂತ ಪರಪುರುಷನ ಸಹವಾಸವೇ ಸಹ್ಯವಾಯಿತೇನೋ. ಈಗ ಗಂಡನ ಆಕ್ರೋಷಕ್ಕೆ ಬಲಿಯಾಗಿ ತನ್ನೆರಡು ಮಕ್ಕಳನ್ನು ತಬ್ಬಲಿ ಮಾಡಿ ಪ್ರಾಣ ಕಳೆದುಕೊಂಡಿದ್ದಾಳೆ.**



ಆರೋಪಿ ಭದ್ರ

ಇಬ್ಬರು ಒಂದೇ ಗ್ರಾಮದ ಒಂದೇ ಜನಾಂಗದವರು. ಹಿರಿಯರ ಇಚ್ಛೆಯಂತೆ ಪರಸ್ಪರ ಸಂಪ್ರದಾಯದಂತೆ ಮದುವೆಯಾಗಿದ್ದರು ಆದರೆ ಕಾಮವಾಂಚೆಗಾಗಿ ಕಾಲು ಜಾರಿದ ಪತ್ನಿಯ ಪರಪುರುಷನೊಂದಿಗಿನ ಅಕ್ರಮ ಸಂಬಂಧಕ್ಕೆ ಬೇಸತ್ತ ಪತಿಯೇ ಆಕೆಯ ಕುತ್ತಿಗೆ ಕೊಯ್ದು ಭೀಕರವಾಗಿ ಕೊಲೆ ಮಾಡಿದ್ದು ಕೊಲೆ ಮಾಡಿದ ಆರೋಪಿ ಪತಿಯನ್ನು ಹನೂರು ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಬಿಟ್ಟು ಬಂದಿದ್ದಾರೆ

ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಒಡೆಯರಪಾಳ್ಯಕ್ಕೆ ಹೊಂದಿಕೊಂಡಿರುವ ಗೂಳ್ಯದ ಬಯಲು ಎಂಬ ಗ್ರಾಮದಲ್ಲಿ ಈ ಅಮಾನುಷ ಕೃತ್ಯ ನಡೆದಿದೆ. ಗ್ರಾಮದ ಲೇ.ಈರಣ್ಣನ ಮಗ ಭದ್ರ ಎಂಬಾತನ ಪತ್ನಿ ಮಾದೇವಿ (32) ಎಂಬಾಕೆಯೇ ತನ್ನ ಪತಿಯಿಂದಲೇ ಕೊಲೆಯಾದಕೆ. ಆಕೆಯ ಪತಿ ಭದ್ರ ಪತ್ನಿ ಮಾದೇವಿಯನ್ನು ಅಕ್ರಮ ಸಂಬಂಧದ ಶಂಕೆ ಯಿಂದ ಕೊಲೆ ಮಾಡಿರುವ ಆರೋಪಿ ಪತಿ.

ಕೊಳ್ಳೇಗಾಲ-ಸತ್ಯಮಂಗಲ ಅಂತರ್ ರಾಜ್ಯ ಹೆದ್ದಾರಿಯಲ್ಲಿ ತಮಿಳುನಾಡು ಗಡಿಭಾಗಕ್ಕೆ ಹೊಂದಿ ಕೊಂಡಿರುವ ಗೂಳ್ಯದ ಬಯಲು ಗ್ರಾಮದಲ್ಲಿ ಒಂದಷ್ಟು ಬುಡಕಟ್ಟು ಸೋಲಿಗ ಕುಟುಂಬಗಳಿವೆ. ಈ ಕುಟುಂಬಗಳಿಗೆ ಅಕ್ಕಪಕ್ಕದ ತೋಟದ ಜಮೀನುಗಳಲ್ಲಿ ಕೂಲಿ ಮಾಡಿ ಕೊಂಡು ಜೀವನ ನಡೆಸುತ್ತವೆ. ಹೇಳಬೇಕೆಂದರೆ ಇತ್ತೀಚೆಗೆ ನಾಗರಿಕ ಪ್ರಪಂಚದತ್ತ ದಾಪುಗಾಲಿಡುತ್ತಿರುವ ಈ ಕುಟುಂಬ ಗಳಿಗೆ ತೋಟದ ಜಮೀನುಗಳ ಕೂಲಿಯೇ ಆಧಾರ. ಅಂತಹ ಕುಟುಂಬಗಳಲ್ಲಿ ಒಂದಾದ ಈ ಗ್ರಾಮದ ಸೋಲಿಗ ಜನಾಂಗದ ಲೇ. ಶಂಭಯ್ಯ ಹಾಗೂ ಈರಮ್ಮ ಎಂಬುವವರ ಮಗಳು ಮಾದೇವಿಯನ್ನು ಕಳೆದ 10 ವರ್ಷಗಳ ಹಿಂದೆ ಅದೇ ಗ್ರಾಮದ ಲೇ. ಈರಣ್ಣನ ಮಗ ಭದ್ರ ಎಂಬಾತನಿಗೆ ಕೊಟ್ಟು ಮದುವೆ ಮಾಡಿದ್ದರು. ಕಳೆದ 10 ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗಳು ಪ್ರಾರಂಭದಲ್ಲಿ ಅನ್ಯೋನ್ಯವಾಗಿಯೇ ಇದ್ದರು. ಇವರಿಗೆ



ಎಸ್ಪಿ ಡಾ. ಕವಿತಾ



ಡಿವೈಎಸ್ಪಿ ಧರ್ಮೇಂದ್ರ

4-5 ವರ್ಷದವರೆಗೆ ಮಕ್ಕಳಿರಲಿಲ್ಲ, ಐದು ವರ್ಷಗಳ ನಂತರ ನಾಲ್ಕು ವರ್ಷದ ಅರ್ಜುನ್ ಹಾಗೂ ಒಂದೂವರೆ ವರ್ಷದ ಅಕ್ಷಯ್ ಎಂಬ ಇಬ್ಬರು ಗಂಡು ಮಕ್ಕಳಿದ್ದು ಹೇಗೋ ಜೀವನ ಸಾಗುತ್ತಿತ್ತು.

ಆದರೆ ಮಾದೇವಿ ಅದೇ ಗ್ರಾಮದ ಸ್ವಾಮಿ ಎಂಬ ಯುವಕನೊಂದಿಗೆ ಅಕ್ರಮ ಸಂಬಂಧವಿರಿಸಿಕೊಂಡಿದ್ದಳು. ಇದು ಗಂಡ ಭದ್ರನಿಗೆ ತಿಳಿದು ಹುಚ್ಚನಾಗಿದ್ದ ಇದರಿಂದಾಗಿ ಸುಖವಾಗಿದ್ದ ಸಂಸಾರದಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಈ ವೇಳೆ ಮಗಳಿಗೆ ಬುದ್ಧಿವಾದ ಹೇಳಿದ್ದ ಮಾದೇವಿಯ ಮನೆಯವರು ಸ್ವಾಮಿಯ ಜೊತೆ ಜಗಳ ಮಾಡಿ ಇನ್ನು ಮುಂದೆ ನಮ್ಮ ಮನೆಯ್ ಕಡೆ ಬರಬೇಡ ಎಂದು ಬೆದರಿಕೆ ಹಾಕಿದ್ದರು.

ಆದರೂ ಮಾದೇವಿ ಸ್ವಾಮಿಯ ಜೊತೆಗಿನ ಅಕ್ರಮ ಸಂಬಂಧ ಮುಂದುವರೆಸಿದ್ದಳು ಇದರಿಂದಾಗಿ ಭದ್ರ ಮಾನಸಿಕ ನಿಯಂತ್ರಣ ಕಳೆದು ಕೊಂಡು ತೀರಾ ಹುಚ್ಚನಾಗಿದ್ದ ಈ ವೇಳೆ ಮಾದೇವಿ ತನ್ನತವರು ಮನೆಯಲ್ಲೇ ಇದ್ದಳು. ಅಲ್ಲಿಗೆ ಸ್ವಾಮಿ ರಾತ್ರಿ ಹೊತ್ತು ಬರುತ್ತಿದ್ದ ಎಂದು ಹೇಳಲಾಗಿದ್ದು.

**ಚಾಮರಾಜನಗರ**
**✍ ಎಸ್. ಸ್ವಾಮಿ**

ಅದೇ ಕನವರಿಕೆಯಲ್ಲಿದ್ದ ಭದ್ರ ಇದೇ 20ರಂದು ರಾತ್ರಿ ಮಾದೇವಿಯತವರು ಮನೆಗೆ ಬಂದು ಸ್ವಾಮಿ ನನ್ನ ಹೆಂಡತಿಯ ಜೊತೆ ಮಲಗಿದ್ದಾನೆ ಎಂದು ಗಲಾಟೆ ಮಾಡಿದ್ದಾನೆ. ಈ ಮನೆಯವರು ವೇಳೆ ಇಲ್ಲ ಎಂದು ಸಮಾಧಾನ ಮಾಡಿ ಕಳುಹಿಸಿದ್ದಾರೆ.

21 ರಂದು ಬೆಳಿಗ್ಗೆ ಹೆಂಡತಿಯ ಮನೆಗೆ ಬಂದ ಭದ್ರ ಅಲ್ಲಿಯೇ ಊಟ ಮಾಡುತ್ತಾನೆ. ಈ ವೇಳೆ ಪತ್ನಿಯೇ ಅನ್ನ ಮಾಡಿ ಬಡಿಸುತ್ತಾಳೆ. ಆದರೂ ಈತನ ತಲೆಯಲ್ಲಿರುವ ಅನುಮಾನ ಹೋಗಿರಲಿಲ್ಲ, ಬದಲಿಗೆ ಒಡೆಯರಪಾಳ್ಯಕ್ಕೆ ಬಂದು ನಾಗಭೂಷಣ್ ಎಂಬುವವರ ಅಂಗಡಿಯಲ್ಲಿ



ಸಿಪಿಐ ಆನಂದ ಮೂರ್ತಿ



ಪಿಎಸ್ಐ ಮಂಜುನಾಥ್ ಪ್ರಸಾದ್

ಚಾಕು ಖರೀದಿಸಿದ್ದಾನೆ. ನಂತರ ಮಾದೇವಿಯ ಮನೆಯಲ್ಲಿ ಎಲ್ಲರೂ ಕೂಲಿ ಕೆಲಸಕ್ಕೆ ತೆರಳಿದ ಮೇಲೆ ಮನೆಗೆ ಬಂದು ಆಕೆಯ ಮೇಲೆರಗಿದ್ದಾನೆ. ಈ ವೇಳೆ ಆಕೆ ತಪ್ಪಿಸಿಕೊಳ್ಳಲು ಬಹಳ ಹೋರಾಟ ಮಾಡಿದ್ದಾಳೆ. ಅಂತಿಮವಾಗಿ ಆಕೆಯ ಕುತ್ತಿಗೆಯನ್ನು ಚಾಕುವಿನಿಂದ ಕೊಯ್ದು ಕೊಲೆ ಮಾಡಿದ್ದಾನೆ. ಚೀರಾಟ ಕೇಳಿದ ಕೂಡಲೇ ಅಕ್ಕ ಪಕ್ಕದ ಮನೆಯವರು ಓಡಿ ಬರುತ್ತಾರೆ. ಕೊಲೆ ಮಾಡಿ ಅಲ್ಲೇ ಪಕ್ಕದಲ್ಲೇ ಕುಳಿತಿದ್ದ ಆತ ಈ ವೇಳೆ ಅವರಿಗೂ ಚಾಕು ತೋರಿಸಿ ಹೆದರಿಸುತ್ತಾನೆ ನಂತರ ಅಲ್ಲಿಂದ  ಪರಾರಿಯಾಗಿದ್ದಾನೆ.

ವಿಷಯ ತಿಳಿದ ಕೂಡಲೇ ಹನೂರು ಠಾಣೆ ಪಿಎಸ್ಐ ಮಂಜುನಾಥ್ ಪ್ರಸಾದ್ ಕೂಡಲೇ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ನಂತರ ಹನೂರು ಸಿಪಿಐ ಆನಂದ್ ಮೂರ್ತಿರವರ ಸೂಚನೆ ಮೇರೆಗೆ ತಮ್ಮ ಸಿಬ್ಬಂದಿಗಳಾದ ನಂಜುಂಡ, ಕೃಷ್ಣ, ದಶರಥ, ನಾಗೇಂದ್ರ, ಚಂದ್ರಶೇಖರ್, ಕುಮಾರ್ ಹಾಗೂ ಮಹಿಳಾ ಪೇದೆ ರಂಜಿತರವರೊಡನೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾದೇವಿಯ ಶವವನ್ನು ಚಾಮರಾಜನಗರ ಆಸ್ಪತ್ರೆ ಶವಗಾರಕ್ಕೆ ಸಾಗಿಸುತ್ತಾರೆ. ಈ ವೇಳೆ ಘಟನಾ ಸ್ಥಳಕ್ಕೆ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತ, ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ, ಹನೂರು ವೃತ್ತ ನಿರೀಕ್ಷಕ ಆನಂದಮೂರ್ತಿರವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ನಂತರ ಅಲ್ಲಿನ ವೈದ್ಯರಿಂದ ಪಂಚನಾಮೆ ನಡೆಸಿ ನಂತರ ವಾರಸುದಾರರಿಗೆ ನೀಡಿದ್ದಾರೆ

ಈ ಸಂಬಂಧ ಮೃತಳ ಸಹೋದರ ಮಾದೇಶ ಎಂಬಾತ ಕೊಟ್ಟ ದೂರಿನ ಮೇರೆಗೆ ಹನೂರು ಠಾಣೆ ಪೊಲೀಸರು ಠಾಣಾ ಮೊಕದ್ದಮೆ ಸಂಖ್ಯೆ 109/2025 ಬಿಎನ್ಎಸ್ ಕಾಯ್ದೆ 103(1) ರಡಿ ಪ್ರಕರಣ ದಾಖಲಿಸಿಕೊಳ್ಳುತ್ತಾರೆ. ಕೂಡಲೇ ಕಾರ್ಯಪ್ರವೃತ್ತರಾದ ಹನೂರು ಠಾಣೆ ಹನೂರು ವೃತ್ತ ನಿರೀಕ್ಷಕ ಆನಂದಮೂರ್ತಿರವರು ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತರವರ ಮಾರ್ಗ ದರ್ಶನದಲ್ಲಿ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರರವರ ನೇತೃತ್ವದಲ್ಲಿ ಹನೂರು ಠಾಣೆ ಪಿಎಸ್ಐ ಮಂಜುನಾಥ್ ಪ್ರಸಾದ್ ರವರನ್ನೊಳಗೊಂಡ ತಂಡ ರಚಿಸಿ ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ಆರೋಪಿಯ ಪತ್ತೆಗೆ ಬಲೆ ಬೀಸಿದ್ದರು. ಮರುದಿನ ಈ ತಂಡ ಆರೋಪಿ ಭದ್ರನನ್ನು ಬಂಧಿಸಿ ವೃತ್ತ ನಿರೀಕ್ಷಕ ಆನಂದಮೂರ್ತಿರವರ ಮುಂದೆ ತಂದು ನಿಲ್ಲಿಸುತ್ತಾರೆ. ಬಳಿಕ ವೃತ್ತ ನಿರೀಕ್ಷಕ ಆನಂದಮೂರ್ತಿರವರು ಆರೋಪಿಯನ್ನು ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ನಂತರ ಆರೋಪಿಯ ಹೇಳಿಕೆ ದಾಖಲಿಸಿಕೊಂಡು ಜೈಲಿಗೆ ಬಿಟ್ಟು ಬಂದಿದ್ದಾರೆ.

ಹನೂರು ಠಾಣೆಗೆ ಇತ್ತೀಚೆಗೆ ಬಂದಿರುವ ವೃತ್ತ ನಿರೀಕ್ಷಕ ಆನಂದಮೂರ್ತಿರವರು ಕರ್ತವ್ಯ ದಲ್ಲಿ ಖಡಕ್ ಹಾಗೂ ಮಾನವೀಯ ಮೌಲ್ಯವಿರುವ ಅಧಿಕಾರಿ ಎಂದು ಹನೂರಿನ ಜನತೆ ಮಾತನಾಡಿಕೊಳ್ಳುತ್ತಿದ್ದಾರೆ. ಈ ಕೊಲೆ ಪ್ರಕರಣದ ತನಿಖೆ ಜವಾಬ್ದಾರಿ ಈಗ ಅವರೇ ವಹಿಸಿಕೊಂಡಿದ್ದಾರೆ. ಹಾಗಾಗಿ ನೊಂದ ಕುಟುಂಬಕ್ಕೆ ನ್యಾಯ ದೊರಕಿಸಿ ಕೊಡಲಿದ್ದಾರೆ. ☯


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ, 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079.

ಮೊ : 9513892666


ಮಂಜುನಾಥ ಬದುಕಿದ್ದಾಗ


ರಾಜಿ ಸಂಧಾನ ಮಾಡಲು ಹೋಗಿ ಕೊಲೆಯಾದ ಮಂಜುನಾಥ್

**ಹಣಕಾಸಿನ ಲೇವಾದೇವಿ ವಿಚಾರವಾಗಿ ಇಬ್ಬರು ವ್ಯಕ್ತಿಗಳ ನಡುವೆ ನಡೆಯುತ್ತಿದ್ದ ಗಲಾಟೆಯಲ್ಲಿ ಪರಿಚಯಸ್ಥರು ಅನ್ನೋ ಕಾರಣಕ್ಕೆ ಸಂಧಾನ ಮಾಡಲು ಹೋದವನೇ ಕೊಲೆಯಾಗಿ ಹೋಗಿದ್ದಾನೆ. ಹತ್ಯೆಗೈದವರ ಮೇಲಿನ ಕೋಪಕ್ಕೆ ಮೃತನ ಸಂಬಂಧಿಕರು ಹಾಗೂ ಗ್ರಾಮಸ್ಥರು ಸೇರಿಕೊಂಡು ಆರೋಪಿಯ ಮನೆಗೆ ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿ ಸುಟ್ಟಿರುವ ಘಟನೆ ಶ್ರೀನಿವಾಸಪುರ ತಾಲ್ಲೂಕಿನ ಸೋಮಯಾಜಲಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ನಡೆದಿದೆ.**

# ಲೇವಾದೇವಿ ಲಫಡಾ ಮಧ್ಯಸ್ಥಿಕೆ ವಹಿಸಿದವನ ಮರ್ಡರ್!

**ಕೋಲಾರ**
✍ ಕೋಲಾರ ಮಂಜು

ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕಿನ ಕೂಳಗುರ್ಕಿ ಗ್ರಾಮದ ವಾಸಿ ಲೇಟ್ ಜಯಪ್ಪನ ಮಕ್ಕಳಾದ ಶ್ರೀಮೂರ್ತಿ ಮತ್ತು ಶಿವಶಂಕರ್ ಕುಟುಂಬದವರು ತಾಲ್ಲೂಕಿನ ಗಡಿಭಾಗದಲ್ಲಿರುವ ಅಡವಿ ಚಂಕೂರು, ಕೂಲಗುರ್ಕಿ ಅರಣ್ಯ ಪ್ರದೇಶದಲ್ಲಿ ರಾತ್ರಿ ಹತ್ತು 3 ಜೆಸಿಬಿ ಮತ್ತು 4 ಟ್ರಾಕ್ಟರ್ ವಾಹನಗಳ ಮೂಲಕ ಮರಳು ಫಿಲ್ಟರ್ ಮಾಡಿ ಅಕ್ರಮವಾಗಿ ಮರಳು ಮಾರಾಟ ದಂಧೆ ಮಾಡುತ್ತಿದ್ದರು. ಶ್ರೀಮೂರ್ತಿಗೆ ಸ್ಥಳೀಯವಾಗಿ ಹಿರಿಯ ರಾಜಕೀಯ ವ್ಯಕ್ತಿಯೊಬ್ಬರ ಮತ್ತು ರೌಡಿಶೀಟರ್ ಒಬ್ಬನ ಕೃಪಕಟಾಕ್ಷ ಇದ್ದು, ಇವರಿಬ್ಬರ ಕುಮ್ಮಕ್ಕಿನಿಂದ ಎಗ್ಗಿಲ್ಲದೆ ಮರಳು ದಂಧೆಯನ್ನು ನಡೆಸುತ್ತಿದ್ದರು. ಈ ಬಗ್ಗೆ ಯಾರಾದರೂ ಕೇಳಿದರೆ ಅಂಥವರ ಮೇಲೆ ದೌರ್ಜನ್ಯ ನಡೆಸುತ್ತಿದ್ದರಲ್ಲದೆ ಬೆದರಿಕೆ ಹಾಕುತ್ತಿದ್ದರು ಎನ್ನಲಾಗಿದೆ. ಇವರು ಮಾಡುತ್ತಿದ್ದ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಜನರ ಬಳಿ ಹಣದ ಲೇವಾದೇವಿ ಮಾಡಿದ್ದರು. ಅಂಥವರಲ್ಲಿ ಆಂಧ್ರದ ವ್ಯಕ್ತಿಯೊಬ್ಬರ ಬಳಿ ಲಕ್ಷಾಂತರ ರೂ.ಗಳ ಹಣದ ವ್ಯವಹಾರ ಮಾಡಿದ್ದು, ಈ ವೇಳೆ ಆಂಧ್ರದ ವ್ಯಕ್ತಿಯು ಶ್ರೀಮೂರ್ತಿ ಬಳಿ ಹಣ ವಾಪಸ್ಸು ಕೇಳಿದಕ್ಕೆ ಶ್ರೀಮೂರ್ತಿ ಹಣ ಕೊಡದೆ ವಾಯಿದೆ ಹೇಳಿ ಕಳುಹಿಸಿದರು. ಆದರೆ ಎಷ್ಟು ದಿನಗಳಾದರೂ ಹಣ ವಾಪಸ್ಸು ಕೊಡದೆ ಇದ್ದಾಗ ಆಂಧ್ರದ ರಾಮಸಮುದ್ರಂ ಬಳಿ ಹಣಕಾಸಿನ ವಿಚಾರವಾಗಿ ಇಬ್ಬರು ಕಿತ್ತಾಡಿಕೊಳ್ಳುತ್ತಿದ್ದರು. ಆಗ ಸ್ಥಳಕ್ಕೆ ಬಂದ ತಾಲ್ಲೂಕಿನ ಫಲಗೂರ ಕೋಟೆ ಗ್ರಾಮ ಪಂಚಾಯಿತಿಗೆ ಸೇರಿದ ಗುಂತುವಾರಿಪಲ್ಲಿ ಗ್ರಾಮದ ವಾಸಿ ಮಂಜುನಾಥ 38) ಇಬ್ಬರನ್ನು ಸಮಾಧಾನ ಪಡಿಸಿ ರಾಜಿ ಮಾಡಿ ಕಳುಹಿಸಿದರು. ನಂತರ ಆಂಧ್ರದ ವ್ಯಕ್ತಿ ಗುಂಡುವಾರಿಪಲ್ಲಿಯ ಮಂಜುನಾಥರವರ ಮನೆಗೆ ಬಂದು ರಾಮಸಮುದ್ರಂನಲ್ಲಿ ನಮ್ಮಿಬ್ಬರನ್ನು ಸಮಾಧಾನಪಡಿಸಿ ಹಣ ಕೊಡುವುದಕ್ಕೆ ಸಯಮ ಕೊಟ್ಟು ಕಳುಹಿಸಿದ್ದೀರಿ. ಆದರೆ ಇಲ್ಲಿವರೆಗೂ ಶ್ರೀಮೂರ್ತಿ ಹಣ ವಾಪಸ್ಸು ಕೊಟ್ಟಿಲ್ಲ. ಆದುದರಿಂದ ತಾವು ನಮ್ಮಿಬ್ಬರ ನಡುವೆ ಸಂಧಾನ ಮಾಡಿ ಶ್ರೀಮೂರ್ತಿಯಿಂದ ಹಣ ಕೊಡಿಸುವಂತೆ ಹೇಳಿದರು. ಅದರಂತೆ ಮಂಜುನಾಥ್ ಆಂಧ್ರದ ವ್ಯಕ್ತಿಯ ಪರವಾಗಿ ನೀರು ಶ್ರೀಮೂರ್ತಿಗೆ ಫೋನ್ ಮಾಡಿ ಹಣ ಕೊಡುವಂತೆ ಸ್ವಲ್ಪ ಜೋರು ಮಾತಿನಲ್ಲೇ ಹೇಳಿದ್ದಾರೆ. ಮಂಜುನಾಥ ಸ್ಥಳೀಯನಾದ ನನಗೆ ಸಪೋರ್ಟ್ ಮಾಡದೆ ಆಂಧ್ರದ ವ್ಯಕ್ತಿಗೆ ಸಪೋರ್ಟ್ ಮಾಡುತ್ತಿದ್ದಾನೆಂದು ಕೋಪಗೊಂಡ ಶ್ರೀಮೂರ್ತಿ ತನ್ನ ಸಹೋದರನಾದ ಶಿವಶಂಕರ್ ಜೊತೆ ಸೇರಿಕೊಂಡು ಮಂಜುನಾಥ್‌ಗೆ ಫೋನ್ ಮಾಡಿ ಹಣಕಾಸಿನ ಲೇವಾದೇವಿ ವಿಚಾರದಲ್ಲಿ ರಾಜೀ ಸಂಧಾನ ಮಾಡಿರುವ ನಿನ್ನ ಜೊತೆ ಸ್ವಲ್ಪ ಮಾತನಾಡಬೇಕು. ಅದಕ್ಕೆ ಸೋಮಯಾಜಲಹಳ್ಳಿ ಗ್ರಾಮ ಬಸ್ ನಿಲ್ದಾಣದ ಪಕ್ಕದಲ್ಲಿರುವ ಶ್ರೀ ಬಾಲಾಜಿ ಬಾರ್ ಅಂಡ್ ರೆಸಿಡೆನ್ಸಿ ಬಳಿಗೆ ಬರುವಂತೆ ಕರೆಯುತ್ತಾರೆ. ಅದರಂತೆ ಮಂಜುನಾಥ ಮಾರ್ಚ್ 17ರಂದು ರಾತ್ರಿ 8.20ರ ಸಮಯದಲ್ಲಿ ಶ್ರೀ ಬಾಲಾಜಿ ಬಾರ್ ಬಳಿಗೆ ಬರುತ್ತಾನೆ. ಈ ವೇಳೆಗೆ ಶ್ರೀಮೂರ್ತಿ ಮತ್ತು ಸಹೋದರ ಶಿವಶಂಕರ್ ಇಬ್ಬರು ಬಾರ್‌ನಲ್ಲಿ ಕುಡಿಯುತ್ತಾ ಕುಳಿತಿರುವುದನ್ನು ನೋಡಿದ ಮಂಜುನಾಥ್ ಅವರ ಬಳಿಗೆ ಹೋಗಿ ನ್ಯಾಯ ಮಾತನಾಡಬೇಕೆಂದು ಕರೆದಿರುವ ನೀವು ಮದ್ಯ ಸೇವನೆ ಮಾಡುತ್ತಾ ಇದ್ದೀರಿ. ಆದಕ್ಕೆ ಈ ದಿನ ಮಾತುಕತೆ ಬೇಡ ನಾಳೆ ಬೆಳಿಗ್ಗೆ ಮಾತನಾಡೋಣವೆಂದು ಹೇಳಿದ ಮಂಜುನಾಥ್ ಬಾರ್‌ನಿಂದ ಹೊರಗಡೆ ಹೋಗುತ್ತಿರುವಾಲೇ, ಲೋಫರ್ ನನ್ನ ಮಗನೇ, ಎಲ್ಲಿಗೆ ಹೋಗುತ್ತಿರುವುದು ನಿಂತುಕೊಳ್ಳೊ, ಈ ದಿನ ನಿನ್ನನ್ನು ಮುಗಿಸದೇ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿದರು. ಆಗ ಮಂಜುನಾಥ್ ಥೂ ಎಷ್ಟು ಹೇಳಿದರೂ ಬುದ್ಧಿ ಕಲಿಯಲ್ಲ ಎಂದು ಹೇಳಿ ಬಾರ್‌ನ ಆವರಣದಿಂದ ಹೊರಗಡೆಗೆ ಹೋಗುತ್ತಿದ್ದಾಗ ಕುಡಿಯುತ್ತಾ ಕುಳಿತಿದ್ದ ಶ್ರೀಮೂರ್ತಿ ಮತ್ತು ಶಿವಶಂಕರ್ ಇಬ್ಬರು ಎದ್ದು ಥೂ ಎಂದು ಉಗಿದು ನಮಗೆ ಬುದ್ಧಿ ಹೇಳುವಷ್ಟು ದೊಡ್ಡವನಾಗಿ ಬಿಟ್ಟಿದ್ದೀಯಾ ಎಂದು ಮಂಜುನಾಥನ ಮೇಲೆ ಅಣ್ಣತಮ್ಮ ಜಗಳ ಮಾಡಿ ಬಾರ್‌ನಿಂದ ತಳ್ಳಾಡಿಕೊಂಡು ಪಕ್ಕದಲ್ಲಿಯೇ ಇರುವ ಬಸ್ ನಿಲ್ದಾಣದ ಬಳಿವರೆಗೂ ಹೋಗಿ ಮಂಜುನಾಥನ ಮೇಲೆ ಹಲ್ಲೆಮಾಡಿ ಚಾಕುವಿನಿಂದ ಮನಬಂದಂತೆ ತಿವಿದು ಸಹೋದರರಿಬ್ಬರು ಅಲ್ಲಿಂದ ನಾಪತ್ತೆಯಾದರು.


ಆರೋಪಿ ಶ್ರೀಮೂರ್ತಿ


ಆರೋಪಿ ಶಿವಶಂಕರ್

## ಆರೋಪಿ ಮನೆಗೆ ಬೆಂಕಿ ಇಟ್ಟರು

ಕೊಲೆಗೆ ಯಾವುದೇ ಹಳೇ ದ್ವೇಷ ಕಾರಣವಿಲ್ಲದಿದ್ದರೂ, ಮಂಜುನಾಥನ ಕೊಲೆ ವಿಚಾರ ತಿಳಿಯುತ್ತಿದ್ದಂತೆ ಗ್ರಾಮದಲ್ಲಿನ ಜನ ಕ್ಷಣಮಾತ್ರದಲ್ಲಿ ಸಾವಿರಕ್ಕೂ ಹೆಚ್ಚು ಜನ ಸೋಮಯಾಜಲಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಜಮಾಯಿಸಿದರು. ಹಣಕಾಸಿನ ಲೇವಾದೇವಿ ವಿಚಾರಕ್ಕೆ ಶ್ರೀಮೂರ್ತಿ ಪರಿಚಯಸ್ಥನೆಂಬ ಕಾರಣಕ್ಕೆ ಸಂಧಾನ ಮಾಡಲು ಹೋದ ಮಂಜುನಾಥನನ್ನು ಶ್ರೀಮೂರ್ತಿ ಮತ್ತು ಆತನ ಸಹೋದರ ಶಿವಶಂಕರ್ ಮತ್ತು ಇತರರು ಸೇರಿಕೊಂಡು ಕೊಲೆ ಮಾಡಿದ್ದಾರೆಂಬ ವಿಚಾರ ತಿಳಿದುಕೊಂಡ ಉದ್ರಿಕ್ತರ ಗುಂಪು ಮತ್ತು ಮೃತನ ಕುಟುಂಬದವರು ಸೇರಿಕೊಂಡು ಆರೋಪಿ ಶ್ರೀಮೂರ್ತಿ ಮನೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಈ ವಿಚಾರ ತಿಳಿದುಕೊಂಡ ಅಗ್ನಿಶಾಮಕ ದಳದವರು ಮತ್ತು ಪೊಲೀಸ್ ಸಿಬ್ಬಂದಿಯು ಸ್ಥಳಕ್ಕೆ ಬಂದು ಬೆಂಕಿ ನಂದಿಸಲು ಮುಂದಾದಾಗ ಉದ್ರಿಕ್ತರ ಗುಂಪು ವಾಹನಗಳನ್ನು ತಡೆದು ನಿಲ್ಲಿಸಿ ಅಡಚಣೆ ಮಾಡಿದ್ದಾರೆ. ಇದರಿಂದ ಮನೆಯಲ್ಲಿದ್ದ ಎಲ್ಲಾ ಗೃಹೋಪಯೋಗಿ ವಸ್ತುಗಳು ಸುಟ್ಟುಕರಕಲಾಗಿವೆ. ಅದೃಷ್ಟವಶಾತ್ ಅಡುಗೆ ಮನೆಯಲ್ಲಿದ್ದ ಗ್ಯಾಸ್ ಸಿಲಿಂಡರ್ ಸ್ಫೋಟಗೊಳ್ಳುವ ಮೊದಲು ಅಗ್ನಿಶಾಮಕ ದಳದ ಸಿಬ್ಬಂದಿಯು ಬೆಂಕಿಯನ್ನು ನಂದಿಸಿ ಗ್ಯಾಸ್ ಸಿಲಿಂಡರ್‌ನ್ನು ಹೊರ ತೆಗೆದಿದ್ದರಿಂದ ನಡೆಯಬೇಕಾದಿದ ದೊಡ್ಡ ಅನಾಹುತವನ್ನು ತಡೆದಿದ್ದಾರೆ. ಕೊಲೆಪಾತಕರನ್ನು ಬಂಧಿಸುವಂತೆ ಒತ್ತಾಯಿಸಿ ಟಯರ್‌ಗಳಿಗೆ ಬೆಂಕಿ ಹಚ್ಚಿ ಸಂಬಂಧಿಕರು ಮತ್ತು ಗ್ರಾಮಸ್ಥರು ಕುಳಿತು ರಾತ್ರಿ 12 ಗಂಟೆಯವರೆಗೂ ಪ್ರತಿಭಟನೆ ನಡೆಸಿದರು.

ಕೂಡಲೇ ಸ್ಥಳಕ್ಕೆ ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಂದಕುಮಾರ್ ಭೇಟಿ ನೀಡಿ ಪ್ರತಿಭಟನಾ ನಿರತರನ್ನು ಮನವೊಲಿಸಿ ಜೊತೆಗೆ ಆದಷ್ಟು ಬೇಗನೇ ಆರೋಪಿಗಳನ್ನು ಬಂಧಿಸುವ ಭರವಸೆ ನೀಡಿದ ನಂತರ ಸ್ಥಳದಿಂದ ಮೃತದೇಹವನ್ನು ತೆಗೆಯಲು ಅನುವು ಮಾಡಿಕೊಟ್ಟರು. ಮೃತ ಮಂಜುನಾಥನ ಪತ್ನಿ ಶ್ರೀನಿವಾಸಪುರ ಪೊಲೀಸ್ ಠಾಣೆಗೆ ಹಾಜರಾಗಿ ಹಣಕಾಸಿನ ವಿಚಾರವಾಗಿ ಇಬ್ಬರು ವ್ಯಕ್ತಿಗಳ ನಡುವೆ ಸಂಧಾನ ಮಾಡಲು ಹೋಗಿ ಕೊಲೆಯಾಗಿದ್ದು, ಇಂತಹ ನೀಚಕೃತ್ಯವೆಸಗಿ ಪರಾರಿಯಾಗಿರುವ ಆರೋಪಿಗಳಾದ ಶ್ರೀಮೂರ್ತಿ ಮತ್ತು ಶಿವಶಂಕರ್‌ನನ್ನು ಬಂಧಿಸಿ ಅವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ದೂರು ನೀಡಿದರು. ಕೋಲಾರದ ಎಸ್‌ಎನ್‌ಆರ್ ಆಸ್ಪತ್ರೆಯ ಶವಗಾರಕ್ಕೆ ಮೃತದೇಹವನ್ನು ಸಾಗಿಸಿದ್ದು, ಅಲ್ಲಿ ವಾರಸುದಾರರು ಮತ್ತು ಪಂಚರ ಸಮುಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ಶ್ರೀನಿವಾಸಪುರ ಪಟ್ಟಣದ ಬಸ್ ನಿಲ್ದಾಣದಿಂದ ಗ್ರಾಮದವರೆಗೂ ಶವವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು. ಮೃತನ ಮನೆಯ ಬಳಿ ವಾಲ್ಮೀಕಿ ಸಮಾಜದ ಮುಖಂಡರು ಹಾಗೂ ಗ್ರಾಮಸ್ಥರು ಅಂತಿಮ ನಮನ ಸಲ್ಲಿಸಿದ್ದು, ನಂತರ ವಾಲ್ಮೀಕಿ ಸಮಾಜದ ನಾಯಕರುಗಳು ಮೃತ ಮಂಜುನಾಥನ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಣದ ಸಹಾಯ ಮಾಡಿದರು. ಬಳಿಕ ಸ್ವಗ್ರಾಮ, ಗುಂತುವಾರಿಪಲ್ಲಿ ಗ್ರಾಮದ ಹೊರವಲಯದಲ್ಲಿರುವ ಸ್ಮಶಾನದಲ್ಲಿ ಮಂಜುನಾಥನ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು. ಮೃತನ ಕುಟುಂಬಕ್ಕೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀನಿವಾಸನ್ ಹಾಗೂ ಶ್ರೀನಿವಾಸಪುರ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ರಾಜೇಶ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಸರ್ಕಾರದಿಂದ ಸಿಗುವಂತಹ ಅನುದಾನ 4 ಲಕ್ಷ 12 ಸಾವಿರದ 500 ರೂಪಾಯಿಗಳ ಚೆಕ್‌ನ್ನು ನೀಡಿದರು. ಈ ಸಂದರ್ಭದಲ್ಲಿ ಪಿಐ ಎಂ.ಬಿ. ಗೊರವನಕೊಳ್ಳ, ತಹಸೀಲ್ದಾರ್ ಸುಧೀಂದ್ರ, ಸಮಾಜದ ಮುಖಂಡರಾದ ಕೋಲಾರ ನಗರ ಸಭೆಯ ಸದಸ್ಯ ಅಂಬರೀಶ್, ಆಂಜನಪ್ಪ, ಹರೀಶ್, ನಾಗರಾಜ್ ಮುಂತಾದವರು ಹಾಜರಿದ್ದರು.

## ಸಹೋದರರಿಬ್ಬರ ಬಂಧನ

ಮೃತ ಮಂಜುನಾಥ್‌ರವರ ಪತ್ನಿ ನೀಡಿದ ದೂರಿನ ಅನ್ವಯ ಪಿಎಸ್‌ಐ ಜಯರಾಮ್‌ರವರು ಪ್ರಕರಣವನ್ನು ದಾಖಲಿಸಿಕೊಂಡರು. ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳಾದ ಶ್ರೀಮೂರ್ತಿ ಮತ್ತು ಶಿವಶಂಕರ್ ಮತ್ತು ಜಗದೀಶ್‌ರವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ನಂದಕುಮಾರ್‌ರವರ ನೇತೃತ್ವದಲ್ಲಿ ಒಂದನೇ ತಂಡ ಪಿಐ ಎಂ. ಗೊರವನಕೊಳ್ಳ, ಪಿಎಸ್‌ಐ ಜಯರಾಮ್, ಎಎಸ್‌ಐ ಮಂಜುನಾಥ್, ಹೆಚ್‌ಸಿ ಕಿರಣ್‌ಕುಮಾರ್, ಮಂಜುನಾಥ್. ಎರಡನೇ ತಂಡ ಪಿಐ ಜಗದೀಶ್, ಪಿಎಸ್‌ಐ ವಿಠ್ಠಲ್ ವೈ. ತಳವಾರ, ಹೆಚ್‌ಸಿಗಳಾದ ನಾಗರಾಜ್, ರಮೇಶ್, ಪಿಸಿ ಸಂಪತ್‌ಕುಮಾರ್. ಮೂರನೇ ತಂಡ ಕೋಲಾರ ಗ್ರಾಮಾಂತರ ಠಾಣೆ ಪಿಐ ಕಾಂತರಾಜ್, ಪಿಸಿಗಳಾದ ಆಂಜನಪ್ಪ, ನವೀನ್, ಸತೀಶ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ತಲೆಮರೆಸಿಕೊಂಡಿದ್ದ ಆರೋಪಿಗಳ ಬಗ್ಗೆ ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಕ್ರೈಂ ತಂಡವು ಮಾರ್ಚ್ 23ರಂದು ಮಧ್ಯಾಹ್ನ 12.30 ಗಂಟೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ವಡ್ಡರಹಳ್ಳಿ ಬಳಿ ಆರೋಪಿಗಳನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮಂಜುನಾಥನನ್ನು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡ ನಂತರ ಆರೋಪಿಗಳಾದ ಶ್ರೀಮೂರ್ತಿ ಮತ್ತು ಶಿವಶಂಕರ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿ ಶ್ರೀಮೂರ್ತಿಯ ಪತ್ನಿ ಮಾರ್ಚ್ 18ರಂದು ಶ್ರೀನಿವಾಸಪುರ ಪೊಲೀಸ್ ಠಾಣೆಗೆ ಹಾಜರಾಗಿ ನೆನ್ನೆರಾತ್ರಿ 9 ಗಂಟೆಯಲ್ಲಿ ನಾನು ಮತ್ತು ಅತ್ತೆ ರತ್ನಮ್ಮ, ಭಾವನ ಹೆಂಡತಿ ಕುಸುಮ, ಮಕ್ಕಳಾದ ಮೌನಶ್ರೀ, ಸಾನ್ವಿ ಮತ್ತು ಐದು ದಿನದ ಹೆಣ್ಣು ಮಗು ಸೇರಿದಂತೆ ನಾವೆಲ್ಲರೂ ಮನೆಯಲ್ಲಿ ಇದ್ದೆವು. ಸುಮಾರು 50ರಿಂದ 60 ಜನರ ಗುಂಪೊಂದು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಕೈಯಲ್ಲಿ ಮಾರಕಾಸ್ತ್ರಗಳನ್ನು ಮತ್ತು ಪೆಟ್ರೋಲ್ ಕ್ಯಾನ್‌ಗಳನ್ನು ಹಿಡಿದುಕೊಂಡು ಮಂಜುನಾಥ ಮರಣ ಹೊಂದಿದ್ದರ ವಿಚಾರದಲ್ಲಿ ದ್ವೇಷವನ್ನು ಹೊಂದಿ ನಮ್ಮ ಮನೆಯ ಮೇಲೆ ದಾಳಿ ಮಾಡಿ ನಮ್ಮಗಳನ್ನು ಸಾಯಿಸುವ ಉದ್ದೇಶದಿಂದ ಮನೆಗೆ ನುಗ್ಗಿ ಬಂದು ಮನೆ ಮುಂದೆ, ಒಳಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದರು. ಮನೆಯ ಒಳಗಿನ ವಸ್ತುಗಳ ಮೇಲೆ ಪೆಟ್ರೋಲ್ ಸುರಿದುಕೊಂಡಿದ್ದರಿಂದ ಮನೆಯಲ್ಲಿನ ಬೆಂಕಿಯು ಜ್ವಾಲೆ ಹೆಚ್ಚಾಗಿದ್ದು, ಸದರಿ ಬೆಂಕಿಯು ಅಕ್ರಮ ಗುಂಪಿನಲ್ಲಿದ್ದ ಇಬ್ಬರು, ಮೂವರಿಗೆ ತಗುಲಿ ಬೆಂಕಿಯಿಂದ ಗಾಯಗೊಂಡರು. ನಮ್ಮ ಮನೆಯಲ್ಲಿನ ವಸ್ತುಗಳು ಮತ್ತು ಕಟ್ಟಡವನ್ನು ನಾಶಪಡಿಸಿದ್ದರಿಂದ ಸುಮಾರು 10 ಲಕ್ಷ ರೂ.ಗಳಷ್ಟು ನಷ್ಟವಾಗಿರುತ್ತದೆ. ಈ ಕೃತ್ಯದಲ್ಲಿ ಭಾಗಿಯಾಗಿರುವವರಲ್ಲಿ ಬೆಂಕಿಯಿಂದ ಗಾಯಗೊಂಡಿರುವ ನಂದೀಶ್ ಮತ್ತು ಯೋಗೇಶ್ ಸೇರಿದಂತೆ ಹತ್ತು ಜನರ ಮೇಲೆ ದೂರು ನೀಡಿದ್ದು, ಪೊಲೀಸರು ಅವರ ಮೇಲೆ ಸೂಕ್ತ ಕ್ರಮ ಕೈಗೊಂಡಿರುತ್ತಾರೆ.

ಮಂಜುನಾಥನ ಮೇಲೆ ಯಾರಿಗೂ ಯಾವುದೇ ದ್ವೇಷ ಇಲ್ಲದಿದ್ದರೂ ಇಬ್ಬರ ನಡುವೆ ಮಧ್ಯಸ್ಥಿಕೆ ವಹಿಸಲು ಹೋಗಿ ಕೊಲೆಯಾಗಿ ಹೋಗಿದ್ದು, ಮನೆಗೆ ಆಧಾರವಾಗಿದ್ದ ಮಗನನ್ನು ಕಳೆದುಕೊಂಡಿರುವ ತಂದೆ, ತಾಯಿ ಹಾಗೂ ಪತ್ನಿ, ಇಬ್ಬರು ಮಕ್ಕಳಿಗೆ ಏನು ತೋಚದಂತಹ ಪರಿಸ್ಥಿತಿ ಎದುರಾಗಿದ್ದು, ನಮ್ಮನ್ನು ಅನಾಥರನ್ನಾಗಿ ಮಾಡಿರುವ ಆರೋಪಿಗಳಾದ ಶ್ರೀಮೂರ್ತಿ ಮತ್ತು ಶಿವಶಂಕರ್‌ರವರಿಗೆ ಕಠಿಣ ಶಿಕ್ಷೆಯಾಗಬೇಕೆಂದು ಆಗ್ರಹಿಸಿದ್ದಾರೆ. ಮಂಜುನಾಥ ಕೊಲೆಗೆ ಸಂಬಂಧಿಸಿದಂತೆ ಮಂಜುನಾಥನ ಹತ್ಯೆಗೆ ಮೂಲ ಕಾರಣ ಆರೋಪಿಗಳಾದ ಶ್ರೀಮೂರ್ತಿ ಮತ್ತು ಶಿವಶಂಕರ್ ಕುಟುಂಬವು ನಡೆಸುತ್ತಿರುವ ಅಕ್ರಮ ಮರಳು ದಂಧೆಯಾಗಿರುವುದಾಗಿ ಎಲ್ಲಾ ಕಡೆಗಳಿಂದ ಕೇಳಿ ಬರುತ್ತಿರುವುದಲ್ಲದೆ ಗ್ರಾಮಸ್ಥರ ಆರೋಪವಾಗಿದೆ. ಇನ್ನಾದರೂ ಪೊಲೀಸರು ನಿಸ್ಪಕ್ಷಪಾತವಾಗಿ ತನಿಖೆ ನಡೆಸಿ ತಾಲ್ಲೂಕಿನ ಗಡಿಭಾಗದಲ್ಲಿ ನಡೆಯುತ್ತಿರುವ ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಿದರೆ ಮುಂದೆ ನಡೆಯಬಹುದಾದ ಅಪರಾಧ ಕೃತ್ಯಗಳನ್ನು ತಡೆಯಬಹುದಾಗಿದೆ.

☯


ಎಸ್ಪಿ ಬಿ. ನಿಖಿಲ್



ಎಎಸ್ಪಿ ರವಿಶಂಕರ್


ಡಿವೈಎಸ್ಪಿ ನಂದಕುಮಾರ್



ಪಿಐ ಎಂ.ಬಿ. ಗೊರವನಕೊಳ್ಳ


ಪಿಐ ಕೆ. ಕಾಂತರಾಜ್


ಪಿಎಸ್‌ಐ ವಿಠ್ಠಲ್ ವೈ. ತಳವಾರ


ಪಿಎಸ್‌ಐ ಜಯರಾಮ್




ಮೃತ ಮಂಜುನಾಥನ ಮನೆ


ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸುತ್ತಿರುವ ಪೊಲೀಸ್ ಅಧಧಿಕಾರಿಗಳು


ಪಟ್ಟಣದಲ್ಲಿ ಮೃತನ ಸಂಬಂಧಿಕರು ನಡೆಸುತ್ತಿರುವ ಪ್ರತಿಭಟನೆ




ಸುಟ್ಟುಕರಕಲಾಗಿರುವ ಆರೋಪಿ ಶ್ರೀಮೂರ್ತಿ ಮನೆ


ಮೃತನ ಸಂಬಂಧಿಕರೊಂದಿಗೆ ಚರ್ಚಿಸುತ್ತಿರುವ ಪೊಲೀಸ್ ಅಧಿಕಾರಿಗಳು


ಬಂಧೋಬಸ್ತಿನಲ್ಲಿರುವ ಪೊಲೀಸರು


ಶವದ ಬಳಿ ಸೇರಿರುವ ಸಂಬಂಧಿಕರು


ಎಎಸ್‌ಐ ಮಂಜುನಾಥ್


ಆರೋಪಿಗಳನ್ನು ಬಂಧಿಸಿರುವ ಪೊಲೀಸರು


ಮೃತನ ಕುಟುಂಬಕ್ಕೆ ಸಾಂತ್ವನ ಹೇಳುತ್ತಿರುವ ಸಮಾಜದ ಮುಖಂಡರು

# ಅವನ ಮೇಲೆ ಯಾರ ‘ಕಣ್ಣು’ ಬಿತ್ತೋ...?!






**ನಿನ್ನ ಆಟ ನೋಡಿ ನಾನು ಹೆಮ್ಮೆ ಪಡಬೇಕೆಂದಿದ್ದರು ಆ ತಂದೆ! ಅಪ್ಪನಷ್ಟೇ ಅಲ್ಲ, ಮಗನೂ ದೇಶವೇ ಹೆಮ್ಮೆಪಡುವಂತೆ ಆಡಿದ! ಮಧ್ಯಮ ವರ್ಗದ ಕುಟುಂಬದ ಹುಡುಗ ಕ್ರಿಕೆಟ್ ಸಾಮ್ರಾಜ್ಯವನ್ನೇ ಕಟ್ಟಿದ! ಅವನಿಗಿನ್ನೂ ಜಸ್ಟ್ 36. ಅವನಿಗಿರುವ ‘ಫಿಟ್ನೆಸ್’ಗೆ ಕನಿಷ್ಠ ಇನ್ನೂ 3 ವರ್ಷ ಟೆಸ್ಟ್ ಕ್ರಿಕೆಟ್ ಆಡಬಹುದಿತ್ತು! ಆದರೆ ವೈಟ್ ಅಂಡ್ ವೈಟ್ ಜರ್ಸಿ ಕಳಚುವ ನಿರ್ಧಾರ ಮಾಡಿದವನು ಆ ನಿರ್ಧಾರದ ಪರ ದೃಢವಾಗಿ ನಿಂತು ಬಿಟ್ಟ! ಕಣ್ಣ ಮುಂದೆ 10 ಸಾವಿರ ಟೆಸ್ಟ್ ರನ್‌ಗಳ ಮೈಲುಗಲ್ಲನ್ನು ಎಡಗಾಲಿಂದ ಒದ್ದು ನಡೆದುಬಿಟ್ಟಿದ್ದಾನೆ ವಿರಾಟ್ ಕೊಹ್ಲಿ! ಅವನ ಮೇಲೆ ಯಾರ ಕೆಂಗಣ್ಣು ಬಿತ್ತೋ....?!**

ವಿರಾಟ್ ಕೊಹ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಕ್ಷಣ ಅಚ್ಚರಿ ಪಟ್ಟವರೆಷ್ಟೋ..... ಕಾರಣ, ಅದು ಅನಿರೀಕ್ಷಿತ.. ಆದರೆ ಅವನನ್ನು ಹತ್ತಿರದಿಂದ ಬಲ್ಲವರನ್ನು ಮಾತನಾಡಿಸಿದಾಗ ಸಿಕ್ಕ ಉತ್ತರ ಅದು ಅನಿರೀಕ್ಷಿತ ಅಲ್ಲವೇ ಅಲ್ಲ, ಅವನು ಕೆಲ ವಾರಗಳ ಹಿಂದೆಯೇ ಗಟ್ಟಿ ನಿರ್ಧಾರ ಮಾಡಿ ಬಿಟ್ಟಿದ್ದ.... ಎಂಬ ಉತ್ತರ ಸಿಗುತ್ತದೆ!

ಕಳೆದ ಆಸ್ಟ್ರೇಲಿಯಾ ಪ್ರವಾಸದಲ್ಲಿ ವಿರಾಟ್ ಕೊಹ್ಲಿ ಆಡಿದ ರೀತಿಯನ್ನು ಕಂಡಾಗ, ಇವನು ಅವನಲ್ಲ’ ಅನ್ನಿಸಿತ್ತು. ನಾವು ನೋಡಿದ ರನ್ ಮಷಿನ್ ಇವನೇನಾ ಎಂಬ ಪ್ರಶ್ನೆ ಹುಟ್ಟಿಕೊಂಡಿತ್ತು. ಪರ್ತ್ ಟೆಸ್ಟ್ ಪಂದ್ಯದಲ್ಲಿ ಬಾರಿಸಿದ ಶತಕವೊಂದನ್ನು ಹೊರತು ಪಡಿಸಿದರೆ ಆಸ್ಟ್ರೇಲಿಯಾದಲ್ಲಿ ಆಡಿದ ಆಟ ಆತನ ಘನತೆಗೆ, ಅವನೇ ಸೆಟ್ ಮಾಡಿದ್ದ ಬೆಂಚ್ ಮಾರ್ಕ್‌ಗೆ ಅವಮಾನದಂತಿತ್ತು. ತನ್ನ ಸಾಮರ್ಥ್ಯದ ಮೇಲೆಯೇ ಅವನಿಗೆ ಅನುಮಾನ ಬಂದಿದ್ದರೂ ಅಚ್ಚರಿಯಿಲ್ಲ.

ವಿರಾಟ್ ಕೊಹ್ಲಿ ಕ್ರಿಕೆಟಿಗನಾಗಬೇಕೆಂಬುದು ಅಪ್ಪನ ಕನಸು. ಅದರಲ್ಲೂ ಮಗನನ್ನು ಭಾರತ ಪರ ‘ವೈಟ್ ಅಂಡ್ ವೈಟ್’ನಲ್ಲಿ ನೋಡ ಬಯಸಿದ್ದರು ಪ್ರೇಮ್ ಕೊಹ್ಲಿ. ಆ ಕನಸನ್ನು ನನಸು ಮಾಡಲು ನಿಂತಾಗ ಅಪ್ಪನೇ ಇಲ್ಲವಾಗಿದ್ದರು. ವಿರಾಟ್ ಕೊಹ್ಲಿ ತಂದೆಯದ್ದು ಆನ್ ಲೈನ್ ಶೇರ್ ಟ್ರೇಡಿಂಗ್ ಬ್ಯುಸಿನೆಸ್. ಬಾಡಿಗೆ ಮನೆಯಲ್ಲಿ ಪುಟ್ಟ ಕುಟುಂಬದೊಂದಿಗೆ ವಾಸ. ಒಂದು ದಿನ ಆನ್‌ಲೈನ್ ಶೇರ್ ಟ್ರೇಡಿಂಗ್ ಅಕೌಂಟ್ ಕ್ರ್ಯಾಶ್ ಆಗಿ ಬಿಡುತ್ತದೆ. ಅದೇ ಕ್ಷಣ ಪ್ರೇಮ್‌ನಾಥ್ ಕೊಹ್ಲಿ ಅವರಿಗೆ ಸ್ಟ್ರೋಕ್ ಹೊಡೆದು ಮೆದುಳಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಅದಾದ ಕೆಲವೇ ವಾರಗಳಲ್ಲಿ ಹೃದಯಾಘಾತ. ಅದು ವಿರಾಟ್ ಕೊಹ್ಲಿ ಪಾಲಿಗೆ ಅತೀ ದೊಡ್ಡ ಆಘಾತ. ಬದುಕಿನ ದೊಡ್ಡ ಶಕ್ತಿಯಾಗಿದ್ದ, ಸ್ಫೂರ್ತಿಯಾಗಿದ್ದ ವ್ಯಕ್ತಿಯನ್ನು ವಿರಾಟ್ ಕಳೆದುಕೊಂಡಿದ್ದ.



2006ರ ಡಿಸೆಂಬರ್ ತಿಂಗಳು. ದೆಹಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ಕರ್ನಾಟಕ ವಿರುದ್ಧ ರಣಜಿ ಪಂದ್ಯವಾಡುತ್ತಿದ್ದ ವಿರಾಟ್. 2ನೇ ದಿನದಂತ್ಯಕ್ಕೆ 40 ರನ್ ಗಳಿಸಿ ಅಜೇಯನಾಗುಳಿದವನು ಮನೆಗೆ ಬಂದು ಗಾಢನಿದ್ರೆಗೆ ಜಾರಿದ್ದ. ಇದಕ್ಕಿದ್ದಂತೆ ಎಚ್ಚರವಾದಾಗ ಸಮಯ 2 ಗಂಟೆ. ತಂದೆ ಅಸಾಧ್ಯ ಎದೆನೋವಿನಲ್ಲಿ ಒದ್ದಾಡುತ್ತಿದ್ದರಂತೆ. ತಂದೆಯ ಎದೆಗೆ ಗುದ್ದಿ ಉಸಿರಾಟ ಪಂಪ್ ಮಾಡುವ ಪ್ರಯತ್ನ ಮಾಡುತ್ತಾನೆ ಕೊಹ್ಲಿ. ಆದರೆ ತಂದೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ‘ಕ್ರಿಕೆಟ್ ನಿನ್ನ ಉಸಿರು’ ಎಂದಿದ್ದ ತಂದೆ ಮುಂಜಾನೆ 2.30ಕ್ಕೆ ಮಗನ ಮುಂದೆಯೇ ಕೊನೆಯ ಉಸಿರು ಎಳೆದು ಬಿಟ್ಟರು.

ಅತ್ತ ಉಸಿರು ಚೆಲ್ಲಿ ಮಲಗಿದ್ದ ಅಪ್ಪ, ಇತ್ತ ರಣಜಿ ಪಂದ್ಯ. ಅಪ್ಪನ ಕನಸನ್ನು ನಿಜ ಮಾಡಲು ನಿಂತವನು ತಂದೆ ಸತ್ತು ಮಲಗಿದ್ದ ದಿನವೇ ಮೈದಾನಕ್ಕಿಳಿದು ಬಿಟ್ಟ. ಆ ಪಂದ್ಯದಲ್ಲಿ ಆಡಿದ್ದ ಕರ್ನಾಟಕದ ಒಬ್ಬ ಆಟಗಾರ ಆ ಕ್ಷಣವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದರು. ‘ವಿರಾಟ್ ಕೊಹ್ಲಿಯ ಕಣ್ಣುಗಳಲ್ಲಿ ಬೆಂಕಿಯನ್ನು ಕಂಡಿದ್ದೆ ಆ ದಿನ’ ಎಂದಿದ್ದರು ಆ ಕ್ರಿಕೆಟರ್.

90 ರನ್ ಗಳಿಸಿ ಔಟಾದ ಕೊಹ್ಲಿ ದೆಹಲಿ ತಂಡಕ್ಕೆ ಸೋಲು ತಪ್ಪಿಸಿ ಮೈದಾನದಿಂದ ನೇರವಾಗಿ ಸ್ಮಶಾನಕ್ಕೆ ತೆರಳುತ್ತಾನೆ, ತಂದೆಯ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗುತ್ತಾನೆ. ಅದೇ ದಿನ ಅಣ್ಣನಿಗೆ ಒಂದು ಮಾತು ಹೇಳುತ್ತಾನೆ... ‘ನಾನು ಭಾರತ ಪರ ಆಡಿಯೇ ಆಡುತ್ತೇನೆ, ತಂದೆಯ ಕನಸನ್ನು ನಿಜ ಮಾಡುತ್ತೇನೆ’ ಎಂದು. ವಿರಾಟ್ ಕೊಹ್ಲಿ ಭಾರತ ಪರ ಆಡಿದ್ದಷ್ಟೇ ಅಲ್ಲ, ಚರಿತ್ರೆಯನ್ನೇ ಬರೆದು ಬಿಟ್ಟ. ಹೈಯೆಸ್ಟ್ ಲೆವೆಲ್ ಕ್ರಿಕೆಟ್ ಆಡು ಮಗನೇ ಎಂದಿದ್ದರು ಆ ತಂದೆ..! ಮಗ ಹಿಮಾಲಯವನ್ನೇ ಏರಿ ಬಿಟ್ಟ..!

‘ಕ್ರಿಕೆಟ್’ನ ಮೂರೂ ಪ್ರಕಾರಗಳಲ್ಲಿ ಜಗತ್ತಿನ ನಂ.1 ದಾಂಡಿಗನೆನಿಸಿಕೊಳ್ಳುವುದು ಕೊಹ್ಲಿಯಂಥಾ ಕೊಹ್ಲಿಗೆ ಮಾತ್ರ ಸಾಧ್ಯ. ವಿರಾಟ್ ಕೊಹ್ಲಿ ನುಗ್ಗಿ ಹೊಡೆದವನು. ಅವನು ಯಾರದ್ದೋ ಕೃಪೆಯಿಂದ ಆಡಿದವನೂ ಅಲ್ಲ, ಯಾವುದೋ ಲಾಬಿಯಿಂದ ಇಲ್ಲಿಯವರೆಗೆ ಬಂದವನೂ ಅಲ್ಲ. ಅವನದ್ದು ಪ್ಯೂರ್ ಮೆರಿಟ್.

ಯಾರೋ ಚಿಲ್ಲು-ಪಿಲ್ಲುಗಳನ್ನು ಹೊಡೆದು ಸ್ಟಾರ್ ಆದವನಲ್ಲ ವಿರಾಟ್ ಕೊಹ್ಲಿ. ಅವನದ್ದು ಮದ್ದಾನೆಗಳ ಮದವನ್ನು ಕರಗಿಸಿದ ಭುಜಬಲ. ಕೂಕಬುರ ಚೆಂಡು ಭುಜದೆತ್ತರಕ್ಕೆ ನುಗ್ಗಿ ಬರುವ ಆಸ್ಟ್ರೇಲಿಯಾದಲ್ಲಿ, ಡ್ಯೂಕ್ ಬಾಲ್ ಯರ್ರಾ ಬಿರ್ರಿ ಸ್ವಿಂಗ್ ಆಗುವ ಇಂಗ್ಲೆಂಡ್‌ನಲ್ಲಿ, ಕೆಂಪು ಚೆಂಡು ಬೆಂಕಿ ಚೆಂಡಿನಂತೆ ಭಾಸವಾಗುವ ದಕ್ಷಿಣ ಆಫ್ರಿಕಾದಲ್ಲಿ ವಿರಾಟ್ ಕೊಹ್ಲಿ ಸಾಧಿಸಿದ ಟೆಸ್ಟ್ ಅಧಿಪತ್ಯ ಕ್ರಿಕೆಟ್ ಜಗತ್ತಿನಲ್ಲಿ ಚರಿತ್ರೆಯಾಗಿ ಉಳಿಯುಂಥದ್ದು. ಡೇಲ್ ಸ್ಟೇನ್, ಮಿಚೆಲ್ ಜಾನ್ಸನ್, ಜೇಮ್ಸ್ ಆ್ಯಂಡರ್ಸನ್, ಸ್ಟುವರ್ಟ್ ಬ್ರಾಡ್, ಕಗಿಸೊ ರಬಾಡರಂತಹ ಘಾತಕ ವೇಗಿಗಳ ಮುಂದೆ ದೃಢವಾಗಿ ನಿಂತವನು ವಿರಾಟ್ ಕೊಹ್ಲಿ.

2011ರ ಆಸ್ಟ್ರೇಲಿಯಾ ಪ್ರವಾಸದ ಕಟ್ಟ ಕಡೆಯ ಟೆಸ್ಟ್ ಪಂದ್ಯ. ಸರಣಿಯುದ್ದಕ್ಕೂ ಎಡವಿದ್ದ ಕೊಹ್ಲಿಗೆ ಕೊನೆಗೊಂದು ಅವಕಾಶವನ್ನು ಕೊಡಲಾರದ ಕ್ಲೂಲೆಸ್ ಆಸ್ಟ್ರೇಲಿಯಾದ ಬಲಾಢ್ಯ ಬೌಲಿಂಗ್ ಪಡೆಯ ಮುಂದೆ ಎದೆಯುಬ್ಬಿಸಿ ನಿಂತ ವಿರಾಟ್ ಅಡಿಲೇಡ್‌ನಲ್ಲಿ ಅಮೋಘ ಶತಕ ಬಾರಿಸಿ ಬಿಟ್ಟ.

ಅದಾಗಿ ಎರಡು ವರ್ಷಗಳ ನಂತರ... 2014ರ ಇಂಗ್ಲೆಂಡ್ ಪ್ರವಾಸ. ಸ್ವಿಂಗ್ ಸುಲ್ತಾನ ಜೇಮ್ಸ್ ಆ್ಯಂಡರ್ಸನ್ ಮುಂದೆ ವಿರಾಟ್ ಕೊಹ್ಲಿ ಅಕ್ಷರಶಃ ಕ್ಲೂಲೆಸ್ ಆಗಿದ್ದ. ಆ ಸರಣಿಯಲ್ಲಿ ನಾಲ್ಕು ಬಾರಿ ಆ್ಯಂಡರ್ಸನ್‌ಗೆ ವಿಕೆಟ್ ಒಪ್ಪಿಸಿ ಬಿಟ್ಟ ಕೊಹ್ಲಿ. ಅದೇ ಕೊನೆ, ನಂತರ ಆ್ಯಂಡರ್ಸನ್‌ಗೆ ಒಮ್ಮೆಯಾದರೂ ಔಟಾಗಿದ್ದರೆ ಕೇಳಿ.

ಅದಾಗಿ ನಾಲ್ಕು ವರ್ಷಗಳ ನಂತರ ಎದುರಾದ ಇಂಗ್ಲೆಂಡ್ ಪ್ರವಾಸದಲ್ಲಿ ಅದೇ ಆ್ಯಂಡರ್ಸನ್ ಮುಂದೆ ವಿಜೃಂಭಿಸಿದ ವಿರಾಟ್ ಕೊಹ್ಲಿ ಒಂದೇ ಸರಣಿಯಲ್ಲಿ 500+ ರನ್ ಹೊಡೆದು ಬಿಟ್ಟ. ಬಿದ್ದ ಜಾಗದಲ್ಲೇ ಧೂಳಿನಿಂದ ಎದ್ದು ನಿಲ್ಲುವುದು ‘ಗ್ರೇಟೆಸ್ಟ್ ಕ್ರಿಕೆಟರ್’ಗಳ ಲಕ್ಷಣ.

ಅಸೀಮ ಬಲದ ವಿರಾಟ್ ಕೊಹ್ಲಿ ಕಳೆದ 2-3 ವರ್ಷಗಳಲ್ಲಿ ಏಕೆ ಮಂಕಾದ...? ನನ್ನ ಪ್ರಕಾರ ನಾಯಕತ್ವ ತ್ಯಜಿಸಿದ್ದೇ ಕೊಹ್ಲಿ ಪತನಕ್ಕೆ ಬರೆದ ಮುನ್ನುಡಿ. 2021ರಲ್ಲಿ ಟಿ20 ಕ್ರಿಕೆಟ್ ನಾಯಕತ್ವ ಬೇಡ ಎಂದವನು ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ನಾಯಕನಾಗಿ ಮುಂದುವರಿಯಲು ಬಯಸಿದ್ದ. ಆದರೆ ಆಗಿನ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಇದನ್ನು ಒಪ್ಪಲಿಲ್ಲ. ವೈಟ್ ಬಾಲ್ ಕ್ರಿಕೆಟ್‌ಗೆ ಒಬ್ಬನೇ ನಾಯಕನಿರಬೇಕೆಂಬ ಕಾರಣ ಮುಂದಿಟ್ಟು ಕೊಹ್ಲಿಯನ್ನು ಏಕದಿನ ತಂಡದ ನಾಯಕತ್ವದಿಂದ ಪದಚ್ಯುತಗೊಳಿಸಲಾಯಿತು. ಸಿಟ್ಟಿಗೆದ್ದ ವಿರಾಟ್ ಟೆಸ್ಟ್ ತಂಡದ ನಾಯಕತ್ವವನ್ನೂ ತ್ಯಜಿಸಿ ಬಿಟ್ಟ. ಅವತ್ತು ಕೊಹ್ಲಿಯನ್ನು ಹಣಿಯಲೆಂದೇ ವೈಟ್ ಬಾಲ್ ಕ್ರಿಕೆಟ್‌ಗೆ ಒಬ್ಬನೇ ನಾಯಕ ಎಂಬ ನಿಯಮ ಮಾಡಿದ್ದರೋ ಗೊತ್ತಿಲ್ಲ. ಈಗ ನೋಡಿ, ಮೂವರು ಫಾರ್ಮ್ಯಾಟ್‌ಗಳಿಗೆ ಮೂವರು ನಾಯಕರು..!

ಟೆಸ್ಟ್ ಕ್ರಿಕೆಟ್ ಇರಲಿ, ಏಕದಿನವಿರಲಿ, ಟಿ20 ಇರಲಿ.. ವಿರಾಟ್ ಕೊಹ್ಲಿಯ ಸರ್ವಶ್ರೇಷ್ಠ ಆಟ ಹೊರ ಬಂದದ್ದು ನಾಯಕನಾಗಿದ್ದಾಗ. ಹಾಗಂತ ನಾಯಕತ್ವ ಬಿಟ್ಟ ಮೇಲೆ ಅವನು ಕಳಪೆಯೇನೂ ಆಗಿರಲಿಲ್ಲ. ನಾಯಕತ್ವದ ಜವಾಬ್ದಾರಿ ಇದ್ದಾಗ ಆಟದಲ್ಲಿ ಕಾಣುತ್ತಿದ್ದ ಕಿಚ್ಚು ಮಾಯವಾಗಿತ್ತಷ್ಟೇ.



ಜಸ್ಟ್ 36 ವರ್ಷ. ಅವನಿಗಿರುವ ಫಿಟ್ನೆಸ್‌ಗೆ ಕನಿಷ್ಠ ಮೂರು ವರ್ಷಗಳ ಟೆಸ್ಟ್ ಕ್ರಿಕೆಟ್ ಉಳಿದಿತ್ತು ಅವನಲ್ಲಿ. ಆದರೆ ವೈಟ್ ವೈಟ್ ಜರ್ಸಿ ಕಳಚುವ ನಿರ್ಧಾರ ಮಾಡಿದವನು ಆ ನಿರ್ಧಾರದ ಪರ ದೃಢವಾಗಿ ನಿಂತು ಬಿಟ್ಟ. ಕಣ್ಣ ಮುಂದೆ 10 ಸಾವಿರ ಟೆಸ್ಟ್ ರನ್‌ಗಳ ಮೈಲುಗಲ್ಲನ್ನು ಎಡಗಾಲಿಂದ ಒದ್ದು ನಡೆದು ಬಿಟ್ಟಿದ್ದಾನೆ ವಿರಾಟ್ ಕೊಹ್ಲಿ. ಅವನ ಮೇಲೆ ಯಾರ ಕಣ್ಣು- ಕೆಂಗಣ್ಣು ಬಿತ್ತೋ...?! ಇಷ್ಟಕ್ಕೂ ಅವನು ದಾಖಲೆಗಳಿಗಾಗಿ ಆಡಿದವನಲ್ಲ...



**ದೇಹದ ಆರೋಗ್ಯ ಕಾಪಾಡುವ ಮತ್ತು ಮೈಮನ ಹಗುರವಾಗಿಸುವ ಸಲುವಾಗಿ ಹುಟ್ಟಿಕೊಂಡ ಮಸಾಜ್ ಸೆಂಟರ್‌ಗಳು ಇದೀಗ ಹೈಟೆಕ್ ವೇಶ್ಯಾವಾಟಿಕೆ ನಡೆಸುವ ಅಡ್ಡೆಯಾಗುತ್ತಿವೆ. ಮೇಲಿಂದ ಮೇಲೆ ನಡೆಯುತ್ತಿರುವ ದಾಳಿಗಳಲ್ಲಿ ಮಸಾಜ್ ಸೆಂಟರ್‌ನಲ್ಲಿ ನಡೆಯುತ್ತಿರುವ ವೇಶ್ಯಾವಾಟಿಕೆಗಳ ಬಗ್ಗೆಯೇ ಸುದ್ದಿಗಳು ಹೊರಬರುತ್ತಿವೆ. ಅದರಲ್ಲೂ ಒಂದು ಕಡೆ ಮುಚ್ಚಿಸಿದರೆ ಮತ್ತೊಂದು ಕಡೆ ಅದನ್ನು ತೆರೆದು ಕಮಾಯಿ ಮಾಡುವುದು ಈ ದಂಧೆ ನಡೆಸುವವರಿಗೆ ಕರಗತವಾಗಿದೆ. ಹೀಗಾಗಿ ಇಂತಹ ಅಡ್ಡೆಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವುದು ಇತ್ತೀಚೆಗಿನ ಬೆಳವಣಿಗೆಯಾಗಿದೆ.**

# ಮಂಡ್ಯದಲ್ಲಿ ಸ್ಪಾ ಹೆಸರಲ್ಲಿ ಹೈಟೆಕ್ ವೇಶ್ಯಾವಾಟಿಕೆ!

**ಮಂಡ್ಯ**

✍ ಬಿ.ಎಂ. ಲವಕುಮಾರ್

ಕೇವಲ ದೊಡ್ಡ ದೊಡ್ಡ ನಗರಗಳಲ್ಲಷ್ಟೆ ನಡೆಯುತ್ತಿದ್ದ ಮಸಾಜ್ ಅಂಡ್ ಸ್ಪಾ ಸೆಂಟರ್ ಇದೀಗ ಗ್ರಾಮೀಣ ಪ್ರದೇಶಕ್ಕೂ ಕಾಲಿಟ್ಟಿವೆ. ಹೆದ್ದಾರಿಗಳ ಮುಖ್ಯರಸ್ತೆಯಲ್ಲಿಯೇ ತೆರೆದುಕೊಳ್ಳುತ್ತಿದ್ದು, ಗ್ರಾಮೀಣ ಪ್ರದೇಶದ ಜನರ ಕಣ್ಣಿಗೆ ಮಣ್ಣೆರಚಿ ಒಳಗೊಳಗೆ ದಂಧೆ ನಡೆಸುವ ಮಟ್ಟಕ್ಕೆ ಹೋಗುತ್ತಿರುವುದು ಕಂಡು ಬರುತ್ತಿದೆ. ಇನ್ನು ಮಸಾಜ್ ಸೆಂಟರ್ ಹೆಸರನ್ನು ದಂಧೆ ನಡೆಸುವವರಿಂದ ನಿಜವಾಗಿ ಮಸಾಜ್ ಸೆಂಟರ್ ನಡೆಸಿ ಬದುಕು ಕಟ್ಟಿಕೊಳ್ಳುತ್ತಿರುವವರನ್ನು ಜನ ಅನುಮಾನದಿಂದ ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇವತ್ತಿನ ದಿನಗಳಲ್ಲಿ ಬಹುತೇಕರ ಕಣ್ಣು ಹಣದ ಮೇಲೆಯೇ ನೆಟ್ಟಿರುವುದರಿಂದ ಮತ್ತು ಅನೈತಿಕ ಮಾರ್ಗದಲ್ಲಿ ಹೆಚ್ಚಿನ ಹಣ ಸಂಪಾದಿಸ ಬಹುದು ಎಂಬ ಕಾರಣದಿಂದಾಗಿ ವೇಶ್ಯಾವಾಟಿಕೆಯನ್ನು ಬೇರೆ, ಬೇರೆ,ಮುಖವಾಡಗಳನ್ನು ಧರಿಸಿ ಆ ಮೂಲಕ ನಡೆಸುವ ಮಟ್ಟಕ್ಕೆ ಬಂದು ನಿಂತಿದ್ದಾರೆ. ಹೀಗಾಗಿ ಬಹುತೇಕ ಸ್ಪಾ ಸೆಂಟರ್‌ಗಳು ಸೆಕ್ಸ್ ಮಸಾಜ್ ಸೆಂಟರ್ ಆಗಿ ಪರಿವರ್ತನೆಗೊಂಡಿದೆ. ಮಸಾಜ್ ನೆಪದಲ್ಲಿ ವೇಶ್ಯಾವಾಟಿಕೆಯನ್ನು ಎಗ್ಗಿಲ್ಲದೆ ನಡೆಸಲಾಗುತ್ತಿದೆ. ಈ ದಂಧೆಯಲ್ಲಿ ಮಹಿಳೆಯರು ತೊಡಗಿಕೊಂಡಿದ್ದು ಅವರಿಗೆ ಬೆಂಗಾವಲಾಗಿ ಒಂದಷ್ಟು ಮಂದಿ ಪುರುಷರು ನಿಂತಿದ್ದು, ಹೆಣ್ಮಕ್ಕಳಿಂದ ಹಿಡಿದು ಗಿರಾಕಿಗಳನ್ನು ಕರೆತರುವ ತನಕದ ಜವಾಬ್ದಾರಿಯನ್ನು ಸಲೂನ್ ಹಿಂದೆ ನಿಂತು ಅವರು ನೋಡಿಕೊಳ್ಳುತ್ತಿದ್ದಾರೆ.

ಈಗಾಗಲೇ ವೇಶ್ಯಾವಾಟಿಕೆಗೆ ಹಲವು ಕ್ಷೇತ್ರಗಳನ್ನು ದಂಧೆಕೋರರು ಬಳಸಿಕೊಂಡಿದ್ದಾರೆ. ಅವರು ಯೋಗ ಸೆಂಟರ್‌ನ್ನು ಕೂಡ ಬಿಟ್ಟಿಲ್ಲ. ಹೀಗಾಗಿ ತಮ್ಮ ದಂಧೆ ಯಾವುದೇ ಅಡೆತಡೆಗಳಿಲ್ಲದೆ ನಡೆಯಬೇಕೆಂಬ ಕಾರಣಕ್ಕಾಗಿ ಬಹುಕೃತ ವೇಷವನ್ನು ತೊಡುತ್ತಿದ್ದಾರೆ. ಪ್ರತಿಷ್ಠಿತ ಕಾಲೇಜು ಪಕ್ಕವೇ ಮಸಾಜ್ ಸೆಂಟರ್ ತೆರೆದು ಶ್ರೀಮಂತ ಸ್ಟುಡೆಂಟ್‌ಗಳನ್ನೇ ಟಾರ್ಗೆಟ್ ಮಾಡಿ ಹಣ ಪೀಕುವ ಮಟ್ಟಕ್ಕೆ ಕೆಲವರು ಬಂದು ನಿಂತಿದ್ದಾರೆ. ಜತೆಗೆ ಮಸಾಜ್ ಸೆಂಟರ್‌ಗೆ ಉತ್ತರ ಭಾರತ ಮಾತ್ರವಲ್ಲದೆ ಬಾಂಗ್ಲಾ ಮತ್ತು ನೇಪಾಳದ ಹೆಣ್ಮಕ್ಕಳನ್ನು ಕರೆತಂದು ಅವರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಾರೆ ಎನ್ನುವುದಾದರೆ ಇದರ ಹಿಂದಿನ ಜಾಲ ಎಷ್ಟು ದೊಡ್ಡ ಮಟ್ಟದಲ್ಲಿರಬಹುದು? ಇಲ್ಲಿ ದೊಡ್ಡ ದೊಡ್ಡ ಕುಳಗಳೇ ಕೆಲಸ ಮಾಡುತ್ತಿವೆ ಎನ್ನುವುದನ್ನು ತಳ್ಳಿ ಹಾಕಲಾಗದು.

ಇನ್ನು ವೇಶ್ಯಾವಾಟಿಕೆ ಎಲ್ಲಿ ನಡೆಯುತ್ತಿದೆ? ಎಲ್ಲಿ ನಡೆಯುತ್ತಿಲ್ಲ? ಎಂಬುದನ್ನು ಹೇಳುವುದೇ ಕಷ್ಟವಾಗಿದೆ. ಪೊಲೀಸರ ಮತ್ತು ಜನರ ಕಣ್ಣಿಗೆ ಮಣ್ಣೆರಚುವ ಸಲುವಾಗಿ



ಬೇರೆ, ಬೇರೆ ವೇಷಗಳನ್ನು ಧರಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಬೇರೆ, ಬೇರೆ ಕ್ಷೇತ್ರವನ್ನೆಲ್ಲ ಬಳಸಿಕೊಳ್ಳುತ್ತಿರುವುದು ದುರಂತದ ಸಂಗತಿಯಾಗಿದೆ. ಬ್ಯೂಟಿಪಾರ್ಲರ್, ಮಸಾಜ್ ಸೆಂಟರ್, ಪಿಜಿ, ಯೋಗ ತರಗತಿ, ಆಯುರ್ವೇದಿಕ್ ಸೆಂಟರ್ ಹೀಗೆ ಕೆಲವೊಂದು ನಾಮಫಲಕವನ್ನು ಕಟ್ಟಡದ ಮುಂದೆ ನೇತು ಹಾಕಿಕೊಂಡು ಒಳಗೆ ದಂಧೆ ನಡೆಸಿ ಸಿಕ್ಕಿಬಿದ್ದ ಉದಾಹರಣೆಗಳು ಬಹಳಷ್ಟಿವೆ.

ಯೋಗ ತನ್ನದೇ ಆದ ಖ್ಯಾತಿಯನ್ನು ಪಡೆದಿದೆ ಇದರ ಹೆಸರಲ್ಲಿಯೂ ಮೈಸೂರಿನಲ್ಲಿ ದಂಧೆ ನಡೆಸಿ ಸಿಕ್ಕಬಿದ್ದ ಪ್ರಕರಣಗಳಿವೆ. ಇಷ್ಟೇ ಅಲ್ಲದೆ ಬ್ಯೂಟಿಪಾರ್ಲರ್ ಮೂಲಕ ಸಾವಿರಾರು ಹೆಣ್ಮಕ್ಕಳು ಜೀವನ ಕಂಡುಕೊಂಡಿದ್ದಾರೆ. ಹೀಗಿರುವಾಗ ಬ್ಯೂಟಿ ಪಾರ್ಲರ್ ತೆರೆದು ಅದರಲ್ಲೂ ದಂಧೆ ನಡೆಸಿ ನಿಯತ್ತಾಗಿ ದುಡಿದು ಜೀವನ ಮಾಡುವ ಹೆಣ್ಮಕ್ಕಳ ಘನತೆಗೆ ಧಕ್ಕೆ ತಂದಿದ್ದಾರೆ. ಇದರ ಜತೆಗೆ ಆಯುರ್ವೇದಿಕ್ ಮಸಾಜ್ ನೆಪದಲ್ಲಿ ವೇಶ್ಯಾವಾಟಿಕೆ ನಡೆಸಿ ಸಿಕ್ಕಿಬಿದ್ದಿದ್ದಾರೆ.

ಈಗ ಮಸಾಜ್ ಸೆಂಟರ್‌ಗಳಂತು ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿವೆ. ಈ ಮಸಾಜ್ ಸೆಂಟರ್ ಪೈಕಿ ಹೆಚ್ಚಿನವು ಬರೀ ಗಂಡಸರ ಮಸಾಜ್‌ಗಾಗಿ ತೆರೆದವು ಎಂದರೆ ತಪ್ಪಾಗದು. ಬಾಡಿ, ಹೆಡ್ ಮಸಾಜ್ ಎನ್ನುವ ಪೋಟೋಗಳನ್ನು ಹಾಕಿ ಒಳಗೆ ಎಲ್ಲದಕ್ಕೂ ಹೆಣ್ಣು ಮಕ್ಕಳ ಕೈನಲ್ಲಿ ಮಸಾಜ್ ಮಾಡಿಸಿ ಹಣ ಪೀಕುತ್ತಾರೆ. ಅಷ್ಟೇ ಅಲ್ಲದೆ ಹಣಕ್ಕಾಗಿ ವೇಶ್ಯಾವಾಟಿಕೆಯನ್ನು ನಡೆಸುತ್ತಾರೆ. ಇದಕ್ಕೆಂದೇ ಕೆಲವೊಂದು ಆಪ್‌ಗಳನ್ನು ಬಳಸಿಕೊಂಡು ಅದರ ಮೂಲಕವೇ ಜನರನ್ನು ಕರೆತರುತ್ತಿದ್ದಾರೆ ಎನ್ನುವುದು ಅಷ್ಟೇ ಸತ್ಯ.

ಈ ಮಸಾಜ್ ಸೆಂಟರ್‌ಗಳ ಮಾಲೀಕರು ಒಂದು ಕಡೆ ಪೊಲೀಸರ ದಾಳಿಯಾದರೆ ಅಲ್ಲಿ ಮುಚ್ಚಿ ಮತ್ತೊಂದು ಕಡೆ ತೆರೆಯುವ ಸಾಮರ್ಥ್ಯ ಹೊಂದಿದ್ದಾರೆ. ಗಿರಾಕಿಗಳನ್ನು ಆನ್‌ಲೈನ್ ಮೂಲಕವೇ ಹುಡುಕಿಕೊಳ್ಳುವುದರಿಂದ ಅವರಿಗೆ ಯಾವ ತೊಂದರೆಯೂ ಆಗುವುದಿಲ್ಲ, ಅವರು ಒಂದು ಕಡೆ ದಾಳಿಯಾಗಿ ಅದನ್ನು ಮುಚ್ಚಿಸಿದರೆ ಮತ್ತೊಂದು ಕಡೆ ಅದನ್ನು ತೆರೆದು ಮತ್ತೆ ಅದೇ ದಂಧೆ ಮಾಡುತ್ತಾರೆ. ಹೀಗಾಗಿ ಮಸಾಜ್ ಸೆಂಟರ್ ಹೆಸರಲ್ಲಿ ನಡೆಯುವ ದಂಧೆಯನ್ನು ನಿಲ್ಲಿಸುವುದು ಅಷ್ಟೊಂದು ಸುಲಭವಾಗಿಲ್ಲ.

ಬಹುತೇಕ ಕಡೆಗಳಲ್ಲಿ ಸ್ಪಾಗಳಿದ್ದು ಎಲ್ಲದರಲ್ಲಿಯೂ ದಂಧೆ ನಡೆಯುತ್ತದೆ ಎಂದರೆ ತಪ್ಪಾಗುತ್ತದೆ. ಆದರೆ ಕೆಲವರು ಇದನ್ನು ಬಂಡವಾಳವಾಗಿಸಿಕೊಂಡು ತಮ್ಮ ದಂಧೆಯನ್ನು ಮುಂದುವರೆಸುತ್ತಾರೆ. ಮೈಸೂರಿನಲ್ಲಿ ನಡೆದ ದಾಳಿಗಳ ವೇಳೆ ಒಟ್ಟಾಕ್ಕೆಯೇ ಬೇರೆ, ಬೇರೆ ಕಡೆಗಳಲ್ಲಿ ಮಸಾಜ್ ಸೆಂಟರ್ ತೆರೆದು ದಂಧೆ ನಡೆಸಿದ ಪ್ರಕರಣಗಳು ಬೆಳಕಿಗೆ ಬಂದಿದ್ದವು. ಇದರಲ್ಲಿ ಕೈತುಂಬಾ ಹಣ ಬರುವುದರಿಂದ ಪೊಲೀಸರು ಚಾಪೆ ಕೆಳಗೆ ತೂರಿದರೆ, ದಂಧೆ ನಡೆಸುವವರು ರಂಗೋಲಿ ಕೆಳಗೆ ನುಸುಳಲು ತಯಾರಿರುತ್ತಾರೆ. ಏಕೆಂದರೆ ಅವರ ಬೆನ್ನಿಗೆ ದೊಡ್ಡ ಗ್ಯಾಂಗೇ ನಿಂತಿರುತ್ತದೆ.

ಇಲ್ಲಿವರೆಗೆ ಮೈಸೂರು, ಮಂಡ್ಯ ಮುಂತಾದ ನಗರಗಳಲ್ಲಿ ಸ್ಪಾ ತೆರೆದು ಅಲ್ಲಿ ವೇಶ್ಯಾವಾಟಿಕೆ ನಡೆಸಿ ಸಿಕ್ಕಿ ಬಿದ್ದು ಗಂಟುಮೂಟೆ ಕಟ್ಟಿದ್ದ ರಾಣಿ ಎಂಬಾಕೆ ಇದೀಗ ನಗರದ ಬೆಂಗಳೂರು-ಮೈಸೂರು ಹೆದ್ದಾರಿ ಪಕ್ಕದಲ್ಲೇ ಕ್ಲೌಡ್-11 ಹೆಸರಿನ ಸಲೂನ್-ಸ್ಪಾ ತೆರೆದು ಅಲ್ಲಿ ಕೂಡ ಎಂದಿನ ತನ್ನ ದಂಧೆಯನ್ನು ನಡೆಸುತ್ತಿದ್ದಳು. ಆದರೆ ಅದು ಮತ್ತೆ ಪೊಲೀಸರು ಮತ್ತು ಒಡನಾಡಿ ಸಂಸ್ಥೆಯ ದಾಳಿಯಿಂದ ಬಯಲಾಗಿದೆ.

ಹಾಗೆ ನೋಡಿದರೆ ರಾಣಿಗೆ ದಾಳಿ, ಕೋರ್ಟ್, ಜೈಲು ಯಾವುದೂ ಹೊಸತಲ್ಲ ವೇಶ್ಯಾವಾಟಿಕೆಗೆ ಸಂಬಂಧಿಸಿದಂತೆ ಈಕೆಯ ಮೇಲೆ ಪ್ರಕರಣಗಳಿವೆ. ಆದರೆ ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಈಕೆ ತನ್ನ ದಂಧೆ ಮುಂದುವರೆಸಿದ್ದು, ಕಾಲೇಜು, ಹುಡುಗ, ಹುಡುಗಿಯರನ್ನೇ ಟಾರ್ಗೆಟ್ ಮಾಡಿ ಕಮಾಯಿ ಮಾಡಿಕೊಳ್ಳುತ್ತಿದ್ದಳು. ಇವಳು ಮಂಡ್ಯದ ಹೊರವಲಯದಲ್ಲಿ ಪ್ರತಿಷ್ಠಿತ ಕಾಲೇಜು




ಪಕ್ಕದಲ್ಲಿಯೇ ತನ್ನ ಸಲೂನ್ ಆರಂಭಿಸಿದ್ದಳು. ತನ್ನ ಸಲೂನ್ ಮೇಲಂತಸ್ತಿನ ಮಹಡಿಯಲ್ಲಿ ಟ್ಯುಟೋರಿಯಲ್ ತರಗತಿಗಳು ನಡೆಯುತ್ತಿತ್ತು. ಹೀಗಾಗಿ ಇಂತಹ ಜಾಗದಲ್ಲಿ ತನ್ನ ವ್ಯವಹಾರ ಮಾಡುತ್ತಿದ್ದಳು.

ಸದಾ ವಿದ್ಯಾರ್ಥಿಗಳು ಮತ್ತು ಇನ್ನಿತರರು ಓಡಾಡುತ್ತಿದ್ದುದರಿಂದ ತಮ್ಮ ಸಲೂನ್‌ಗೆ ಗಿರಾಕಿಗಳು, ಬಂದು ಹೋದರೂ ಅನುಮಾನ ಬರದಂತೆ ನೋಡಿಕೊಂಡಿದ್ದಳು. ಆದರೆ ಎಷ್ಟು ದಿನ ಪಾಪದ ಕೃತ್ಯಗಳು ನಡೆಯುತ್ತವೆ? ಎಲ್ಲದಕ್ಕೂ ಅಂತ್ಯ ಅಂಥ ಇದ್ದೇ ಇರುತ್ತದೆ. ಅದರಂತೆ ರಾಣಿ ಮುಖವಾಡ ಬಯಲಾಗಿದೆ. ಈಕೆ ಕಾಲೇಜಿಗೆ ಬರುವ ವಿದ್ಯಾರ್ಥಿನಿಯರು, ಹಳ್ಳಿಗಾಡಿನ ಯುವತಿಯರನ್ನೇ ಟಾರ್ಗೆಟ್ ಮಾಡಿ ಅಮಾಯಕ ಯುವತಿಯರನ್ನು ಗುರುತಿಸಿ ಅವರನ್ನು ಸಲೂನ್‌ಗೆ ಬರುವಂತೆ ಮಾಡಿಕೊಂಡು ಅವರಿಗೆ ಒಳ್ಳೆಯ ತಿನಿಸುಗಳು, ಒಳ್ಳೆಯ ಬಟ್ಟೆಗಳನ್ನು ಕೊಡಿಸಿ ವಿಶ್ವಾಸ ಗಳಿಸುತ್ತಿದ್ದಳು. ಅವರ ಮನಸ್ಸನ್ನು ಬದಲಾಯಿಸಿ, ವಿಲಾಸಿ ಬದುಕು ತೋರಿಸಿ ಹಣವನ್ನು ಸುಲಭವಾಗಿ ಗಳಿಸುವ ಬಗ್ಗೆ ತಲೆಗೆ ತುಂಬಿ ವೇಶ್ಯಾವಾಟಿಕೆಗೆ ತಳ್ಳುತ್ತಿದ್ದಳು ಎನ್ನುವ ಆರೋಪವಿದೆ.

ಒಮ್ಮೆ ಈ ಜಾಲಕ್ಕೆ ಸಿಕ್ಕಿದ ಹೆಣ್ಣುಮಕ್ಕಳು ತಾವು ಅದನ್ನು ಬಿಟ್ಟು ಹೊರಗೆ ಬರಬೇಕೆಂದರೂ ಅದು ಸಾಧ್ಯವಾಗುತ್ತಿರಲಿಲ್ಲ ಕಾರಣ ಅವರ ನಗ್ನ ವೀಡಿಯೋ, ಫೋಟೋಗಳು ಇವರ ಬಳಿಯಿರುತ್ತಿದ್ದವು ಅದನ್ನಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು ಎನ್ನಲಾಗಿದೆ. ಇದರ ಹಿಂದೆ ಬರೀ ರಾಣಿ ಮಾತ್ರವಿಲ್ಲ ಕಾಣದ ಕೈಗಳಿವೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಅವರು ಹೇಳುವ ಪ್ರಕಾರ ಸಲೂನ್, ಸ್ಪಾ ಎನ್ನುವುದು ಸಮಾಜದ ಕಣ್ಣಿಗೆ ಮಣ್ಣೆರಚುವ ತಂತ್ರವಷ್ಟೇ. ಹೊರನೋಟಕ್ಕೆ ಕಾಣುವ ಮುಖ ಒಂದು ರೀತಿಯಾದರೆ, ಇವುಗಳ ಒಳನೋಟದ




☞13

# ಕಾಮಿಡಿ ಕಿಲಾಡಿ ಮಡೆನೂರ್ ಮನು ಮೇಲೆ ರೇಪ್ ಕೇಸ್!

## ಮಿಂಚು-ಸಂಚು ಫೈನಲ್ ಪಂಚು?

ಕಾಮಿಡಿ ಕಿಲಾಡಿ ಖ್ಯಾತಿಯ ಮಡೆನೂರು ಮನು ತನ್ನ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಕಾಮಿಡಿ ಕಲಾವಿದೆ ಮಿಂಚು ಬೆಂಗಳೂರು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾಳೆ! ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಮಡೆನೂರು ಗ್ರಾಮದ ಮನು ಕಾಮಿಡಿ ಕಿಲಾಡಿಗಳು-3 ವಿನ್ನರ್! ಅದ್ಭುತ ಮಿಮಿಕ್ರಿ ಕಲಾವಿದ. ರಾಜ್ಯದಾದ್ಯಂತ ಸುತ್ತಾಡಿ ಕಾಮಿಡಿ ಶೋಗಳನ್ನು ಕೊಡುತ್ತಿದ್ದವರು.

ಇಂಥ ಪ್ರತಿಭೆಗೆ ಹುಟ್ಟುಹಬ್ಬದ ಶುಭಾಶಯಗಳು ಚಿತ್ರದಲ್ಲಿ ದಿಗಂತ್ ಜೊತೆ ನಟಿಸುವ ಅವಕಾಶ ಸಿಕ್ಕಿತ್ತು. ಅದಾದ ಬಳಿಕ 'ಕುಲದಲ್ಲಿ ಕೀಳ್ಯಾವುದೋ' ಎಂಬ ಚಿತ್ರದಲ್ಲಿ ನಾಯಕ ನಟನಾಗಿ




ಸಂತ್ರಸ್ತೆ ಯೂಟರ್ನ್?

ಅಭಿನಯಿಸೋ ಅದೃಷ್ಟ ದೊರಕಿತ್ತು. ಈ ಸಿನಿಮಾ ಮೊನ್ನೆ ಶುಕ್ರವಾರ ರಾಜ್ಯಾದ್ಯಂತ ತೆರೆ ಕಂಡಿದೆ. ದುರಂತ ಹೇಗಿದೆ ಎಂದರೆ, ಸಿನಿಮಾ ರಿಲೀಸ್‌ಗೆ ಒಂದು ದಿನ ಮುಂಚೆಯೇ ಮನು ವಿರುದ್ಧ ಎಫ್ ಐಆರ್ ದಾಖಲಾಗಿದೆ!

ಮಿಂಚು ಕೂಡ ಪ್ರತಿಭಾವಂತ ನಟಿಯೇ. ಆಕೆಗೆ ತಂದೆ ತಾಯಿ ಇಬ್ಬರೂ ಇಲ್ಲ, ಅನಾಥೆಯಾದ ಅವಳಿಗೆ ಅಜ್ಜಿಯ ಆಸರೆ ಬಿಟ್ರೆ ಕಾಮಿಡಿ ಕಿಲಾಡಿಗಳು ತಂಡವೆ ಬಂದು ಬಳಗ ಎಲ್ಲಾ. ಇಂಥ ಹುಡುಗಿಗೆ ಮನು ಆಪ್ತ ಮಿತ್ರ ಆಗಿದ್ದರಲ್ಲಿ ತಪ್ಪೇನು ಇಲ್ಲ. ಸಿನಿಮಾ ರಂಗದಲ್ಲಿ ಅದೆಲ್ಲ ಕಾಮನ್ನು... ಅನ್ನೋ ಹಾಗೆ ಅವರಿಬ್ಬರ ಮಧ್ಯೆ ಲೈಂಗಿಕ ಸಂಬಂಧ ಏರ್ಪಟ್ಟಿದ್ರೆ ಅದೇನೂ ಬ್ರೇಕಿಂಗ್ ನ್ಯೂಸ್ ಅಲ್ಲ! ಇಷ್ಟಕ್ಕೂ ಮಿಂಚು ಮನು ವಿರುದ್ಧ ನೀಡಿರುವ ದೂರಿನಲ್ಲಿ ಏನಿದೆ ನೋಡೋಣ ಬನ್ನಿ.

ಮಾನ್ಯರೆ, ನಾನು ಬೆಂಗಳೂರಿನ ಕಾಮಾಕ್ಯದಲ್ಲಿ ಸುಮಾರು 5 ವರ್ಷಗಳ ಕಾಲ ವಾಸವಾಗಿದ್ದೆ. 2018 ರಲ್ಲಿ ಖಾಸಗಿ ವಾಹಿನಿಯ ಕಾಮಿಡಿ ಕಿಲಾಡಿ ಕಾರ್ಯಕ್ರಮದಲ್ಲಿ ಮಡೆನೂರು ಮನು ನನಗೆ ಪರಿಚಯ ಆಗಿ ಇಬ್ಬರು ಸ್ನೇಹಿತರಾಗಿದ್ದೆವು. ನಾಗರಭಾವಿಯಲ್ಲಿ ಬಾಡಿಗೆ ಮನೆಗೆ ಶಿಫ್ಟ್ ಆಗಿದ್ದೆ. ಈ ಮನೆಯನ್ನು ಮಡೆನೂರು ಮನು ಹುಡುಕಿಕೊಟ್ಟಿದ್ದ.

ಮಡೆನೂರು ಮನುಗೆ ಈಗಾಗಲೇ ಮದುವೆಯಾಗಿದ್ದು ಹೆಣ್ಣುಮಗು ಇದೆ. 2022ರ ನವೆಂಬರ್ 29 ರಂದು ಶಿವಮೊಗ್ಗದ ಶಿಕಾರಿಪುರದಲ್ಲಿ ಕಾರ್ಯಕ್ರಮ ಇತ್ತು. ಈ ಕಾರ್ಯಕ್ರಮಕ್ಕೆ ನನ್ನನ್ನು ಹಾಗೂ ಇತರೇ ಕಾಮಿಡಿ ನಟರನ್ನು ಕರೆದುಕೊಂಡು ಹೋಗಿ ಅಲ್ಲಿ ಒಂದು ಹಾಸ್ಯ ಕಾರ್ಯಕ್ರಮ ಮಾಡಿದ್ದ.

ಈ ಕಾರ್ಯಕ್ರಮ ಮುಗಿದ ಮೇಲೆ ನಾನು ಶಿಕಾರಿಪುರದ ಹೋಟೆಲ್ ರೂಮಿನಲ್ಲಿದ್ದಾಗ ನನಗೆ ಸಂಭಾವನೆ ನೀಡುವ ನೆಪದಲ್ಲಿ ರೂಮಿಗೆ ಬಂದು ನನ್ನ ಮೇಲೆ ಅತ್ಯಾಚಾರ ಮಾಡಿದ್ದ. ಇದಾದ ಮೇಲೆ 2022ರ ಡಿಸೆಂಬರ್‌ನಲ್ಲಿ ನನ್ನ ಮನೆಗೆ ಬಂದು ನನ್ನ ವಿರೋಧದ ನಡುವೆ ನನಗೆ ತಾಳಿ ಕಟ್ಟಿದ್ದ. ನಂತರ ಅದೇ ಮನೆಯಲ್ಲಿ ಮನು ನನ್ನ ಮೇಲೆ ಹಲವಾರು ಬಾರಿ ಅತ್ಯಾಚಾರ ಎಸಗಿದ್ದ.

ನಾನು ಪ್ರೆಗ್ನೆಂಟ್ ಆದ ವಿಚಾರ ತಿಳಿದ ಮನು ಮನೆಗೆ ಬಂದು ಗರ್ಭಪಾತ ಆಗುವ ಮಾತ್ರೆ ನೀಡಿದ್ದ. ನಂತರ ನಾನು ಮತ್ತೆ ನಾನು ಪ್ರೆಗ್ನೆಂಟ್ ಆಗಿದ್ದು, ಮತ್ತೆ ಅದೇ ರೀತಿ ನನಗೆ ಗರ್ಭಪಾತ ಮಾಡಿಸಿದ್ದ. ಮನು ಈ ಮನೆಯಲ್ಲಿ ಬಾಡಿಗೆಗೆ ಮಾಡಿ ಈ ಮನೆಯಲ್ಲಿಯೂ ಸಹ ನನ್ನ ಮೇಲೆ ಅತ್ಯಾಚಾರ ಮಾಡಿ ನನ್ನ ಖಾಸಗಿ ವಿಡಿಯೋವನ್ನು ಫೋನಲ್ಲಿ ರೆಕಾರ್ಡ್ ಮಾಡಿದ್ದ. ಅಷ್ಟೇ ಅಲ್ಲದೇ ಹೊಡೆದು ಹಲ್ಲೆ ಮಾಡಿ ಈ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ಬೆದರಿಕೆ ಹಾಕಿದ್ದ.

ಆಮೇಲೆ ಮನು ನಾಯಕ ನಟನಾಗಿ ಸಿನಿಮಾ ಮಾಡಲು ಒಪ್ಪಿಕೊಂಡಿದ್ದು, ಇದಕ್ಕೆ ನಾನು ಸುಮಾರು ಲಕ್ಷಾಂತರ ರೂಪಾಯಿಗಳನ್ನು ನೀಡಿದ್ದೇನೆ. ನನ್ನ ಮೇಲೆ ಅತ್ಯಾಚಾರ ಮಾಡಿ, ಮದುವೆ ಮಾಡಿಕೊಂಡಂತೆ ನಾಟಕವಾಡಿ ಅನುಭವಿಸಿ ಗರ್ಭಪಾತ ಮಾಡಿಸಿ ಮದುವೆ ಮಾಡಿಕೊಳ್ಳದೇ ಮೋಸ ಮಾಡಿದ್ದಾನೆ. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ಹಲ್ಲೆ ಮಾಡಿ ಪ್ರಾಣ ಬೆದರಿಕೆಯನ್ನು ಹಾಕಿರುವ ಮಡೆನೂರು ಮನು ಮೇಲೆ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡುತ್ತಿದ್ದೇನೆ.

ಇದು ದೂರಿನ ಸಾರಾಂಶ!

ಅತ್ಯಾಚಾರ ಪ್ರಕರಣ ದಾಖಲಾದಾಗ ಮನು



ಬಹುಷಃ ಹಾಸನದ ಕಡೆ ನಾಳೆ ಬಿಡುಗಡೆ ಅಗಲಿದ ಇನ್ನೊಂದು ವೀಡಿಯೋದಲ್ಲಿ ತನ್ನ ಸಿನಿಮಾವನ್ನು ನೋಡಿ... ಎಂದು ಪ್ರಚಾರ ಮಾಡುತ್ತಿದ್ದರು ಅನ್ಸುತ್ತೆ.

ವಿಷಯ ಗೊತ್ತಾಗುತ್ತಿದ್ದಂತೆ ಎಲ್ಲೋ ನಿಂತುಕೊಂಡು ವಿಡಿಯೋವೊಂದನ್ನು ಹರಿಬಿಟ್ಟಿದ್ದರು. ಸದರಿ ವಿಡಿಯೋದಲ್ಲಿ ತನ್ನ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿರುವ 'ಕಲಾವಿದೆ' ಹಿಂದೆ ಇಬ್ಬರು ಹೀರೋಗಳು ಹಾಗೂ ಓರ್ವ ಲೇಡಿ ಡಾನ್ ಇದ್ದಾಳೆ ಎಂದು ಬಾಂಬ್ ಸಿಡಿಸಿದ್ದಾರೆ!

ಇದು ಉದ್ದೇಶಪೂರ್ವಕವಾಗಿ ಅಂತ ನಾನೇನು ಹೇಳಬೇಕಿಲ್ಲ ಎಲ್ಲರಿಗೂ ಗೊತ್ತಾಗಿದೆ.




ಕಷ್ಟಪಟ್ಟು, ಇಷ್ಟಪಟ್ಟು ಮಾಡಿರುವ 'ಕುಲದಲ್ಲಿ ಕೀಳ್ಯಾವುದೋ' ಸಿನಿಮಾ ನಾಳೆ ರಾಜ್ಯಾದ್ಯಂತ ರಿಲೀಸ್ ಆಗ್ತಿದೆ. ಹೀಗಿರುವಾಗ ಎಫ್‌ಐಆರ್ ಮಾಡುವಂತಹ ಅವಶ್ಯಕತೆ ಇರಲಿಲ್ಲ. ಇತ್ತೀಚೆಗೆ ನಾನು ಆಕೆಯೊಂದಿಗೆ ಮಾತನಾಡಿದ್ದೆ. ಆಗ ನಾನು ಸುಮ್ಮನಿದ್ರೂ ಬೇರೆಯವರು ಬಿಡ್ತಿಲ್ಲ. ಈ ರೀತಿ ಮಾಡು ಅಂತ ಹೇಳಿಕೊಡ್ತಿದ್ದಾರೆ ಅಂತ ಅವಳೇ ಹೇಳಿದ್ದಳು. ಯಾರ್‍ಯಾರು ಹೇಳಿಕೊಡ್ತಿದ್ದಾರೆ ಅಂತ ಕೂಡ ಬಾಯಿಬಿಟ್ಟಿದ್ದಾಳೆ ಎಂದಿದ್ದಾರೆ.

ಅವಳ ಜೊತೆಯಲ್ಲಿದ್ದವರೇ ಹೇಳಿಕೊಟ್ಟಿದ್ದಾರೆ. ಆಕೆ ಹಿಂದೆ ಇಬ್ಬರು ಹೀರೋ, ಒಬ್ಬಳು ಲೇಡಿ ಡಾನ್ ಸೇರಿ 12 ಜನ ಇದ್ದಾರೆ. ಇತ್ತೀಚೆಗೆ ಕೂಡ ನನ್ನ ಸಾವು ಬಯಸಿ ನಗುತ್ತಿದ್ದರಂತೆ. ನಾನು ಯಾರಿಗೇನು ಮಾಡಿದ್ದೇನೆ ಅಂತ ಗೊತ್ತಿಲ್ಲ. ನಾನಾಯ್ತು ಸಿನಿಮಾ ಕೆಲಸ ಆಯ್ತು ಅಂತ ಇರ್ತೀನಿ. ಇಲ್ಲದಿದ್ರೆ ಜಮೀನು ಕೆಲಸ ಮಾಡ್ತೀನಿ. ಆದ್ರೆ ನನ್ನ ವಿರುದ್ಧ ಪ್ರತಿಯೊಂದು ಆರೋಪಕ್ಕೂ ಸಾಕ್ಷಿ ಕೊಡ್ತೀನಿ ಅಂತ ಹೇಳಿದ್ದಾರೆ.

ಕಳೆದ 2 ತಿಂಗಳಿಂದ ಸಿನಿಮಾಗೆ ಎಲ್ಲರನ್ನೂ ಕರೆದಿದ್ದೇನೆ. ಪಾಪ ನಿರ್ಮಾಪಕರು ದುಡ್ಡು ಎಲ್ಲಿಂದ ತಂದಿರ್ತಾರೆ ಗೊತ್ತಿಲ್ಲ. ಈ ಕೇಸ್‌ನಿಂದ ಅವರಿಗೆ ಸಮಸ್ಯೆ ಆಗಬಾರದು. ಶೀಘ್ರದಲ್ಲೇ ನಾನು ಕಾನೂನಿನ ಮೂಲಕ ಉತ್ತರ ಕೊಡುವ ಕೆಲಸ ಮಾಡ್ತೀನಿ ಅಂತ ವಿಡಿಯೋನಲ್ಲಿ ವಿವರಿಸಿದ್ದಾರೆ.

ಇದರ ಬೆನ್ನಿಗೆ, ಮಿಂಚು ಕೂಡ ಒಂದೆರಡು ವಿಡಿಯೋಗಳನ್ನು ಬಿಟ್ಟಿದ್ದಾಳೆ. ಮನು ತನಗೆ ಬಲವಂತವಾಗಿ ಮದ್ಯ ಕುಡಿಸಿ ಕೆಡಿಸಿದ... ಅಂತ ಒಂದರಲ್ಲಿ, ಮನು ಮತ್ತು ನನ್ನ ಮಧ್ಯೆ ನಡೆದ ಘಟನೆ ನಮ್ಮಿಬ್ಬರ ಮಧ್ಯೆಯೇ ಇರಬೇಕಿತ್ತು, ನಾನೇ ದುಡುಕಿ ಮೀಡಿಯಾ ಮುಂದೆ ಬಂದುಬಿಟ್ಟೆ... ಎಂದು ಒದರಾಡಿದ್ದಾಳೆ! ಸದ್ಯ, ಅನ್ನಪೂರ್ಣೇಶ್ವರಿ ನಗರ ಪೊಲೀಸರು ಮನುವನ್ನು ಅರೆಸ್ಟ್ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಿ ವಾಪಸ್ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ವಿಚಾರಣೆ ನಡೆಯುತ್ತಿದೆ. ಯಾರದ್ದೋ ಸಂಚಿಗೆ ಬಲಿಯಾಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟು ಈಗ ಅಳುತ್ತಿರುವ ಮಿಂಚು ಮನು ಪರ ವಾಲುತ್ತಿದ್ದಾಳೆ! ಸೋ, ಈ ಕೇಸ್ ಠುಸ್ ಪಟಾಕಿಯಾಗಿ, ಮಿಂಚು ಮನು ಮಧ್ಯೆ ತಂದಿಟ್ಟು ಆಟ ಆಡಿದ್ದ ಗ್ಯಾಂಗ್ ಪೇಚಿಗೆ ಸಿಲುಕಿರುವುದು ಸುಳ್ಳಲ್ಲ!!



ದಯವಿಟ್ಟು ಸಿನಿಮಾ ನೋಡಿ... ಎಂದು ವಿನಂತಿಸುತ್ತಿರುವ ಮನು ಪತ್ನಿ ದಿವ್ಯಾ

---

ಇದೊಂದು ಜಾತೀಯತೆಯ ನಡುವೆ ಮೇಲು ಕೀಳಿನ ತಾರತಮ್ಯದಲ್ಲಿ ಮನುಷ್ಯನ ಬದುಕಿಗೆ ಬೆಳಕು ಚಲ್ಲಬಹುದಾದ ಚಿತ್ರ. ಅದೊಂದು ಕಾಡು! ಆ ಕಾಡನ್ನೇ ನಂಬಿ ಬದುಕಿದ್ದ ಜನರನ್ನು ಕಾಡಿಂದ ಹೊರ ಹಾಕಿದ ಸರ್ಕಾರ ಅವರ ಮುಂದಿನ ಬದುಕನ್ನು ಕಟ್ಟಿಕೊಡುವಲ್ಲಿ ಅಸಡ್ಡೆ ತೋರುತ್ತದೆ. ಅಲೆಮಾರಿಗಳಾಗಿ ಅಲೆಯುತ್ತಾ, ತಮಟೆ ಬಾರಿಸುವ ಹಾಗೂ ಗಿಡ ಮೂಲಿಕೆಗಳಿಂದ ತಯಾರು ಮಾಡಿದೆ ಕೂದಲು ಎಣ್ಣೆ(ಕೇಶ ತೈಲ) ತಯಾರು ಮಾಡುವ ಈ ಜನಾಂಗಕ್ಕೆ ನಾಯಕನಾಗಿ ಮಡೆನೂರು ಮನು ಸರ್ಕಾರ, ವ್ಯವಸ್ಥೆ, ಜಾತಿ ಧರ್ಮಗಳ ವಿರುದ್ಧ ಹೋರಾಡಿ ತನ್ನವರಿಗಾಗಿ ನ್ಯಾಯ ಕೊಡಿಸುವ ಪಾತ್ರದಲ್ಲಿ ಮನು ಚೆನ್ನಾಗಿ ಅಭಿನಯಿಸಿದ್ದಾರೆ. ಅಷ್ಟೇ ಅಲ್ಲದೇ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಹಾಗೇ ನಾಯಕಿಯಾಗಿ ಅಲೆಮಾರಿಯಾಗಿ ಅಭಿನಯಿಸಿದ್ದಾರೆ ಮೌನ ಗುಡ್ಡೇಮನೆ.

ಈಗಾಗಲೇ ರಾಮಾಚಾರಿ ಧಾರವಾಹಿಯ ಮುಖಾಂತರ ಜನ ಮನ ಸೆಳೆದಿದ್ದ ಮೌನ ಗುಡ್ಡೇಮನೆ ಈಗ ಬೆಳ್ಳಿತೆರೆಯ ಮೇಲೆ ಮೊದಲ ಬಾರಿಗೆ ನಾಯಕಿಯಾಗಿ ಅಭಿನಯಿಸಿದ್ದಾರೆ. ನಿರ್ದೇಶಕ ರಾಮ್ ನಾರಾಯಣ್

## ಕುಲದಲ್ಲಿ ಕೀಳ್ಯಾವುದೋ... ಫಸ್ಟ್ ಡೇ ಫಸ್ಟ್ ಶೋ ನೋಡ್ದೋ...




ಈಗಾಗಲೇ ವಿಭಿನ್ನ ಕಥೆಗಳನ್ನು ಪ್ರೇಕ್ಷಕರ ಮುಂದೆ ಇಟ್ಟು ಯಶಸ್ವಿ ಚಿತ್ರಗಳ ನಿರ್ದೇಶಕ ಎನಿಸಿಕೊಂಡಿದ್ದಾರೆ. ಈಗ ಕುಲದಲ್ಲಿ ಕೀಳ್ಯಾವುದೋ ಚಿತ್ರದ ಮೂಲಕ ಬಿದಿರು ಬಂಡೆ ಬುಡಕಟ್ಟು ಜನಾಂಗದ ಬವಣೆ ಹಾಗೂ ಜಾತಿಯತೆಯ ಬಗ್ಗೆ ಧ್ವನಿ ಎತ್ತಿದ್ದಾರೆ. ಕತೆ ಬರೆದವರು ಯೋಗರಾಜ್ ಭಟ್ ಎಂಬುದು ವಿಶೇಷ.

ಯೋಗರಾಜ್ ಭಟ್ಟರ ಕಥೆಯನ್ನು ತೆರೆಯ ಮೇಲೆ ನಿರ್ದೇಶಕ ರಾಮ್ ನಾರಾಯಣ್ ನ್ಯಾಯ ಒದಗಿಸಿದ್ದಾರೆ. ಯೋಗರಾಜ್ ಭಟ್ ಕುಲದಲ್ಲಿ ಕೀಳ್ಯಾವುದೋ ಶೀರ್ಷಿಕೆ ಗೀತೆ ಹಾಡುವುದರ ಜೊತೆಗೆ ತಾವೂ ಒಂದು ಒಳ್ಳೆ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಇನ್ನು, ತಹಶಿಲ್ದಾರ್ ಪಾತ್ರದಲ್ಲಿ ಸೋನಲ್ ಮಾಂತೇರೋ ಬಹಳ ಗಂಭೀರ ನಟನೆ ಮೆರೆದಿದ್ದಾರೆ.

ಬುಡಕಟ್ಟು ಜನಾಂಗಕ್ಕೆ ಸಹಾಯ ಮಾಡುವ ಪಾತ್ರ. ಚಿತ್ರದಲ್ಲಿ ಕೆಲವು ಸಂಭಾಷಣಗಳು ಹಾರ್ಟ್‌ಗೆ ಟಚ್ಚಾಗುತ್ತವೆ. ಚಾವುಟಿಯಲ್ಲಿ ನಮ್ಮ ಚರ್ಮ ಸುಲಿಯೋ ಹಾಗೆ ಹೊಡೆದು ಆ ಚಾವುಟಿಯನ್ನ ಮನೆಯೊಳಗೆ ತಗೊಂಡು ನೇತಾಕುತ್ತಾರಲ್ಲ, ಆ ಚಾವುಟಿಯಲ್ಲಿ ನಮ್ಮ ರಕ್ತ, ಬೆವರು ಅಂಟಿರೋದಿಲ್ವಾ?


ಆಗ ಅವರ ಮನೆ ಮೈಲಿಗೆ ಆಗೊಲ್ವಾ?? ಅನ್ನುವಂತ ಡೈಲಾಗ್ ಹೃದಯ ತಟ್ಟುತ್ತದೆ. ಚಿತ್ರದಲ್ಲಿ ಇಂತಹ ಇನ್ನೂ ಕೆಲವು ಡೈಲಾಗ್ ಇದ್ದು ಅವೇ ಚಿತ್ರದ ಕಥೆಯನ್ನು ಎತ್ತಿ ಹಿಡಿಯುತ್ತವೆ. ಹೆಣಗಳಿಗೆ ಯಾವ ಬೆಲೆ ಇಲ್ಲ ಆದರೆ ಹೆಣಗಳ ಹೆಬ್ಬೆಟ್ಟುಗಳಿಗೆ ಬೆಲೆ ಇದೆ.

ಊರು ಕೇರಿ, ಜಾತಿ ನೀತಿಗಳ ನಡುವೆ ಕುಲದಲ್ಲಿ ಕೀಳ್ಯಾವುದೋ ಚಿತ್ರ ಯಾವುದೇ ಅನುಮಾನವಿಲ್ಲದೇ ಪ್ರೇಕ್ಷಕರು ಕೊಟ್ಟ ಹಣಕ್ಕೆ ಮೋಸವಿಲ್ಲದಂತೆ ನೋಡಬಹುದಾದ ಚಿತ್ರ. ನಟನೆಯ ಬಗ್ಗೆ ಹೇಳಬಹುದಾದರೆ, ಕಾಮಿಡಿ ಕಿಲಾಡಿ ಮನು ಅತ್ಯುತ್ತಮ ವಾಗಿ ನಟಿಸಿದ್ದಾರೆ. ಹೀರೋಯಿನ್ ಗುಡ್ಡೆಮನೆ ಕೂಡ. ಈಕೆ ಸ್ಯಾಂಡಲ್‌ವುಡ್‌ಗೆ ಸಿಕ್ಕಿದ ಕೊಡುಗೆಯೇ ಸರಿ. ನಮ್ಮ ಕರಿಸುಬ್ಬು ಅವರು ಬುಡಕಟ್ಟು ಜನಾಂಗದ ಹಿರಿಯನಾಗಿ ಮನ ಮುಟ್ಟುವಂತೆ ಅಭಿನಯಿಸಿದ್ದಾರೆ. ಒಟ್ಟಾರೆ, ನಿರ್ಮಾಪಕರು ಒಂದು ಒಳ್ಳೆಯ ಸಿನಿಮಾಕ್ಕೆ ಹಣ ಹಾಕಿ ಸಾರ್ಥಕತೆ ಮರೆದಿದ್ದಾರೆ. ಅವರ ಹಣ ವಾಪಸ್ ಬರುವುದರಲ್ಲಿ ನೋ ಡೌಟ್!

5 ☜

ಚರ್ಚೆಯಾಗಿವೆ. ಮಾಧ್ಯಮ ಹಾಗೂ ವಿಧಾನಸಭೆಯಲ್ಲಿ ವರ್ಗಾವಣೆಯ ದರಪಟ್ಟಿ ಪ್ರಕಟವಾಗಿದೆ. ಹೂಡಿಕೆ ಮಾಡಿ ಹೋಗುವ ಪ್ರತಿಯೊಬ್ಬ ಅಧಿಕಾರಿಯು ಲಾಭವನ್ನು ಹೆಕ್ಕುವ ಕಾಯಕಕ್ಕೆ ಮುಂದಾಗುವುದು ಸಹಜ.

ವರ್ಗಾವಣೆಗೆ ಮಾಡಿರುವ ಹೂಡಿಕೆಯನ್ನು ಹಿಂಪಡೆಯುವುದು ಹೇಗೆ ಎನ್ನುವ ಲೆಕ್ಕಾಚಾರದಲ್ಲಿರುವಾಗಲೇ ಆಡಳಿತ ವ್ಯವಸ್ಥೆಯಿಂದ ಅಲಿಖಿತ ಟಾರ್ಗೆಟ್ ಬರುತ್ತದೆ. ಮಾಸಿಕವಾಗಿ ಎಷ್ಟು ಮದ್ಯ ಮಾರಾಟ ಮಾಡಬೇಕು? ಎಷ್ಟು ದಂಡ ವಸೂಲಿ ಮಾಡಬೇಕು? ಎಷ್ಟು ತೆರಿಗೆ ಸಂಗ್ರಹಿಸಬೇಕು...?


ಸಂಸದ ಹೆಚ್.ಡಿ. ಕುಮಾರಸ್ವಾಮಿ

ಇಂತಹ ಹತ್ತಾರು ಪಟ್ಟಿಗಳು ಅಧಿಕಾರಿಗಳ ಕೈ ಸೇರುತ್ತವೆ. ಈ ಅಲಿಖಿತ ಟಾರ್ಗೆಟ್‌ಗೆ ಚುಕ್ತಾ ಮಾಡಬೇಕಿರುವ ಒಂದಿಷ್ಟು ಲೆಕ್ಕಗಳು ಸೇರಿಕೊಳ್ಳುತ್ತವೆ. ಬುಡದಿಂದ ತುದಿಯವರೆಗೆ ಸಲ್ಲಿಕೆ ಆಗಬೇಕಿರುವ ಮಾಸಿಕ ಕಪ್ಪ ಕಾಣಿಕೆ, ಹೂಡಿಕೆಯಲ್ಲಿ ಹಿಂಪಡೆಯುವ ಹಣವು ಅಲಿಖಿತ ಟಾರ್ಗೆಟ್‌ಗೆ ಹೆಚ್ಚುವರಿ ಸೇರ್ಪಡೆಯಾಗುತ್ತದೆ.

ಇಂತಹ ಹೆಚ್ಚುವರಿ ಸಂಗ್ರಹದ ಒತ್ತಡಗಳು ಬಂದಾಗ ಅಧಿಕಾರಿಗಳು ಜನಸಾಮಾನ್ಯರ ಪಾಲಿಗೆ ತಿಗಣೆಗಳಾಗುತ್ತಾರೆ. ಹೆಚ್ಚುವರಿ ಹಣವು ನಾವು ಕಟ್ಟಬೇಕಿರುವ ಅಧಿಕೃತ ತೆರಿಗೆ, ದಂಡದಲ್ಲಿ ಬರುವುದಿಲ್ಲ. ಆಗ ಹೊಸ ಲೆಕ್ಕಾಚಾರಗಳು ಶುರು ಮಾಡಬೇಕಾಗುತ್ತದೆ. ಈ ಬಗ್ಗೆ ಇಲಾಖಾವಾರು ವಿವರಗಳನ್ನು ಕೊಡುತ್ತಿದ್ದರೆ, ಒಂದು ಪಿಎಚ್‌ಡಿ ಗ್ರಂಥ ಬರೆಯಬಹುದು. ಆದರೆ ಸಂಚಾರ ಪೊಲೀಸರಿಗೆ ಸೀಮಿತವಾಗಿ ಹೆಚ್ಚುವರಿ ಹಣ ಸಂಗ್ರಹದ ಮಾರ್ಗ ಹೇಗಿರುತ್ತದೆ ಎನ್ನುವುದನ್ನು ನೋಡೋಣ. ನಾನು ಕೆಳಗೆ ಉಲ್ಲೇಖಿಸಿದ ಪ್ರತಿ ಅಂಶವು ನಿಮ್ಮ ಗಮನಕ್ಕೆ ಬಂದಿರುತ್ತದೆ.

★ರಸ್ತೆಗಳ ಮಧ್ಯೆ ತಪಾಸಣೆಗೆಂದು ಹೆಚ್ಚುವರಿ ಬ್ಯಾರಿಕೇಡ್ಗಳು ಬರುತ್ತವೆ.

★ಕಳ್ಳರಂತೆ ಮರಗಳ ಹಿಂದೆಯಿಂದ ಓಡಿಬಂದು ವಾಹನವನ್ನು ಅಡ್ಡಗಟ್ಟುತ್ತಾರೆ.

★ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೇಗದ ಮಿತಿ 100 ಕಿ.ಮೀ ಎಂದಿದ್ದರೂ ಸ್ಥಳೀಯವಾಗಿರುವ ಭಿಟಾರ್ಗೆಟ್‌ಭಿ ಗಿರಾಕಿಗಳು ತಮ್ಮ ವಸೂಲಿಗೆ ತಕ್ಕಂತೆ ಬದಲಾಯಿಸಿಕೊಂಡು ಹೊಸ ಬೋರ್ಡ್ ಹಾಕಿಸುತ್ತಾರೆ.

★ನೀವು ಸಂಚರಿಸುವ ಚತುಷ್ಪಥದಲ್ಲಿ 100 ಕಿ.ಮೀ ವೇಗದಲ್ಲಿ ಚಲಿಸಬಹುದು ಎಂದು ಸಂಚಾರ ವಿಭಾಗದ ಎಡಿಜಿಪಿಯೇ ಆದೇಶ ಹೊರಡಿಸಿರುತ್ತಾರೆ. ಆದರೆ ಮಾರ್ಗ ಮಧ್ಯೆ ಸಣ್ಣದೊಂದು ಬೋರ್ಡ್ ಹಾಕಿಕೊಂಡು, ಅದಾದ ಅರ್ಧ ಕಿ.ಮೀ ದೂರದಲ್ಲಿ ಸ್ಪೀಡ್ ಗನ್ ಕ್ಯಾಮೆರಾ ಇರುವ ತಪಾಸಣಾ ವಾಹನ ರಣಹದ್ದಿನಂತೆ ಕಾಯುತ್ತಿರುತ್ತದೆ.

★ಮೇಲ್ನೋಟಕ್ಕೆ ಸಂಚಾರ ನಿಯಮ ಉಲ್ಲಂಘಿಸಿದ್ದು ಕಂಡರೆ ಮಾತ್ರ ವಾಹನ ನಿಲ್ಲಿಸಬೇಕು ಎನ್ನುವ ನಿಯಮವಿದ್ದರೂ, ರಸ್ತೆಯಲ್ಲಿ ಹೋಗುವ ಪ್ರತಿ ಗಾಡಿಯನ್ನು ಅಡ್ಡ ಹಾಕುತ್ತಾರೆ.

★ಹೊರ ಜಿಲ್ಲೆ ಅಥವಾ ಬೇರೆ ಆರ್ಟಿಒಗೆ ಸೇರಿದ ಪ್ರತಿಯೊಂದು ವಾಹನವನ್ನು ಅಡ್ಡಗಟ್ಟುತ್ತಾರೆ.

★ ಹೈವೆಯಲ್ಲಿ ವಾಹನಗಳನ್ನು ಅಡ್ಡ ಹಾಕಲು ಸಾಧ್ಯವಿಲ್ಲವೆಂದು ಟೋಲ್ ಪ್ಲಾಝಾ ಪ್ರದೇಶದಲ್ಲಿ ಠಿಕಾಣಿ ಹೂಡಿರುತ್ತಾರೆ.

★ಇನ್ನೊಂದು ಅಪಾಯಕಾರಿ ಅಭ್ಯಾಸ ಹೀಗಿದೆ...

ರಾಜ್ಯದ ಬಹುತೇಕ ಜಿಲ್ಲೆಗಳ ಹೆದ್ದಾರಿಗಳಲ್ಲಿ ಸಂಚಾರಿ ಪೊಲೀಸರ ಒಂದು ಅಭ್ಯಾಸ ನಿಮ್ಮ ಗಮನಕ್ಕೂ ಬಂದಿರಬಹುದು. ಚತುಷ್ಪಥ ಸೇರಿ ದ್ವಿಪಥ ರಸ್ತೆಗಳ ಮಧ್ಯೆ ಬ್ಯಾರಿಕೇಡ್ಗಳನ್ನು ಹಾಕಿರುತ್ತಾರೆ. ನಾನು ಕಾಯಂ ಆಗಿ ಪ್ರಯಾಣಿಸುವ ಚಿತ್ರದುರ್ಗ-ಶಿವಮೊಗ್ಗ-ಸಾಗರ ರಸ್ತೆಗಳಲ್ಲಂತೂ ಲೆಕ್ಕದ ಹೊರಗೆ ಈ ಬ್ಯಾರಿಕೇಡ್ಗಳಿವೆ. ತಿರುವು ರಸ್ತೆಗಳಲ್ಲೂ ಇದ್ದಕ್ಕಿದ್ದಂತೆ ಈ ಬ್ಯಾರಿಕೇಡ್‌ಗಳು ಪ್ರತ್ಯಕ್ಷವಾಗುತ್ತವೆ. ಪೊಲೀಸರನ್ನು ಈ ಬಗ್ಗೆ ಕೇಳಿದಾಗ, ಅವರಿಂದ ಬಂದ ಉತ್ತರ ಮಜವಾಗಿತ್ತು. ಭಿಸವಾರರು ವೇಗದ ಮಿತಿ ಮೀರಿ ವಾಹನ ಓಡಿಸುತ್ತಾರೆ. ಹೀಗಾಗಿ ಬ್ಯಾರಿಕೇಡ್ ಹಾಕುವುದು ಅನಿವಾರ್ಯ ಎನ್ನುತ್ತಾರೆ.


ಶಾಸಕ ರವಿ ಗಣಿಗ

ಆದರೆ ಈ ಬ್ಯಾರಿಕೇಡ್ಗಳಿಂದ ಪ್ರತಿನಿತ್ಯ ಹತ್ತಾರು ಅಪಘಾತಗಳಾಗುತ್ತಿವೆ. ಸುರಕ್ಷಿತ ರಸ್ತೆಗಾಗಿ ವೈಜ್ಞಾನಿಕ ಹಂಪ್ಸ್‌ಗಳನ್ನು ಅಳವಡಿಸುವ ಬದಲಿಗೆ, ತಾತ್ಕಾಲಿಕ ಬ್ಯಾರಿಕೇಡ್‌ಗಳೇ ಕಾಯಂ ಆಗುತ್ತಿವೆ. ಈ ಅವೈಜ್ಞಾನಿಕ ವ್ಯವಸ್ಥೆಗೆ ತುರ್ತಾಗಿ ಪರಿಹಾರ ಕಂಡುಕೊಳ್ಳಬೇಕಿದೆ. ಪ್ರತಿಯೊಂದು ಸಮಸ್ಯೆ ಪರಿಹಾರಕ್ಕೆ ರಕ್ತ ಬೀಳಬೇಕು ಎನ್ನುವ ದುರ್ಬುದ್ಧಿ ಸರ್ಕಾರಕ್ಕೆ ಆದಷ್ಟು ಬೇಗ ಹೋಗಲಿ. ಇಂತಹ ಇನ್ನೂ ಹತ್ತು ರೀತಿಯ ಉದಾಹರಣೆಗಳು ನಿಮ್ಮ ಬಳಿ ಇರಬಹುದು ಅಥವಾ ಸಂಚಾರ ಪೊಲೀಸರು ಮಾಡುತ್ತಿರಬಹುದು. ಇದರಿಂದ ಸಾಮಾನ್ಯ ಜನರಿಗೆ ಸಮಸ್ಯೆ ಆಗುತ್ತಿದೆ ಎನ್ನುವುದು ಆಡಳಿತ ವ್ಯವಸ್ಥೆಯ ಪ್ರತಿಯೊಂದು ವಿಭಾಗಕ್ಕೂ ತಿಳಿದಿದೆ. ಆದರೆ ಈ ಅವ್ಯವಸ್ಥೆಯಲ್ಲಿ ಬಹುತೇಕರು ಪಾಲುದಾರರಾಗಿದ್ದಾರೆ. ಹೀಗಾಗಿ ಜನರ ಕಣ್ಣಿಗೆ ಮಣ್ಣೆರಚಲು ಒಂದೆರಡು ಅಮಾನತು ಮಾಡಿ ಕೈ ತೊಳೆದುಕೊಳ್ಳುತ್ತಾರೆ. ವ್ಯವಸ್ಥೆಯನ್ನು ಸುಧಾರಿಸುವ ಮಾತನ್ನೇ ಆಡುವುದಿಲ್ಲ. ಒಂದೊಮ್ಮೆ ಅಂತಹ ಕೆಲಸ ಮಾಡಿದರೆ 'ಟಾರ್ಗೆಟ್'ಗೆ ಸಮಸ್ಯೆ ಆಗಬಹುದು ಎನ್ನುವ ದೂರಾಲೋಚನೆ ಇರುತ್ತದೆ. ಈ ಬಗ್ಗೆ ಆಕ್ರೋಶ ಹುಟ್ಟಬೇಕಿದ್ದರೆ, ಅದು ಖಂಡಿತವಾಗಿಯೂ ಕೆಳಹಂತದ ವ್ಯವಸ್ಥೆಯ ಮೇಲಾಗಬಾರದು. ಇದಕ್ಕೆ ಕಾರಣವಾಗಿರುವ ವಿಧಾನ ಸೌಧದಲ್ಲಿನ ಪ್ರಭಾವಿಗಳ ಮೇಲೆ ಆಕ್ರೋಶ ಹೊರ ಹಾಕಬೇಕು.

ಅಂದರೆ ಇಂತಹ ವಸೂಲಿಗಳಿಗೆ ಮೂಲ ಕಾರಣವೇ ವರ್ಗಾವಣೆಯಲ್ಲಿನ ದರಪಟ್ಟಿ ಹಾಗೂ ಲೆಕ್ಕದ ಹೊರಗಿನ ಟಾರ್ಗೆಟ್. ಇವೆರಡನ್ನೂ ವ್ಯವಸ್ಥೆಯಿಂದ ಕಡಿಮೆ ಮಾಡಿದಷ್ಟು ಜನ ಸಾಮಾನ್ಯರ ರಕ್ತ ಹೀರುವಿಕೆ ಕಾರ್ಯಕ್ರಮದಲ್ಲಿ ಇಳಿಕೆ ಕಾಣಬಹುದು. ಮೇಲ್ನೋಟಕ್ಕೆ ನಾವು ನೆಲದಲ್ಲಿ ಕೆಲಸ ಮಾಡುವ ಕೆಳ ಹಂತದ ಅಧಿಕಾರಿಗಳ ಮೇಲೆ ಕೂಗಾಡಬಹುದು. ಆದರೆ ಇದಕ್ಕೆ ನಿಜವಾದ ಕಾರಣೀಕರ್ತರು ವಿಧಾನಸೌಧದಲ್ಲಿ ಬೆಚ್ಚಗೆ ಕುಳಿತಿದ್ದಾರೆ. ವಿಪರ್ಯಾಸವೆಂದರೆ ಸಂಚಾರ ಪೊಲೀಸರ ಇದ್ಯಾವುದೇ ನಿಯಮ ಪರಿಶೀಲನೆ ಕಾಳಜಿಯು ಈ ವಿಧಾನಸೌಧದ ಸುತ್ತಮುತ್ತ ನಡೆಯುವುದಿಲ್ಲ.

ಅಂದಹಾಗೆ, ಈ ರೀತಿ ದಂಡ ವಸೂಲಿ ಹಾಗೂ ತಪಾಸಣೆಯನ್ನು ರಾಜ್ಯದ ಎಲ್ಲ ಭಾಗಗಳಲ್ಲಿ ಮಾಡುವ ಧೈರ್ಯವನ್ನು ಸಂಚಾರ ಪೊಲೀಸರು ಹೊಂದಿಲ್ಲ. ಕೆಲವು ನಿರ್ದಿಷ್ಟ ಸಮುದಾಯದ ಜನರಿರುವ ಜಂಕ್ಷನ್ ಹಾಗೂ ರಸ್ತೆಗಳ ಕಡೆ ತಲೆ ಹಾಕುವ ಉಸಾಬರಿಗೂ ಹೋಗುವುದಿಲ್ಲ. ಏಕೆಂದರೆ ಅವರ ವಿರುದ್ಧ ಕ್ರಮಕೈಗೊಂಡರೆ, ಠಾಣೆಗೆ ಬೆಂಕಿ ಹಚ್ಚಬಹುದು ಎನ್ನುವ ಭಯವಿರುತ್ತದೆ!

**ವಿಶೇಷ ಮನವಿ**

ಮಂಡ್ಯದಲ್ಲಿ ನಡೆದಿರುವ ಘಟನೆಯನ್ನು ನೆನಸಿಕೊಂಡೆ ಕರುಳು ಕಿವುಚುತ್ತದೆ. ಆದರೆ ಪೊಲೀಸರಿಗೆ ಅಂತಹ ಅವಕಾಶ ಸೃಷ್ಟಿಯಾಗದಂಥ ರೀತಿಯಲ್ಲೂ ನಾವು ನಡೆದುಕೊಳ್ಳಲು ಪ್ರಯತ್ನಿಸಬೇಕು. ಈ ಅವ್ಯವಸ್ಥೆಗೆ ತೆರೆ ಎಳೆಯಲು ನಿಯಮ ಪಾಲನೆ ಕೂಡ ಒಂದು ಮಾರ್ಗವಾಗಿದೆ. ಸಂಚಾರ ನಿಯಮಗಳನ್ನು ಪಾಲಿಸಿಸಾಗಿದರೆ, ಯಾವ ಪೊಲೀಸರಿಂದ ಏನೂ ಮಾಡಲಾಗದು. ನಾವು ಆ ವಿಚಾರದಲ್ಲಿ ನಿಖರತೆ ಹೊಂದಿದಾಗ, ಇಂತಹ ಭ್ರಷ್ಟರನ್ನು ಅಷ್ಟೇ ಗಟ್ಟಿಯಾಗಿ ಪ್ರಶ್ನಿಸಲು ಕೂಡ ಸಾಧ್ಯವಾಗುತ್ತದೆ. ☯

# ಹೈಟೆಕ್ ವೇಶ್ಯಾವಾಟಿಕೆ!

11 ☜

ಚಿತ್ರಣವೇ ಬೇರೆ. ಇವುಗಳಿರುವ ಕಡೆಗಳಲ್ಲಿ ಸಮಾಜಮುಖಿ ಕಾರ್ಯಗಳಿಗಿಂತ ಹೆಚ್ಚಾಗಿ ಸಮಾಜದ್ರೋಹಿ ಕೆಲಸಗಳೇ ನಡೆಯುತ್ತವೆ. ಅದರಂತೆ ರಾಣಿ ನಡೆಸುತ್ತಿದ್ದ ಕ್ಲೌಡ್-11 ಸಲೂನ್ ಮೇಲ್ನೋಟಕ್ಕೆ ಮಾತ್ರ ಇತ್ತು. ಆದರೆ ಒಳಗೆ ಸಲೂನ್ ನಡೆಯುತ್ತಲೇ ಇರಲಿಲ್ಲ.


ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಹಾಗೂ ಪರಶು

ಇಲ್ಲಿ ನಡೆಯುತ್ತಿದ್ದದ್ದು ದಂಧೆಯಾಗಿತ್ತು. ಹೀಗಾಗಿ ಅದರ ಮೇಲೆ ಕಣ್ಣಿಟ್ಟಿದ್ದ ಒಡನಾಡಿ ಸಂಸ್ಥೆ ಅಲ್ಲಿಗೆ ಬರುವವರ ಗಂಡಸರು ಮತ್ತು ಹೆಣ್ಣು ಮಕ್ಕಳ ಮೇಲೆ ನಿಗಾವಿರಿಸಿ ಆ ಬಗ್ಗೆ ಮಾಹಿತಿ ಕಲೆ ಹಾಕಿದಾಗ ಅಲ್ಲಿ ಹೆಣ್ಣುಮಕ್ಕಳನ್ನು ಆಕರ್ಷಿಸಿ ದಂಧೆಗೆ ನೂಕುತ್ತಿದ್ದ ಕರಾಳ ಮುಖ ಬೆಳಕಿಗೆ ಬಂದಿತ್ತು. ಹೀಗಾಗಿ ಒಡನಾಡಿ ಮತ್ತು ಮಂಡ್ಯ ಪೊಲೀಸರು ದಾಳಿ ನಡೆಸಿ ನಾಲ್ವರು ಯುವತಿಯರನ್ನು ರಕ್ಷಿಸಿ, ದಂಧೆ ನಡೆಸುತ್ತಿದ್ದ ರಾಣಿ ಮತ್ತು ಗಿರಾಕಿಗಳನ್ನು ಕರೆತರುತ್ತಿದ್ದ ಪಿಂಪ್ ಮತ್ತೊಬ್ಬ ಗ್ರಾಹಕ ಸೇರಿ ಮೂವರನ್ನು ಬಂಧಿಸಿದ್ದಾರೆ.

ಒಟ್ಟಾರೆ ಹೇಳುವುದಾದರೆ ಮಂಡ್ಯದಲ್ಲಿ ಇದೀಗ ಅನೈತಿಕ ಚಟುವಟಿಕೆ ಹೆಚ್ಚುತ್ತಿದ್ದು, ಸ್ಥಳೀಯರು ಎಚ್ಚೆತ್ತುಕೊಳ್ಳಬೇಕಿದೆ. ಇವತ್ತು ಬಂಧನವಾಗುವ ದಂಧೆಕೋರರು ನಾಳೆ ದಂಡಕಟ್ಟಿ, ಜಾಮೀನು ಪಡೆದು ಜೈಲಿನಿಂದ ಹೊರುತ್ತಾರೆ. ಆ ಬಳಿಕ ತಾವು ನಡೆಸುತ್ತಿದ್ದ ದಂಧೆಯನ್ನು ಬಿಟ್ಟು ಹೊಸ ದಾರಿ ಹಿಡಿಯುವುದಿಲ್ಲ. ಬದಲಿಗೆ ಮತ್ತೊಂದು ಕಡೆಗೆ ಹೋಗಿ ಇದೇ ದಂಧೆಯನ್ನು ಮಾಡುತ್ತಾರೆ. ಇಂತಹರಿಂದ ಹೆಣ್ಣು ಮಕ್ಕಳು ದೂರವಿದ್ದರೆ ನಿಮ್ಮ ಜೀವನ ಸುಖವಾಗಿರುತ್ತದೆ. ಇನ್ನಾದರೂ ಮಸಾಜ್ ಸೆಂಟರ್, ಪಾರ್ಲರ್ ಮುಂತಾದವುಗಳ ಬಗ್ಗೆ ಸಂಬಂಧಿಸಿದವರು ಗಮನಹರಿಸಬೇಕಿದೆ. ಇಲ್ಲದೆ ಹೋದರೆ ದಂಧೆಕೋರರು ಎಲ್ಲಿ ಬೇಕಾದರೂ ಮಸಾಜ್ ಸೆಂಟರ್ ತೆರೆದು ಅದನ್ನು ವೇಶ್ಯಾವಾಟಿಕೆಯ ಅಡ್ಡ ಮಾಡುವುದರಲ್ಲಿ ಎರಡು ಮಾತಿಲ್ಲ. ☯

# ಅಧಿಕಾರ ವಹಿಸಿಕೊಂಡ ಕೂಡಲೇ ಸಹೋದ್ಯೋಗಿಗಳಿಗೆ ಪತ್ರ ಬರೆದರು.....

2 ☜

ಸದೃಢರಾಗಿರಲು ಹಾಗೂ ಆರೋಗ್ಯ ಸ್ಥಿತಿಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳುವುದು. ನಿಯಮಿತ ವ್ಯಾಯಾಮ, ಕೆಲಸದ ಒತ್ತಡ ನಿವಾರಣೆ, ದೀರ್ಘಕಾಲದ ಕರ್ತವ್ಯಗಳ ವಿಭಜನೆ, ಉತ್ತಮ ಕರ್ತವ್ಯದ ವಾತಾವರಣ ನಿರ್ಮಾಣ, ನೈತಿಕ ಉತ್ಸಾಹ ಹೆಚ್ಚಿಸುವ ಕ್ರಮಗಳು, ವಿನಾಕಾರಣ ರಜೆ ನಿರಾಕರಿಸದಿರುವುದು, ಉತ್ತಮ ಸೇವೆಯನ್ನು ಗುರುತಿಸಿ ಪುರಸ್ಕರಿಸುವುದರಿಂದ, ಅವರು ಪ್ರೇರೇಪಣೆಗೊಂಡು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಅವರ ಕುಟುಂಬದ ಕ್ಷೇಮಾಭಿವೃದ್ಧಿಗೆ ಒತ್ತು ನೀಡುವ ಆಚರಣೆಗಳನ್ನು ಹಿರಿಯ ಅಧಿಕಾರಿಗಳಾದ ನಾವೆಲ್ಲರೂ ನಮ್ಮ ಆದ್ಯತೆಯೆಂದು ಪರಿಗಣಿಸಿಕೊಳ್ಳುವುದು.

ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ ಪೊಲೀಸರಾದ ನಮ್ಮೆಲ್ಲರ ಹೊಣೆ ಮತ್ತು ನಮ್ಮ ಪ್ರಥಮ ಆದ್ಯತೆ. ಮಹಿಳೆಯರ ಮತ್ತು ಮಕ್ಕಳ ವಿರುದ್ಧ ಚಾಲ್ತಿಯಲ್ಲಿರುವ ಕಾನೂನಿನ ಪರಿಣಾಮಕಾರಿ ಜಾರಿ, ಇಂತಹ ಅಪರಾಧಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಸುರಕ್ಷತೆ ವಾತಾವರಣ ನಿರ್ಮಾಣಕ್ಕಾಗಿ ಸಾರ್ವಜನಿಕ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ನಮ್ಮ ನಾಡಿನ ಯುವಜನತೆಗೆ ಮಾರಕವಾಗಿರುವ ಮಾದಕ ವಸ್ತುಗಳ ವಿರುದ್ಧದ ಸಮರ ನಿರಂತರವಾಗಿರಬೇಕು. ರಾಜ್ಯದಲ್ಲಿ ಮಾದಕ ವಸ್ತುಗಳ ಉತ್ಪಾದನೆ, ಸಾಗಣೆ ಹಾಗೂ ಮಾರಾಟಗಳ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸುವುದರೊಂದಿಗೆ, ಮಾದಕ ದ್ರವ್ಯದ ವಿರುದ್ಧ ಆಂದೋಲನಗಳು ಹಾಗೂ ಮದ್ಯ ವ್ಯಸನಕ್ಕೆ ಬಲಿಯಾದ ವ್ಯಕ್ತಿಗಳ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವುದು.

ಜೂಜಾಟ, ಮಟ್ಕಾ, ವೇಶ್ಯಾವಾಟಿಕೆಗಳು ಹಾಗೂ ಎಲ್ಲಾ ರೀತಿಯ ಅನೈತಿಕ ಚಟುವಟಿಕೆಗಳು ನಾಡಿನ ಯಾವುದೇ ಸ್ಥಳದಲ್ಲಿ ನಡೆಯದಂತೆ ಹದ್ದಿನ ಕಣ್ಣಿಡುವುದು ಹಾಗೂ ರೌಡಿ, ಸಮಾಜಘಾತುಕ ಶಕ್ತಿಗಳು ಹಾಗೂ ಇತರೆ ಸಂಘಟಿತ ಅಪರಾಧಗಳನ್ನು ತಡೆಯಲು ಚಾಲ್ತಿಯಲ್ಲಿರುವ ಕಾನೂನುಗಳನ್ನು ಬಳಸಿಕೊಳ್ಳುವುದು. ಪರಿಣಾಮಕಾರಿಯಾಗಿ ತಂತ್ರಜ್ಞಾನ ಆಧಾರಿತ ಇಂದಿನ ಯುಗದಲ್ಲಿ ಭೌತಿಕ ಅಪರಾಧಗಳನ್ನು ಹಿಮ್ಮೆಟ್ಟಿಸಿ, ತೀವ್ರಗತಿಯಲ್ಲಿ ಏರುತ್ತಿರುವ ಸೈಬರ್ ಅಪರಾಧಗಳ ನಾಗಾಲೋಟವನ್ನು ಸಮರ್ಥವಾಗಿ ತಡೆದು, ವಂಚಿತ ಹಣವು ಸಂತ್ರಸ್ತರಿಗೆ ಶೀಘ್ರವಾಗಿ ತಲುಪುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.

ರಸ್ತೆಗಳಲ್ಲಿ ಉತ್ತಮ ಸಂಚಾರ ನಿರ್ವಹಣೆ ಜಾರಿ ಮಾಡುವುದು ಹಾಗೂ ರಸ್ತೆ ಅಪಘಾತಗಳ ಪರಿಣಾಮಕಾರಿ ನಿಯಂತ್ರಣದಿಂದ ಅಮಾಯಕರ ಪ್ರಾಣವನ್ನು ಉಳಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂಬುದನ್ನು ನಾವು ಅರಿಯಬೇಕು.

ಸಮಾಜದಲ್ಲಿ ನೆಮ್ಮದಿ ಹೆಚ್ಚಿಸುವ, ಶಾಂತಿ ಸ್ಥಾಪಿಸುವ, ಸುರಕ್ಷಿತ ವಾತಾವರಣ ನಿರ್ಮಿಸುವ, ಸಂಕಷ್ಟದಲ್ಲಿರುವ ಜನರಿಗೆ ನೆರವಾಗುವ, ದುರ್ಬಲ ವರ್ಗದವರಿಗೆ ಮತ್ತು ನೊಂದವರಿಗೆ ನ್ಯಾಯ ದೊರಕಿಸಿಕೊಡುವ ವಿಶೇಷ ಅವಕಾಶ ಮತ್ತು ಜವಾಬ್ದಾರಿ ಪೊಲೀಸರಾದ ನಮಗಿದೆ ಎಂಬುದನ್ನು ನಾವು ಎಂದೂ ಮರೆಯಕೂಡದು. ಈ ನಮ್ಮ ನಾಡು ಮತ್ತು ನಾಡಿನ ಜನತೆಯ ಒಳಿತಿಗಾಗಿ ನಾವೆಲ್ಲರೂ ಶಕ್ತಿ ಮೀರಿ, ಪಾರದರ್ಶಕತೆ, ವೃತ್ತಿಪರತೆಯಿಂದ ಸೇವೆ ಸಲ್ಲಿಸಿ, ಕರ್ನಾಟಕ ರಾಜ್ಯವನ್ನು ದೇಶದಲ್ಲೇ ಅತಿ ಹೆಚ್ಚು ಸುರಕ್ಷಿತ ವಾತಾವರಣವಿರುವ ಹಾಗೂ ಅತ್ಯುತ್ತಮ ವಾಸಯೋಗ್ಯ ತಾಣವನ್ನಾಗಿ ಪರಿವರ್ತಿಸಲು ಪಣತೊಡೋಣ. ಮತ್ತೊಮ್ಮೆ ನಿಮ್ಮೆಲ್ಲರಿಗೂ ನನ್ನ ಶುಭಾಶಯಗಳು.

-ಡಾ|| ಎಂ.ಎ. ಸಲೀಂ

6 ☜

''ಯಾಕೆ, ಏನು ಅಂತ ಆಮೇಲೆ ಕತೆ ಹೇಳ್ತೀನಿ. ಮೊದಲು ನಾನು ಹೇಳಿದ್ದನ್ನುಮಾಡಿ'' ಎಂದು ರೇಗುವ ರೀತಿ ಹೇಳಿದ ನಂತರ ಪಿ.ಸಿ.ಗಳಿಗೆ ಸೂಚನೆ ನೀಡಿದನು.

ಕುಟುಂಬದವರಿಗೆ ಭಯ ಮತ್ತು ಅನುಮಾನ ಕಾಡುತ್ತಿದೆ. ಮಹೇಂದ್ರನನ್ನ ಯಾಕೆ ಕರೆಸುತ್ತಿದ್ದಾರೆ? ಆ ಪತ್ರದಲ್ಲಿ ಅವನ ಬಗ್ಗೆ ಬರೆದಿದ್ದಾಳ?

●●●

ಮೃತಳ ಅಂತಿಮ ಪತ್ರ !

ಪೊಲೀಸ್ ಅಧಿಕಾರಿಗಳ ಸಮಕ್ಷಮಕ್ಕೆ ನನ್ನ ಅಂತಿಮ ಪತ್ರ ಅರ್ಪಿಸುತ್ತಿದ್ದೇನೆ. ಮೊದಲು ಸತ್ಯ ಹೇಳ್ತೀನಿ. ನಾನು ಆತ್ಮಹತ್ಯೆ ಮಾಡಿಕೊಂಡಿಲ್ಲ. ಇದು ಪರೋಕ್ಷಕೊಲೆ! ಆತ್ಮಹತ್ಯೆ ಮಾಡಿಕೊಳ್ಳುವಂತೆ ಭಯದ ಆ ಸನ್ನಿವೇಶ ಸೃಷ್ಟಿ ಮಾಡಿದ್ದರು. ಯಾರು ಗೊತ್ತೆ ? ನಮ್ಮ ಕುಟುಂಬದ ಆತ್ಮೀಯ ವ್ಯಕ್ತಿ ಮಹೇಂದ್ರ...! ಅವನು ನನ್ನನ್ನು ತುಂಬಾ ದಿನಗಳಿಂದ ಲವ್ ಮಾಡುತ್ತಿದ್ದ. ನಾನು ಸಲಿಗೆಯಿಂದ ಇದ್ದೆ ನಿಜ. ಆದರೆ ಪ್ರೀತಿ-ಪ್ರೇಮಕ್ಕೆ ಪ್ರಚೋದನೆ ನೀಡಿರಲಿಲ್ಲ. ಯಾಕೆ ಅಂದರೆ ಸಂಸಾರದ ದೊಡ್ಡ ಜವಾಬ್ದಾರಿ ಇತ್ತು.

ಅವನು ಹೇಳಿದ್ದೇನು ಗೊತ್ತೆ ?

ಅವನ ಬಾಹ್ಯರೂಪ ಬಲು ಆಕರ್ಷಕವಾಗಿದೆ. ಅವನು ವ್ಯಾಯಾಮ ಶಿಕ್ಷಕನಾಗಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನು ಜಿಮ್‌ಗೆ ಹೋಗಿ ಬಾಡಿ ಬಿಲ್ಡರ್ ವ್ಯಾಯಾಮ ಮಾಡುತ್ತಾನೆ. ಅವನನ್ನು ತುಂಬಾ ಮಂದಿ ಯುವತಿಯರು ಇಷ್ಟಪಟ್ಟಿದ್ದರು. ನಾನು ಅವನಿಂದ ಆಕರ್ಷಿತಳಾಗಿದ್ದರೂ ಸಹ ಪ್ರೀತಿ, ಪ್ರೇಮ, ಮದುವೆ ಬಗ್ಗೆ ಕನಸು ಕಾಣುವಂತ ಸ್ಥಿತಿಯಲ್ಲಿ ಇರಲಿಲ್ಲ. ಅಂತಹ ಜವಾಬ್ದಾರಿ ನನಗಿತ್ತು. ಹಾಗಾಗಿ ಅವರನ್ನು ಈ ವಿಚಾರದಲ್ಲಿ ಅವಾಯ್ಡ್ ಮಾಡುತ್ತಿದ್ದೆ.

ಅವನೊಂದು ಸತ್ಯ ಹೇಳಿದ್ದ. ಅವನನ್ನು ಈ ನಗರದ ಪ್ರಖ್ಯಾತ ಉದ್ಯಮಿ ಭುಜಂಗರಾವ್ ಅವರ ಮಗಳು ಪಲ್ಲವಿ ಲವ್ ಮಾಡುತ್ತಿದ್ದಾಳೆ. ಅವನೆಂದರೆ ಅವಳಿಗೆ ಲವ್ ಮಾತ್ರ ಅಲ್ಲ ವಿಪರೀತ ಕ್ರೇಜ್ ಇತ್ತು . ಅದು ಏನು ಸಾಮಾನ್ಯ ಆಗಿರಲಿಲ್ಲ. ಸುಮಾರು ಐನೂರು ಕೋಟಿ ರೂಪಾಯಿ ಆಸ್ತಿಗೆ ಅವಳು ಮಾತ್ರ ವಾರಸುದಾರಳು.

ಯಾಕೆ ಅಂದರೆ ಅವಳ ತಂದೆಗೆ ಅವಳೊಬ್ಬಳೇ ಮಗಳು. ಭುಜಂಗರಾವ್ ತುಂಬಾ ಒಳ್ಳೆಯವರು. ಕಡು ಬಡವನಾಗಿರುವ ಮಹೇಂದ್ರನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಒಪ್ಪಿದ್ದರು. ಅವಳ ಲವ್‌ಗೆ ಗ್ರೀನ್‌ಸಿಗ್ನಲ್ ನೀಡಿದ್ದರು.

ಆದರೆ ಮಹೇಂದ್ರನದ್ದು ನಿಜವಾದ ಲವ್ ಆಗಿರಲಿಲ್ಲ. ಅವನು ಪಲ್ಲವಿಯನ್ನು ಪ್ರಾಮಾಣಿಕವಾಗಿ ಪ್ರೀತಿ ಮಾಡಿದ್ದರೆ ನನ್ನ ಜೊತೆ ನಿರಂತರವಾಗಿ ಸೆಕ್ಸ್ ಸಂಬಂಧ ಬೆಳೆಸುತ್ತಿರಲಿಲ್ಲ.

ಇದು ಸತ್ಯ ...!

ನಾನಾಗಿಯೇ ಸೆಕ್ಸ್‌ಗೆ ಅವಕಾಶ ನೀಡಿರಲಿಲ್ಲ. ಸಂಸಾರದ ಜವಾಬ್ದಾರಿ ಮುಗಿಯುವತನಕ ಆಸೆಗಳನ್ನು ಕಂಟ್ರೋಲ್ ಮಾಡಿಕೊಂಡಿರುತ್ತೇನೆ ಎಂದು ಹೇಳಿದ್ದೆ.

ಮಹಾನ್ ಚಪಲಗಾರ. ಕಾಮದಾಹದ ಮನುಷ್ಯ. ಅವನಿಗೆ ತನ್ನ ಮೇಲೆ ವಿಪರೀತ ಕಾಮದ ಆಸೆ ಇತ್ತು. ಒಂದು ದಿವಸ ಮನೇಲಿ ಯಾರೂ ಇರಲಿಲ್ಲ. ನನ್ನ ಜೊತೆ ಆತ್ಮೀಯವಾಗಿ ಮಾತಾಡುತ್ತಾ, ಆ ರಾತ್ರಿ ಊಟ ಮಾಡಿದ. ತಾನು ತಂದಿದ್ದ ಸ್ಪೆಷಲ್ ತಿಂಡಿಗಳನ್ನು ತಿನ್ನಲು ಕೊಟ್ಟ. ಅವುಗಳ ರುಚಿ ಮತ್ತು ವಾಸನೆಯ ಬಗ್ಗೆ ಅನುಮಾನ ಬಂದಿತ್ತು. ಆದರೆ ಅವನು ಜೋಕ್ ಹೇಳುತ್ತಾ ನಗಿಸುತ್ತಿದ್ದರಿಂದ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ತಿಂದು ಮುಗಿಸಿದ್ದೆ.

ಆಗ ನನಗೆ ಒಂದು ರೀತಿ ಅಮಲು ಆವರಿಸಿತ್ತು. ಅಮಲಿನ ಪ್ರಮಾಣ ಕಡಿಮೆ ಇತ್ತು. ಅಮಲಿನ ಪ್ರಮಾಣ ಕಡಿಮೆ ಇತ್ತು. ಅವನು ನನ್ನನ್ನು ತಬ್ಬಿಕೊಂಡು ಮುದ್ದಾಡುತ್ತಾ, ನನ್ನ ಕಾಮ ಕೆರಳುವ ರೀತಿ ಶೃಂಗಾರದ ಆಟ ಆಡಿದ್ದ. ಎಷ್ಟೇ ಆಗಲಿ ನಾನೂ ಸಹ ಹೆಣ್ಣಲ್ಲವೆ? ಹಾಗಾಗಿ ನಾನು ಸಹ ಮಾದಕತೆ ಅಮಲು ಕಾಮದ ಪ್ರಚೋದನೆಗೆ ಒಳಗಾಗಿ ಸಹಕರಿಸಿದ್ದೆ.

ನನಗೆ ಸುಖದ ಅನುಭವ ಆಗಿತ್ತು.

ಮಾದಕತೆ ಅಮಲು ಇಳಿದಿತ್ತು.

ಆ ರಾತ್ರಿ ಪೂರ್ತಿ ನನ್ನನ್ನು ಉಪಯೋಗಿಸಿಕೊಂಡ. ನಾನು ಪೂರ್ಣ ಜಾಗೃತ ಸ್ಥಿತಿಯಲ್ಲಿದ್ದೆ. ಆದರೆ ಸುಖದ ರುಚಿ ಕಂಡಿದ್ದರಿಂದ ಮತ್ತು ಶೀಲ ಕಳೆದುಕೊಂಡಿದ್ದರಿಂದ ನಾನು ವಿರೋಧಿಸಲಿಲ್ಲ. ಮನೆಯವರಿಗೆ ಗೊತ್ತಿಲ್ಲದಂತೆ ನಾವಿಬ್ಬರು ಬೇರೆ ಬೇರೆ ಊರುಗಳಿಗೆ ಹೋಗಿ ಎಂಜಾಯ್ ಮಾಡುತ್ತಿದ್ದೆವು.

ಅವನು ಬದಲಾಗಿದ್ದು ಯಾವಾಗ?

ಶ್ರೀಮಂತ ಕುಟುಂಬದ ಪಲ್ಲವಿ ಇವನನ್ನು ಪ್ರೀತಿ ಮಾಡಲು ಪ್ರಾರಂಭ ಮಾಡಿದ್ದರಿಂದ ಹಂತ ಹಂತವಾಗಿ ಬದಲಾಗುತ್ತಿದ್ದ. ಇದು ನನ್ನ ಗಮನಕ್ಕೆ ಬಂದಿತ್ತು.

ಅವನಿಗೆ ನನ್ನ ಮೇಲೆ ಆಸೆಯಾದಾಗಲೆಲ್ಲಾ ಪ್ರಚೋದನೆ ಮಾಡಿ ನನ್ನ ಬಯಕೆ ಕೆರಳಿಸಿ ಅನುಭವಿಸುತ್ತಿದ್ದ!

ಮೊದಲು ಹೇಳುತ್ತಿದ್ದದ್ದು ಏನು?

ನಾನು ನಿನಗಾಗಿ ಎಷ್ಟು ವರ್ಷ ಬೇಕಾದರೂ ಕಾಯುತ್ತೇನೆ ಚಂದ್ರಿಕ. ನಾವಿಬ್ಬರು ಮದುವೆ ಆಗೋಣ. ಈಗಾಗಲೇ ಗಂಡ-ಹೆಂಡತಿ ರೀತಿ ದಾಂಪತ್ಯ ಸುಖವನ್ನು ಅನುಭವಿಸುತ್ತಿದ್ದೇವೆ. ನಿನ್ನ ಸಂಸಾರದ ಜವಾಬ್ದಾರಿ ಮುಗಿದ ಮೇಲೆ ಲೋಕದ ದೃಷ್ಟಿಯಿಂದ ಸಂಸಾರಿಗಳಾಗೋಣ ಎಂದಿದ್ದನು.

ಆಗ ನನಗೆ ಪಲ್ಲವಿಯ ಲವ್ ಬಗ್ಗೆ ತಿಳಿದಿತ್ತು. ಅದರ ಬಗ್ಗೆ ಪ್ರಸ್ತಾಪ ಮಾಡಿದಾಗ ಅವನು ಉಡಾಫೆಯಿಂದ ನಗಾಡಿದ್ದ. ಅವಳ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ಅವಳನ್ನ ನಾನು ಆಸ್ತಿಗಾಗಿ ಮದುವೆ ಆಗುತ್ತೇನೆ. ಆದರೆ ನಿನ್ನನ್ನು ನಿಜವಾದ ಪ್ರೀತಿಗಾಗಿ ಮದುವೆ ಆಗುತ್ತೇನೆ.

ನಾನು ಪ್ರಶ್ನೆ ಮಾಡಿದ್ದೆ!

ಇಬ್ಬರನ್ನು ಮದುವೆ ಆಗಲು ಕಾನೂನಿನಲ್ಲಿ ಅವಕಾಶ ಇಲ್ಲವಲ್ಲ...!

ಅವನು ತಾತ್ಸಾರದಿಂದ ಹೇಳಿದ್ದನು. ನಾನು ತುಂಬಾ ಬುದ್ಧಿವಂತಿಕೆಯಿಂದ ಆಟ ಆಡಿ ಅವಳನ್ನು ಎಂದು ವಿಲಕ್ಷಣವಾಗಿ ನಗಾಡಿದ್ದನು.

ಇದರ ಅರ್ಥ ತಿಳಿದಿತ್ತು.

ಅವನ ಕೆಟ್ಟ ಉದ್ದೇಶ ಅರ್ಥವಾಗಿತ್ತು. ಅವಳನ್ನು ಮದುವೆ ಮಾಡಿಕೊಂಡು ಕೆಲವು ದಿನಗಳು ಅಥವಾ ವರ್ಷ ಪ್ರೀತಿಯ ಗಂಡನಂತೆ ಮತ್ತು ಮಾವನಿಗೆ ಅಚ್ಚುಮೆಚ್ಚಿನ ಅಳಿಯನ ರೀತಿ ವರ್ತಿಸುತ್ತೇನೆ. ಆಮೇಲೆ ಅವಳು ಈ ಲೋಕದಲ್ಲಿ ಇರೋಲ್ಲ. ತಂದೆಯಿಂದ ಮಗಳಿಗೆ ಬಂದಿರುವ ಸಮಸ್ತ ಆಸ್ತಿಗೆ ಗಂಡನಾದ ನನಗೆ ಅಧಿಕಾರ, ಹಕ್ಕು ಬರುತ್ತದೆ. ಆಮೇಲೆ ನಾನು ಮದುವೆ ಮಾಡಿಕೊಂಡು ಶ್ರೀಮಂತಿಕೆಯ ವೈಭವದಲ್ಲಿ ಸುಖ ಅನುಭವಿಸೋಣ ಎಂದಿದ್ದನು.

ಇದು ಪರಮ ಸತ್ಯ.

ಈ ಬದುಕನ್ನೇ ಮುಕ್ತಾಯ ಮಾಡಿಕೊಳ್ಳಲು ನಿರ್ಧರಿಸಿರುವ ನನಗೆ ಸುಳ್ಳು ಹೇಳುವ ಅಥವಾ ಮತ್ತೊಬ್ಬರ ಮೇಲೆ ಆರೋಪ ಮಾಡುವ ಅಗತ್ಯ ಇಲ್ಲ.

ಇತ್ತೀಚೆಗೆ ನಾಲ್ಕು ದಿನಗಳಿಂದ ಅವನು ಬದಲಾಗಿದ್ದ. ನಾನು ಆತ್ಮಹತ್ಯೆಯ ನಿರ್ಧಾರಕ್ಕೆ ಬರುವ ಎರಡು ದಿನಗಳ ಮೊದಲು ಸಹ ನನ್ನನ್ನು ಅನುಭವಿಸಿದ್ದ.

ಆದರೆ ಬದಲಾಗಿದ್ದ.

ರಾಕ್ಷಸ ಆಗಿದ್ದನು.

ಎರಡು ವರ್ಷಗಳಿಂದ ನನ್ನನ್ನು ಅನುಭವಿಸಿ ಬೇಸರ ಆಗಿತ್ತು ಅಂತ ಕಾಣುತ್ತದೆ. ಪಲ್ಲವಿ ಸಹ ಚೆನ್ನಾಗಿದ್ದಾಳೆ. ಹಾಗಾಗಿ ನನ್ನಿಂದ ದೂರಾಗಿದ್ದ. ಅವನು ನೆನ್ನೆಯ ದಿವಸ ಫೋನ್ ಮಾಡಿ ಹೇಳಿದ್ದ. ಏನು ಗೊತ್ತೆ ?

ನೀನು ಬದುಕಿರಬಾರದು.

ನೀನು ಸಾಯಬೇಕು ಚಂದ್ರಿಕ.

ನೀನು ಬದುಕಿದ್ದರೆ ಪಲ್ಲವಿಯನ್ನು ಮದುವೆ ಆಗಲು ಯಾವತ್ತಿದ್ದರೂ ಸಹ ತೊಂದರೆ, ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ ನೀನು ಸಾಯಲೇಬೇಕು. ನೀನಾಗಿಯೇ ಸತ್ತರೆ (ಆತ್ಮಹತ್ಯೆ ಮಾಡಿಕೊಂಡರೆ) ಸಂತೋಷ. ಇಲ್ಲದಿದ್ದರೆ ನಾನೇ ನಿನ್ನನ್ನು ನೀನಾಗಿಯೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡ್ತೀನಿ ಎಂದು ಹೆದರಿಸಿದ್ದನು.

ಹೇಗಾದರೂ ಆಗಲಿ ಅಂತ ನಾನು ಈ ಪತ್ರ ಬರೆದಿದ್ದೇನೆ. ನಾನು ಸಂಪಾದನೆ ಮಾಡಿ ಮನೇಲಿ ಇಟ್ಟಿರುವ ಹಣ ಮತ್ತು ಬ್ಯಾಂಕ್‌ನಲ್ಲಿ ಇರುವ ಹಣ ಎಲ್ಲವನ್ನೂ ನನ್ನ ತಂಗಿಯರು, ತಾಯಿ ಮತ್ತು ಇಬ್ಬರು ತಮ್ಮಂದಿರಿಗೆ ಸಮ ಭಾಗ ಮಾಡಲು (ಯಾರ್ಯಾರಿಗೆ ಎಷ್ಟೆಷ್ಟು ಹಣ ಅಂತ ವಿವರವಾಗಿ ಬರೆದಿದ್ದೇನೆ) ತಿಳಿಸಿ ವಿಲ್ ಮಾಡಿದ್ದೇನೆ. ಆದರೆ ಕಾಪಿ ರಿಜಿಸ್ಟರ್ ಆಗಿದೆ.

ನನ್ನನ್ನು ಯಾವ ರೀತಿ ಹೆದರಿಸಿ ಯಾವಾಗ ಆತ್ಮಹತ್ಯೆ (ಕೊಲೆ) ಸನ್ನಿವೇಶ ಸೃಷ್ಟಿ ಮಾಡುತ್ತಾರೋ ಗೊತ್ತಿಲ್ಲ. ನಾನು ಭಯ ಮತ್ತು ಆತಂಕದಿಂದ ಬದುಕುತ್ತಿದ್ದೇನೆ. ನಾನು ಯಾವ ರೀತಿಯಿಂದ ಸತ್ತರೂ ಸಹ ಅದು ಆತ್ಮಹತ್ಯೆ ಅಲ್ಲ. ಯಾಕೆ ಅಂದರೆ ನನಗೆ ನನ್ನವರ ಜೊತೆ ಬದುಕುವ ಆಸೆ ಇದೆ. ನಾನು ಸತ್ತರೆ ಅದು ಕೊಲೆ ಆಗಿರುತ್ತದೆ. ಆ ಕೊಲೆಗೆ ಮಹೇಂದ್ರನೇ ಕಾರಣ ಆಗಿರುತ್ತಾನೆ ಎಂದು ಪ್ರಮಾಣ ಪೂರ್ವಕವಾಗಿ ಬಡಿದು ಈ ಪತ್ರ ಮುಗಿಸುತ್ತಿದ್ದೇನೆ.

ಸತ್ಯ ದೃಷ್ಟೆ ಹೆಣ್ಣು.

ಚಂದ್ರಿಕ...

ಸುದೀರ್ಘ ಆತ್ಮಹತ್ಯೆಪತ್ರವನ್ನು ಪೊಲೀಸ್ ಅಧಿಕಾರಿ ಎಲ್ಲರಿಗೂ ಕೇಳುವಂತೆ ಜೋರಾಗಿ ಎಂಬ ಹೇಳಿದನು.,

ಎಲ್ಲರಿಗೂ ಶಾಕ್ ಆಗಿದೆ.

ಮಹೇಂದ್ರರನ್ನು ತಲಾಶ್ ಮಾಡಿ ಪೊಲೀಸರು ಬಂಧಿಸಿ ಕರೆ ತಂದಿದ್ದಾರೆ.

ಡೆಡ್‌ಬಾಡಿ ರೂಮಿನಲ್ಲಿದ್ದ ಮಾಧವನ್‌ಗೆ ಕಂಡು ಬಂದಿತು! ಮಂಚದ ಬಲಭಾಗದ ಕಂಬ ಹತ್ತಿರ ಇದ್ದ ಆ್ಯಸಿಡ್ ಸೀಸೆ! ಅದರ ಮೇಲೆ ಕರ್ಚೀಪ್ ಹಾಕಿ ಎತ್ತಿಕೊಂಡನು. ಅದರ ಕ್ಯಾಪ್ ಅನ್ನು ಓಪನ್ ಮಾಡಿರಲಿಲ್ಲ. ಬಹುಶಃ, ಆ್ಯಸಿಡ್ ಎರಚುತ್ತೇನೆ ಅಂತ ಹೆದರಿಸಿ ಅವಳಾಗಿಯೇ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾನೆ.

ವಿಲ್ ಮಾಡಿರುವ ಸಂಗತಿ ಮನೆಯವರಿಗೆ ಈ ಮೊದಲು ತಿಳಿದಿರಲಿಲ್ಲ. ಅವಳ ಅಂತಿಮ ತಂತ್ರ ಓದಿದ್ದನ್ನು ಕೇಳಿದ ಮೇಲೆ ಅವರ ದುಃಖ ಈಗ ಮತ್ತಷ್ಟು ಜಾಸ್ತಿ ಆಯಿತು.

ಪೊಲೀಸ್ ಅಧಿಕಾರಿ ಮಾದವನ್‌ಗೆ ಅವಳ ಸಂಪಾದನೆಯ ಬಗ್ಗೆ ಅನುಮಾನ ಬಂದಿದೆ. ತುಂಬಾ ಕಡಿಮೆ ಓದಿರುವ ಅವಳಿಗೆ ಯಾವ ಕಂಪನಿಯಲ್ಲಿ ತುಂಬಾ ಸಂಬಳ ಬರುವ ಕೆಲಸ ಸಿಕ್ಕಿತ್ತು ? ಆ ಕಂಪನಿ ಯಾವುದು? ಎಲ್ಲಿದೆ ಅಂತ ಮನೆಯವರಿಗೆ ಯಾಕೆ ಹೇಳಿಲ್ಲ?

ಬೀರುವಿನ ಲಾಕರ್‌ನಲ್ಲಿ ನೋಟಿನ ಕಂತೆಗಳ ಜೊತೆಗೆ ಬ್ಯಾಂಕ್ ಪಾಸ್‌ಬುಕ್‌ಗಳು ಮತ್ತು ಎಫ್.ಡಿ. ಬಾಂಡ್‌ಗಳಿದ್ದವು. ಬ್ಯಾಂಕ್ ಪಾಸ್‌ಬುಕ್‌ಗಳ ಇತ್ತೀಚಿಗಿನ ವ್ಯವಹಾರಗಳ ಫೋಟೋ ಕ್ಲಿಕ್ ಮಾಡಿದ್ದನು.

ಮಹೇಂದ್ರನ ಬಂಧಿಸಿ ಕರೆತಂದಿದ್ದಾರೆ. ಈ ಸುದ್ದಿ, ಆತ್ಮಹತ್ಯೆಯ ಪತ್ರದ ವಿವರಗಳೊಂದಿಗೆ ರಂಗು, ರಂಗಾಗಿ, ರೋಚಕ ರೀತಿಯಲ್ಲಿ ಪ್ರಸಾರ ಆಗುತ್ತಿದೆ.

ಪ್ರಿಯತಮೆ ಪಲ್ಲವಿಗೆ ಆಘಾತವಾಗಿದೆ. ಅವಳ ತಂದೆ ಮಹೇಂದ್ರನನ್ನು ಬೈಯುತ್ತಿದ್ದಾರೆ.

ಅವಳು ಪ್ರಜ್ಞಾಶೂನ್ಯಳಾಗಿದ್ದಾಳೆ.

ನನ್ನ ಪ್ರಿಯತಮ ಇಂತಹ ವಂಚಕ ಮತ್ತು ಕೆಟ್ಟ ಕಾಮುಕನೆ? ನನ್ನನ್ನು ಈ ಆಸ್ತಿಗಾಗಿ ಮದುವೆ ಮಾಡಿಕೊಂಡು ನಂತರ ಅನುಮಾನ ಬಾರದ ರೀತಿ ಸಾಯಿಸುವ ಪ್ಲಾನ್ ಮಾಡಿದ್ದು ನಿಜವೆ? ಹಾಗಂತ ಆತ್ಮಹತ್ಯೆ ಮಾಡಿಕೊಂಡಿರುವ ಚಂದ್ರಿಕ ಬರೆದಿದ್ದಾಳೆ. ಸಾಯಲು ಸಿದ್ಧಳಾಗಿದ್ದ ಅವಳು ಅವನ ಮೇಲೆ ಯಾಕೆ ಸುಳ್ಳು ಆರೋಪ ಮಾಡುತ್ತಾಳೆ ಎಂದು ಗೋಳಾಡುತ್ತಿದ್ದಾಳೆ.

●●●

ಮಹೇಂದ್ರನ ಬೆರಳು ಗುರುತುಗಳನ್ನು ಪಡೆಯಲಾಗಿದೆ. ಪೊಲೀಸ್ ಅಧಿಕಾರಿ ಮಾಧವನ್ ಗಡುಸಾಗಿ ''ನೀನು ನಿನ್ನ ಕೆಟ್ಟ ಉದ್ದೇಶದಿಂದ ಅವಳಿಗೆ ಆ್ಯಸಿಡ್ ಸೀಸೆ ತೋರಿಸಿ ಹೆದರಿಸಿ ಅವಳಾಗಿಯೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದು ನಿಜ ತಾನೆ?''

ಮಹೇಂದ್ರ ಯಾವ ಹಿಂಜರಿಕೆ ಮತ್ತು ಗೊಂದಲ ಇಲ್ಲದಂತೆ ''ಇಲ್ಲ ಸಾರ್... ನಾನು ಅವಳ ಸಾವನ್ನು ಬಯಸಿರಲಿಲ್ಲ. ಮುಖ್ಯವಾಗಿ ಅವಳನ್ನು ಮದುವೆ ಆಗುವ ಆಸೆ ನನಗೆ ಇರಲಿಲ್ಲ'' ಎಂದು ಹೇಳುತ್ತಿರುವಾಗಲೇ ಪೊಲೀಸ್ ಅಧಿಕಾರಿ ಗಡುಸಾಗಿ ''ಯಾಕೆ ಅಂದರೆ ನಿನ್ನನ್ನು ಶ್ರೀಮಂತ ಉದ್ಯಮಿ ಮಗಳು ಪಲ್ಲವಿ ಪ್ರೀತಿ ಮಾಡಿದ್ದಳು. ನಿನ್ನನ್ನೇ ಮದುವೆ ಆಗಲು ನಿರ್ಧರಿಸಿದ್ದಳು. ಮಗಳ ಲವ್‌ಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದನು ಅವಳ ತಂದೆ. ಆದರೆ ನೀನು ಚಂದ್ರಿಕಾಳ ಜೊತೆ ಅನೈತಿಕ ಸಂಬಂಧ ಹೊಂದಿದ್ದೆ.''

ಅವನು ಅಷ್ಟೇ ಗಂಭೀರವಾಗಿ ''ನಾನ್ಯಾವತ್ತೂ ಅವಳನ್ನು ಆ ದೃಷ್ಟಿಯಿಂದ ನೋಡಿರಲಿಲ್ಲ. ನನ್ನ ಜೊತೆ ಅವಳು ಸಲಿಗೆಯಿಂದ ಇರುತ್ತಿದ್ದಳು. ಆದರೆ ನಾನು ಅವಳ ಮೈ ಸಹ ಟಚ್ ಮಾಡುತ್ತಿರಲಿಲ್ಲ. ಈಗ ನಾನೊಂದು ಪ್ರಶ್ನೆ ಕೇಳ್ತೀನಿ. ಕೋಪ ಮಾಡಿಕೊಳ್ಳಬೇಡಿ ಸಾರ್'' ಎಂದು ರೇಗುವ ರೀತಿ ಕೇಳಿದನು.

''ಅವಳು ಆತ್ಮಹತ್ಯೆ ಮಾಡಿಕೊಂಡಿದ್ದು ಯಾವಾಗ?''

''ನೆನ್ನೆರಾತ್ರಿ ಹನ್ನೊಂದು ಗಂಟೆ ಸಮಯದಲ್ಲಿ ನೀನು ಆ್ಯಸಿಡ್ ಸೀಸೆ ತಗೊಂಡು ಈ ಮನೆಗೆ ಬಂದಿದ್ದೆ.''

ಮಹೇಂದ್ರ ''ನೆನ್ನೆ ಸಂಜೆಯಿಂದ ಇವತ್ತು ಬೆಳಿಗ್ಗೆ ಆರು ಗಂಟೆಯತನಕ ಜಯನಗರದ ಪೊಲೀಸ್ ಲಾಕಪ್‌ನಲ್ಲಿದ್ದೆ. ರೌಡಿಗಳ ಗಲಾಟೆ ಮಾಡುತ್ತಿದ್ದರು. ನಾನು ನೋಡುತ್ತಾ ನಿಂತಿದ್ದೆ. ಆ ರೌಡಿಗಳ ಜೊತೆ ನನ್ನನ್ನು ಅರೆಸ್ಟ್ ಮಾಡಿದ್ದರು. ಬೇಕಾದರೆ ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ತಿಳಿದುಕೊಳ್ಳಿ'' ಎಂದನು.

ತನಿಖೆ ಮಾಡಿದಾಗ ಅದು ಸತ್ಯ ಎಂದು ಗೊತ್ತಾಯಿತು. ಫಿಂಗರ್ ಪ್ರಿಂಟ್ ರಿಪೋರ್ಟ್ ಬಂದಿತು. ಆ್ಯಸಿಡ್ ಸೀಸೆ ಮೇಲೆ ಮೂಡಿದ್ದ ಬೆರಳು ಗುರುತುಗಳು ಮಹೇಂದ್ರನ ಬೆರಳು ಗುರುತುಗಳಲ್ಲ. ಅದು ಮೃತಳಾಗಿರುವ ಚಂದ್ರಿಕಾಳ ಗುರುತುಗಳು ಎಂದು ವರದಿ ಬಂದಿದೆ.

ಮಹೇಂದ್ರ ''ಸಾರ್... ಅವಳ್ಯಾಕೆ ನನ್ನ ಮೇಲೆ ಇಂತಹ ಆರೋಪ ಮಾಡಿದ್ದಾಳೆ ಅಂತ ಗೊತ್ತಿಲ್ಲ. ಅವಳು ಪತ್ರದಲ್ಲಿ ಬರೆದಿರೋದೆಲ್ಲಾ ಸುಳ್ಳು. ಇಲ್ಲಿಯತನಕ ನಾನು ಯಾವತ್ತೂ ಅವಳೊಂದಿಗೆ ಸುಖದ ಸಂಬಂಧ ಬೆಳೆಸಿಲ್ಲ.

ಡಾಕ್ಟರ್ ರಿಪೋರ್ಟ್ ಬಂದಿತು.

ಶಾಕಿಂಗ್ ರಿಪೋರ್ಟ್.

ಅವಳಿಗೆ ಏಡ್ಸ್ ಕಾಯಿಲೆ ಇತ್ತು. ಅದು ಮೂರನೆಯ ಹಂತಕ್ಕೆ ಬಂದಿದೆ ಎಂದು ವರದಿ ಆಗಿದೆ.

ಮಹೇಂದ್ರನನ್ನು ಏಡ್ಸ್ ಟೆಸ್ಟ್ ಮಾಡಿಸಲು ವ್ಯವಸ್ಥೆ ಮಾಡಲಾಯಿತು.

ಅವನಿಗೆ ಏಡ್ಸ್ ಇರಲಿಲ್ಲ.

ಎರಡು ವರ್ಷಗಳಿಂದ ಮತ್ತು ಅವಳು ಸಾಯುವ ಎರಡು ದಿನಗಳ ಹಿಂದೆ ಸಹ ಸಂಭೋಗ ಮಾಡಿದ್ದರೆ ಏಡ್ಸ್ ಇವನಿಗೂ ಬರಬೇಕಿತ್ತು.

ಅವಳ ಆರೋಪ ಸುಳ್ಳು.

ಪೊಲೀಸ್ ಅಧಿಕಾರಿಗೆ ಏನೋ ನೆನಪಾಗಿ ಅವಳ ಬ್ಯಾಂಕ್ ಪಾಸ್ ಬುಕ್‌ಗಳನ್ನು ಪರೀಕ್ಷೆ ಮಾಡಿದನು. ಆತ್ಮಹತ್ಯೆ ಮಾಡಿಕೊಂಡ ಹಿಂದಿನ ದಿವಸದ ದಿನಾಂಕದಲ್ಲಿ ಅವಳ ಎರಡು ಬ್ಯಾಂಕ್ ಖಾತೆಗಳಿಗೆ ತಲಾ ಹತ್ತು ಲಕ್ಷ ರೂಪಾಯಿಯನ್ನು ವರ್ಗಾಯಿಸಲಾಗಿತ್ತು. ಶ್ರೀಮಂತ ಉದ್ಯಮಿ ಪಲ್ಲವಿಯ ತಂದೆಯ ಖಾತೆಯಿಂದ ಫಂಡ್ ಟ್ರಾನ್ಸ್‌ಫರ್ ಮಾಡಲಾಗಿದೆ. ಆ ಬೀದಿಯಲ್ಲಿ ಅಳವಡಿಸಿದ್ದ ಸಿ.ಸಿ. ಕ್ಯಾಮರಾಗಳನ್ನು ಪರೀಕ್ಷೆ ಮಾಡಿದಾಗ, ಆ ರಾತ್ರಿ ಪಲ್ಲವಿಯ ತಂದೆ ಅವಳ ಮನೆಗೆ ಹೋಗಿದ್ದ ದೃಶ್ಯ ಆ ಕ್ಯಾಮರಾದಲ್ಲಿ ಸೆರೆಯಾಗಿತ್ತು.

ಪೊಲೀಸರು ಆ ಉದ್ಯಮಿಯನ್ನು ಬಂಧಿಸಿ ವಿಚಾರಣೆ ಮಾಡಿದರು. ಮಗಳ ಲವ್‌ಗೆ ಇವರಿಗೆ ಒಪ್ಪಿಗೆ ಆಗಿರಲಿಲ್ಲ. ಅವನ ಮೇಲೆ ಇಂತಹ ಆರೋಪ ಬರುವಂತೆ ಮಾಡಲು ಚಂದ್ರಿಕಾಳನ್ನು ಉಪಯೋಗಿಸಿಕೊಂಡು ಹಣದ ಆಸೆ ತೋರಿಸಿ, ತಾವು ಹೇಳಿದಂತೆ ಪತ್ರ ಬರೆಯಬೇಕು ಎಂದಿದ್ದರು.

ಕಾಲ್‌ಗರ್ಲ್ ಆಗಿ ವಿಪರೀತ ಹಣ ಸಂಪಾದನೆ ಮಾಡುತ್ತಿದ್ದಳು. ಕೆಲವು ವರ್ಷಗಳಿಂದ ಅವಳಿಗೆ ನೂರಾರು ಮಂದಿ ದೇಶ ಮತ್ತು ವಿದೇಶದ ಗಿರಾಕಿಗಳ ಜೊತೆ ಸೇರುತ್ತಿದ್ದರಿಂದ ಏಡ್ಸ್ ಕಾಯಿಲೆ ಬಂದಿತ್ತು. ಯಮಯಾತನೆ ಅನುಭವಿಸುತ್ತಾ ಸಾಯುವುದಕ್ಕಿಂತ, ಲಕ್ಷಗಳ ಹಣ ಪಡೆದು ಆತ್ಮಹತ್ಯೆ ಮಾಡಿಕೊಂಡರೆ ತನ್ನ ತಾಯಿ, ಒಡಹುಟ್ಟಿದವರಿಗೆ ಸಹಾಯ ಆಗುತ್ತದೆ ಅಂತ ಒಪ್ಪಿದ್ದಳು. ಮಹೇಂದ್ರ ನಿರಪರಾಧಿ ಎಂದು ತೀರ್ಮಾನಿಸಲಾಗಿದೆ.

☯

# ಧೋನಿ 'KSDL'ಗೆ ಕೊ ಕೊಟ್ಟಿದ್ದು ಮರೆತು ಹೋಯಿತೇ?!

ಇಸವಿ 2006-07ರಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ (KSDL) ಅಂದಿನ ಸ್ಟಾರ್ ಕ್ರಿಕೆಟರ್ ಎಂ.ಎಸ್. ಧೋನಿಯನ್ನ ತನ್ನ ಉತ್ಪನ್ನಗಳಿಗೆ ಬ್ರಾಂಡ್ ಅಂಬಾಸಿಡರ್ ಆಗಿ ನೇಮಿಸಿಕೊಂಡಿತ್ತು. ಬರೋಬ್ಬರಿ ಆರೂವರೆ ಕೋಟಿ ರೂ. ರಾಯಲ್ಟಿ ಕೊಟ್ಟಿತ್ತು.

ಸೂಪರ್ ಸ್ಟಾರ್ ಧೋನಿ ಕ್ರಿಕೆಟ್ಟು, ಈವೆಂಟ್ಸ್, ಆಡ್ಸ್... ಅಂತ ತುಂಬಾ ಬ್ಯುಸಿ ಇದ್ದ ಕಾಲವದು. ನಮ್ಮ ಮೈಸೂರು ಸೋಪ್ ನವರು ಒಂದು ಡೇಟ್ ಫಿಕ್ಸ್ ಮಾಡಿ ಆಡ್ಸ್ ಶೂಟಿಂಗ್ ಇಟ್ಟುಕೊಂಡು ಕಾಯುತ್ತ ಕುಂತಿದ್ದಾಗ.... ದೋನಿ ಬರಲೇ ಇಲ್ಲ, ಇನ್ನೊಂದು ಡೇಟ್ ಫಿಕ್ಸ್ ಮಾಡಿದಾಗಲೂ ಬರಲಿಲ್ಲ. ಕನಿಷ್ಠ ಪಕ್ಷ ಕ್ಷಮೆ ಕೇಳಿ ಇನ್ನೊಂದು ಡೇಟ್ ಕೂಡ ಕೊಡಲಿಲ್ಲ. ಇದರಿಂದ ಕೆರಳಿದ KSDLನವರು ದೋನಿ ವಿರುದ್ಧ ಕೋರ್ಟ್‌ಗೆ ಹೋಗಿದ್ರು.




ಅವನಿಂದಾಗಿ ನಮಗೆ 6.5. ಕೋಟಿ ನಷ್ಟವಾಗಿದೆ, ಅದನ್ನು ಕಟ್ಟಿ ಕೊಡಲು ಆದೇಶಿಸಿ... ಎಂದು ವಿನಂತಿಸಿದ್ದರು. ಆದರೆ ಧೋನಿ ಪರ ವಕೀಲರು ಇದಕ್ಕೆ ಸೊಪ್ಪು ಹಾಕಲೇ ಇಲ್ಲ, ನನ್ನ ಕಕ್ಷಿದಾರರು ತುಂಬಾ ಬ್ಯುಸಿ ಸ್ವಾಮಿ, ಬೇಕಂತ ತೊಂದರೆ ಕೊಟ್ಟಿಲ್ಲ.... ಅವರು ಬರ್ತೀನಿ ಅಂದಾಗ ಇವರೇ ಬಳಸಿಕೊಂಡಿಲ್ಲ... ಹೀಗೇ ಏನೇನೋ ವಾದ ಮಂಡಿಸಿದರು. ಈ ಕೇಸ್ ಐದು ವರ್ಷ ನಡೆದಿತ್ತು. ಅಲ್ಲಿವರೆಗೂ ದೋನಿ ತಾನು ಬೀಸುವ ಬ್ಯಾಟ್ ಮೇಲೆ ಅಂಟಿಸಿದ್ದ KSDL ಸ್ಟಿಕ್ಕರ್ ತೆಗೆದೇ ಇರಲಿಲ್ಲ, ಕಡೆಗೆ,ದೋನಿಗೆ ನಮ್ಮ ಸೋಪ್ ನವರಿಂದಲೇ ತೊಂದರೆಯಾಗಿದೆ... ಎಂಬ ತೀರ್ಪು ಬಂದು ನಮ್ಮವರೇ 40 ಲಕ್ಷ ಪರಿಹಾರ ನೀಡುವಂತಾಗಿತ್ತು!

ಕಾಂಗ್ರೆಸ್‌ನವರಿಗೆ ಈ ಘಟನೆ ಮರೆತು ಹೋಯಿತಾ? ಮತ್ತೆ ಉತ್ತರದವರಿಗೆ ಮಣೆ ಹಾಕಿದ್ದೇಕೆ? ಅಥವಾ ಲೋಕಲ್ ಹೆಣ್ಣುಮಕ್ಕಳ ಆಡ್ಸ್ ಮಾಡಿದರೆ ದೊಡ್ಡ ಮೊತ್ತ ಸಿಗಲ್ಲ, ಅದೇ ಉತ್ತರದ ಚೆಲುವೆ ಯರಾದರೆ ಭಾರಿ ದುಡ್ಡು ಹೊಡೆಯಬಹುದು! ಅಂದುಕೊಂಡು ಮಿಲ್ಕ್ ಬ್ಯೂಟಿಯನ್ನು ಬುಕ್ ಮಾಡಲಾಯಿತೇ? ವಿರೋಧ ಪಕ್ಷದವರಂತೂ ಬಾಯಿ ಬಡ್ಕೊಂತಿದ್ದಾರೆ. ತಮನ್ನಾಗೆ ಅಷ್ಟೊಂದು ಡಿಮ್ಯಾಂಡ್ ಇಲ್ಲಾ,ಅವಳು ಸಿನಿಮಾದಲ್ಲಿ ನಟಿಸುವುದಕ್ಕೆ (ಐದಾರು ತಿಂಗಳ ಶೂಟಿಂಗ್) ಎರಡರಿಂದ ಮೂರು ಕೋಟಿ ತಗೋತಾಳೆ, ಈ ಸೋಪ್ ಆಡ್ಸ್‌ಗೆ ಆರು ಕೋಟಿ!! ಹೇಗೆ ಸಾಧ್ಯ. ಅವಳನ್ನ ಬುಕ್ ಮಾಡಿರೋ ಕಾಂಗ್ರೆಸ್ ಕಳ್ರು 50:50 ಕಮಿಷನ್ ಹೊಡೆದವ್ರೆ ಅನ್ನುತ್ತಿದ್ದಾರೆ! ಇದು ನಿಜಾನಾ?! ☯




ಮಳೆ ಧೋ...ಎಂದು ಉಯುತ್ತಿದೆ. ಬೆಂಗಳೂರು ಮುಳುಗಿ ಹೋಗಿದೆ. ಆಡಳಿತ ಕಾಂಗ್ರೆಸ್ ಸರ್ಕಾರ ಸಂತ್ರಸ್ತರ ಗೋಳು ಕೇಳೋದ್ ಬಿಟ್ಟು ಅಲ್ಲೆಲ್ಲೋ ಹೊಸಪೇಟೆ ಕಡೆ 'ಸಾಧನಾ ಸಮಾವೇಶ' ಹಮ್ಮಿಕೊಂಡು ಭಿಟ್ಟಿ ಭಾಗ್ಯಗಳ ಬಗ್ಗೆ ಬಾಯಿ ಹರ್ಕೊಂತಿದೆ. ನೀರಿನ ಹೊಂಡ ಆಗಿರೋ ಬೆಂಗಳೂರನ್ನ 'ಬ್ರಾಂಡ್ ಬೆಂಗಳೂರು' ಅನ್ನುತ್ತಿದೆ.

ಇದರ ಮಧ್ಯೆ ಮೈಸೂರು ಸ್ಯಾಂಡಲ್ ಸೋಪ್ ಜಾಹಿರಾತಿಗೆ ಮಿಲ್ಕ್ ಬ್ಯೂಟಿ ತಮನ್ನಾ ಬಾಟಿಯಳನ್ನು ಕರ್ಕೊಂಡ್ ಬಂದು, ಅವಳಿಗೆ 6 ಕೋಟಿ 20 ಲಕ್ಷ ರೂ. ಫೀಸ್ ಕೊಟ್ಟು ಆಡ್ಸ್ ಶೂಟ್ ಮಾಡಿಸತೊಡಗಿದೆ!


ಕೊಳಚೆ ನೀರಲ್ಲಿ ಮುಳುಗಿ ಸಾಯುತ್ತಿರೋ ಜನರಿಗೆ ಲೈಫ್ ಬಾಯ್ ಸೋಪ್ ತಗೋಳೋಕೆ ಗತಿ ಇಲ್ಲ, ಇನ್ನು ಮೈಸೂರ್ ಸ್ಯಾಂಡಲ್ ಸೋಪ್ ತಗೋಳೋಕೆ ಆಗುತ್ತಾ? ಇದೊಂತರ... ಗಂಜಿಗೂ ಗತಿಯಿಲ್ಲ ನಂಜಿಕು ಬುಲಾವ್ ಎಂಬ ಗಾದೆಯಂತಿದೆ!

# ಸ್ಯಾಂಡಲ್ ಸೋಪ್ ತಗಳಿ... ತಮನ್ನಾ ಥರಾ ಮಿಂಚಿ!

ತಮನ್ನಾ ಚರ್ಮಕ್ಕೆ ಕೊಡುವ 6 ಕೋಟಿ ಹಣವನ್ನು ಇಲ್ಲೇ ಸ್ಲಂಗಳಲ್ಲಿ ಮಳೆ ನೀರಲ್ಲಿ ಸಾಯುತ್ತ ಬಿದ್ದಿರೋ ಬಡವರಿಗೆ ಕೊಡುವುದಕ್ಕೆ ಆಗ್ತಾ ಇರಲಿಲ್ವೆ.... ಹಾಗೂ ಸ್ಯಾಂಡಲ್ ವುಡ್ ಸೋಪ್ ವ್ಯಾಪಾರ ವೃದ್ಧಿಸಲು ಜಾಹಿರಾತು ಬೇಕೇ ಬೇಕು ಅನ್ನಿಸಿದ್ದರೆ ನಮ್ಮ ಸ್ಯಾಂಡಲ್ ವುಡ್‌ನಲ್ಲಿ ಯಾರೂ ಇರಲೇ ಇಲ್ವಾ? ರಮ್ಯಾ, ಸೋನಲ್, ರಚಿತಾ, ಅಧಿತಿ...ಇರಲಿಲ್ವಾ! ಹಾಗಾದ್ರೆ ಜನ ಹಿಂದಿ ಹೀರೋಯಿನ್ ಹುಂಡಿಗೆ ಮಾತ್ರ ಹಣ ಹಾಕ್ತಾರ?

ನಮ್ಮ ಚಲುವೆಯರನ್ನು ನೋಡೋದಿಲ್ವ? ಒಂದಂತೂ ಸತ್ಯ ಕಣ್ರೀ, ಈಗಿನ ಸರ್ಕಾರ ಸ್ಯಾಂಡಲ್ ವುಡ್ ವಿರೋಧಿ ಯಾಗಿದೆ! ನಮ್ಮ ಸ್ಯಾಂಡಲ್ ವುಡ್ ಹೆಣ್ಣುಮಕ್ಕಳ ಶಾಪ ತಟ್ಟಿ ಸ್ಯಾಂಡಲ್ ಸೋಪ್... ಉದ್ಧಾರವಾದಂತೆ ಬಿಡ್ರಿ!! ☯





# ನಂಬರ್ ಸಿಕ್ಕ ಬಳಿಕ ಹೊಸ ವರಸೆ ಶುರು!

ರೇಣುಕಾಸ್ವಾಮಿ ಕೊಲೆ ಕೇಸ್ ವಿಚಾರಣೆ ನಿಮಿತ್ತ ಕೋರ್ಟ್‌ಗೆ ಆಗಮಿಸಿದ್ದಾಗ ಸುಬ್ಬ ಸುಬ್ಬಿ ಮುಖಾಮುಖಿಯಾದದ್ದು, ಸುಬ್ಬ ಮಾತಾಡಿಸದೆ ಹೊರಟಾಗ ಸುಬ್ಬಿ ಅವನಿದ್ದ ಲಿಫ್ಟ್ ಒಳಗೆ ನುಗ್ಗಿ ಹೊಸ ನಂಬರ್ ಪಡೆದುಕೊಂಡದ್ದೆಲ್ಲ ಹಳೇ ಸುದ್ದಿ. ಹೊಸ ಸುದ್ದಿ ಏನಪ್ಪಾ ಅಂದ್ರೆ, ಸುಬ್ಬನ ನಂಬರ್ ಸಿಕ್ಕ ಬಳಿಕ ಸುಬ್ಬಿ ಹೊಸ ವರಸೆ ಶುರುಮಾಡಿಕೊಂಡಿದ್ದಾಳೆ! ರೇಣುಕಾ ವಧೆಗೂ ಮುಂಚೆ ಸಿಕ್ಕಾಪಟ್ಟೆ ಟ್ವೀಟ್‌ಗಳನ್ನು ಮಾಡುತ್ತ, ಸುಬ್ಬನ ಪತ್ನಿಯ ಪೋಸ್ಟ್‌ಗಳಿಗೆ ಕೌಂಟರ್ ಪೋಸ್ಟ್ ಹಾಕುತ್ತಿದ್ದ ಸುಬ್ಬಿ, ಆಮೇಲೆ ಗಪ್‌ಚುಪ್ ಆಗಿದ್ದಳು. ಅದರೀಗ, ಸುಬ್ಬನ ಮೊಬೈಲ್ ನಂಬರ್ ಸಿಕ್ಕ ಬಳಿಕ ಮತ್ತೆ ಇನ್ಸ್ಟಾ.....ಆಟ ಶುರು ಮಾಡಿದ್ದಾಳೆ. ಈ ಬಾರಿ ತನ್ನದೇ ವೈಟ್ ಅಂಡ್ ವೈಟ್ ಫೋಟೋ ಹಾಕಿಕೊಂಡು, ಅದರ ಮೇಲೆ ವೇದಾಂತ ಕುಟ್ಟಿಕೊಂಡಿದ್ದಾಳೆ!




ಎಲ್ಲಾ ಪ್ರಶ್ನೆಗಳಿಗೂ ಮೌನವೆ ಒಳ್ಳೆಯ ಉತ್ತರ.... ಎಂಥ ಪರಿಸ್ಥಿತಿಯಲ್ಲೂ ನಗುವೇ ಉತ್ತಮ ಪ್ರತಿಕ್ರಿಯೆ ಎಂದು ಟೈಪಿಸಿಕೊಂಡಿದ್ದಾಳೆ ಸುಬ್ಬಿ!! ಇದಕ್ಕೆ ಒಂದಷ್ಟು ಲೈಕ್ಸ್ ಬಂದಿವೆ. ಪರಂತು, ಅಣ್ಣನ ಅಭಿಮಾನಿಗಳಿಂದ ಅಥವಾ ಅತ್ತಿಗೆ ಅಭಿಮಾನಿಗಳಿಂದ ಯಾವುದೇ ಪ್ರತಿಕ್ರಿಯೆ ಇನ್ನೂ ವ್ಯಕ್ತವಾಗಿಲ್ಲ.....


ಲೇ ಮನೆ ಮುರುಕಿ, ಇನ್ನಾದ್ರೂ ಬುದ್ಧಿ ಕಲಿಯೇ... ಅವರ ಪಾಡಿಗೆ ಅವ್ರನ್ನ ಬಿಡೆ... ನಿನ್ ಗಂಡ ಸಿಂಗ್ ಅಳ್ತಾ ಅವ್ನಲ್ಲ, ಅವನತ್ರ ಹೋಗಿ ಬಾಳೆ... ಅಂತ ಯಾರೂ ಬುದ್ಧಿ ಹೇಳಲ್ಲಾ ನೋಡ್ರಿ!! ಇಷ್ಟು ಕೆಟ್ಟು ಹೋಗಿದೆಯಾ ಈ ಸಮಾಜ?! ☯

# ವಾರ್-2 'ಬ್ಯಾಕ್ ಬಸ್ಟರ್' ವಿವಾದ!




ನಮ್ಮ ದಕ್ಷಿಣದ ಚಲನಚಿತ್ರ ನಿರ್ದೇಶಕ ರಾಮ್ ಗೋಪಾಲ್ ವರ್ಮ ಬಾಲಿವುಡ್‌ಗೆ ಹೋಗಿ ಭಯಂಕರವಾಗಿ ಮಿಂಚಿದ್ದು, ಈಗ ನಿವೃತ್ತರಾಗಿ ಎಣ್ಣೆ ಹೊಡೆದುಕೊಂಡು ಅಗ್ಗದ ನಟಿಯರ ಕಾಲು ನೆಕ್ಕುತ್ತಾ ಬಿದ್ದಿರುವುದು ನಿಮಗೆಲ್ಲ ಗೊತ್ತೇ ಇದೆ. ಈ ವ್ಯಕ್ತಿ ಸುಮ್ನೆ ಇರೋದೇ ಇಲ್ಲ ಕಣ್ರೀ. ಸದಾ ಒಂದಲ್ಲ ಒಂದು ವಿವಾದ ಎಬ್ಬಿಸ್ತಾನೆ ಇರ್ತಾರೆ.

ಮೊನ್ನೆ ಮೊನ್ನೆ ಚಿರಂಜೀವಿ, ಪವನ್, ಬಾಲಯ್ಯ... ಬಗ್ಗೆ ಹಗುರವಾಗಿ ಕಾಮೆಂಟ್ಸ್ ಹಾಕಿ ಗಬ್ಬೆಬ್ಬಿಸಿದ್ದರು. ಈಗ ಹಿಂದಿಯ ವಾರ್ -2 ಚಿತ್ರದ ಬಗ್ಗೆ ತರ್ಲೆ ಮಾಡಿ ನೆಟ್ಟಿಗರಿಂದ ಟೀಕೆಗೆ ಗುರಿಯಾಗಿದ್ದಾರೆ. ಇಷ್ಟಕ್ಕೂ ವರ್ಮ ಏನು ತರ್ಲೆ ಮಾಡಿದ್ದಾರೆ ಎಂದರೆ, ಇತ್ತೀಚೆಗೆ 'ವಾರ್-2' ಚಿತ್ರದ ಟ್ರೇಲರ್ ರಿಲೀಸ್ ಆಯಿತಲ್ಲ, ಅದರಲ್ಲಿ ಹೀರೋಯಿನ್ ಕೈರಾ ಅಡ್ವಾನಿ ಬಿಕನಿ ಪೋಸ್ಟರ್ ಅನ್ನು ಹೈಲೈಟ್ ಮಾಡಿ...



ರಾಷ್ಟ್ರಗಳು ಹಾಗೂ ಸಮಾಜದ ವಿಚಾರ ಒತ್ತಟ್ಟಿಗಿಡಿ, ಹೃತಿಕ್-ತಾರಕ್ ಮಧ್ಯೆ ಯುದ್ಧ ನಡೆದು ಯಾರಾದರೂ ಅವಳ 'ಬ್ಯಾಕ್' ಗೆದ್ದರೆ, 'ವಾರ್-2' ಬ್ಯಾಕ್ ಬಸ್ಟರ್ ಗ್ಯಾರೆಂಟಿ! ಎಂದು ಟ್ವೀಟ್ ಮಾಡಿದ್ದಾರೆ!! ಇದು ಕೈರಾ ಅಭಿಮಾನಿಗಳನ್ನು ಮಾತ್ರವಲ್ಲ, ಇಡೀ ಹೆಣ್ಣು ಕುಲವನ್ನು ಕೆರಳಿಸಿ ಬಿಟ್ಟಿದೆ.

ನೆಟ್ಟಿಗರು ವರ್ಮನಿಗೆ ಸರಿಯಾಗಿ ಹೆಕ್ಕಿ ಇಳಿದಿದ್ದಾರೆ. ಯಾವಾಗ ತನ್ನ ವಿರುದ್ಧ ಟ್ವೀಟ್ ವಾರ್ ಶುರುವಾಯಿತೋ, ಐನಾತಿ ವರ್ಮ ತಾನು ಮಾಡಿದ್ದ 'ಬ್ಯಾಕ್' ತರ್ಲೆಯನ್ನು ಡಿಲೀಟ್ ಮಾಡಿದ್ದಾರೆ!! ಸದ್ಯಕ್ಕೆ ಸೈಲೆಂಟ್ ಆಗಿದ್ದಾರೆ. ಮುಂದೆ ಇನ್ನೇನು ತರ್ಲೆ ಮಾಡ್ತಾರೋ... ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 25.5.2025

# ಮನು ಮಡೆನೂರ್ ಬ್ಯಾನ್?!

ನಾವು ಇಡುವ ಒಂದು ತಪ್ಪು ಹೆಜ್ಜೆ ಎಷ್ಟೆಲ್ಲ ಅನಾಹುತ ಸೃಷ್ಟಿಸಬಲ್ಲದು ಎನ್ನುವುದಕ್ಕೆ ಸ್ಪಷ್ಟ ಉದಾಹರಣೆಯಾಗಿ ಹಾಸ್ಯ ನಟ ಮಡೆನೂರು ಮನು ನಮ್ಮ ಕಣ್ಣ ಮುಂದಿದ್ದಾರೆ.

ಕಾಮಿಡಿ ಕಿಲಾಡಿಗಳು ರಿಲಾಯಿಟಿ ಶೋ ಮೂಲಕ ಮಿಂಚಿ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟು ಇನ್ನೇನು ಪ್ರವರ್ಧಮಾನಕ್ಕೆ ಬರಬೇಕು ಎನ್ನುವಷ್ಟರಲ್ಲೇ ಮನು ಭವಿಷ್ಯ ಇದೀಗ ಡೋಲಾಯಮಾನವಾಗಿದೆ. ಮಾಡಬಾರದ್ದನ್ನು ಮಾಡಿದರೆ ಆಗಬಾರದ್ದೇ ಆಗುತ್ತದೆ ಎನ್ನುವುದಕ್ಕೆ ಮನು ಮಡೆನೂರ್ ಜ್ವಲಂತ ಸಾಕ್ಷಿ. ಅತ್ಯಾಚಾರ ಆರೋಪದ ಮೇಲೆ ಪೊಲೀಸ್ ವಶದಲ್ಲಿರುವ ಮನು ಸ್ಯಾಂಡಲ್‌ವುಡ್ ಸ್ಟಾರ್ ನಟರ ವಿರುದ್ಧ ಆಡಿದ್ದಾರೆ ಎನ್ನಲಾದ ಮಾತು ಇದೀಗ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇದೇ ಕಾರಣಕ್ಕೆ ಇದೀಗ ಅವರನ್ನು ಸ್ಯಾಂಡಲ್‌ವುಡ್ ಮತ್ತು ಕಿರುತೆರೆಯಿಂದ ಬ್ಯಾನ್ ಮಾಡುವ ಸಾಧ್ಯತೆ ಇದೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಂಗಳವಾರ (ಮೇ 27) ಈ ಬಗ್ಗೆ ತುರ್ತುಸಭೆ ಕರೆದಿದ್ದು, ಇದರಲ್ಲಿ ಮನು ಬ್ಯಾನ್ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತದೆ.

ಒಂದು ವೇಳೆ ವಾಯ್ಸ್ ಅವರದ್ದೇ ಎಂದು ಸಾಬೀತಾದರೆ ಮನುವಿನ ಸ್ಯಾಂಡಲ್‌ವುಡ್ ಸಿನಿ ಜರ್ನಿ ಒಂದೇ ಚಿತ್ರಕ್ಕೆ ಕೊನೆಯಾಗಬಹುದು!

ಮನು(?)ಸ್ಯಾಂಡಲ್‌ವುಡ್ ಸ್ಟಾರ್ಸ್ ಬಗ್ಗೆ ಕೀಳಾಗಿ ಮಾತನಾಡಿರುವ ಹಳೆಯ ಆಡಿಯೊ ಈಗ ವೈರಲ್ ಮಾಡಿದ್ದು ಸಂತ್ರಸ್ಥೆ ಮಿಸ್ ಮಿಂಚುವೇ ಆಗಿರೋದು ಹಲವು ಅನುಮಾಗಳನ್ನು ಹುಟ್ಟು ಹಾಕಿದೆ.



'ಶಿವರಾಜ್‌ಕುಮಾರ್ ಇನ್ನೊಂದು ಆರು ವರ್ಷ ಬದುಕಿದ್ರೆ ಹೆಚ್ಚು ಸತ್ತು ಹೋಗ್ತಾರೆ! ಧ್ರುವ ಸರ್ಜಾ ಇನ್ನೊಂದು ಎಂಟು ವರ್ಷ ಮಾರ್ಕೆಟ್‌ನಲ್ಲಿರಬಹುದು. ದರ್ಶನ್ ಈಗಾಗಲೇ ಸತ್ತೇ ಹೋದ. ದರ್ಶನ್‌ಗೆ ಇನ್ನೊಂದು ಆರು ವರ್ಷ ಕ್ರೇಜ್ ಇರುತ್ತೆ, ಆದ್ರೆ ಸಿನಿಮಾ ಮಾಡಲ್ಲ. ಈ ಮೂವರ ವಿರುದ್ಧ ಕಾಂಪಿಟೇಶನ್ ಕೊಡೋಕೆ ಬಂದಿರೋ ಗಂಡುಗಲಿ ನಾನು' ಎಂಬ ಸಾಲುಗಳು ಕನ್ನಡ ಚಿತ್ರರಂಗದಲ್ಲಿ ಬಿರುಗಾಳಿ ಎಬ್ಬಿಸಿ ಬಿಟ್ಟಿವೆ!

ಈ ಧ್ವನಿ ಮಡೆನೂರು ಮನು ಅವರದ್ದೇ ಎಂದು ಕೆಲವರು ವಾದಿಸುತ್ತಿದ್ದಾರೆ. ಮನು ಗೆಳೆಯರೊಂದಿಗೆ ಮದ್ಯ ಸೇವಿಸಿದಾಗ ಈ ರೀತಿ ಮಾತನಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ವೇಳೆ ಅಲ್ಲಿದ್ದವರು ಯಾರೋ ಇದನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಇದೀಗ ವೈರಲ್ ಮಾಡಿರಬಹುದು ಎಂದು ಸಂಶಯ ವ್ಯಕ್ತವಾಗುತ್ತಿದೆ.

ಸ್ಯಾಂಡಲ್‌ವುಡ್ ನಟರ ವಿರುದ್ಧ ಈ ರೀತಿ ನಾಲಗೆ ಹರಿಯಬಿಟ್ಟಿರುವ ಮನು ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ. ಜತೆಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಶಿವರಾಜ್‌ಕುಮಾರ್ ಅಭಿಮಾನಿಗಳು ದೂರು ದಾಖಲಿಸಿ, ಮನುವನ್ನು ಸ್ಯಾಂಡಲ್‌ವುಡ್‌ನಿಂದ ಬ್ಯಾನ್ ಮಾಡಬೇಕೆಂದು ಆಗ್ರಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಗಳವಾರ ಸಭೆ ಕರೆಯಲಾಗಿದೆ!


ಈ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ. ನರಸಿಂಹಲು ಮಾಧ್ಯಮಗಳ ಜತೆ ಮಾತನಾಡಿ, "ಮನು ಅವರನ್ನು ಬ್ಯಾನ್ ಮಾಡುವಂತೆ ಹಲವರು ಆಗ್ರಹಿಸುತ್ತಿದ್ದಾರೆ. ಈಗಲೇ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಿಲ್ಲ, ನಾಳೆ ಸಭೆ ನಡೆಸಿ ಅಲ್ಲಿನ ತೀರ್ಮಾನದಂತೆ ಕ್ರಮ ಕೈಗೊಳ್ಳುತ್ತೇವೆ ಎಂದಿದ್ದಾರೆ!

# ಬೇಗೂರ್‌ನಲ್ಲೇ ಇದ್ದಾನೆ ಹಾಲಿವುಡ್ ಡೈರೆಕ್ಟರ್!!

ಸ್ಯಾಂಡಲ್‌ವುಡ್‌ನಲ್ಲಿ ಈಗ ಒಳ್ಳೆ ಸಿನಿಮಾಗಳೇ ಇಲ್ಲಾ. ಇಂಥ ವೇಳೆ ಹೆಚ್ಚು ಸದ್ದಿಲ್ಲದೇ ಬಿಡುಗಡೆಯಾದ ಸಿನಿಮಾವೊಂದು ತಮಿಳುನಾಡಿನ ಹೊಸೂರಿನಲ್ಲಿ ಶತದಿನ ಪೂರೈಸಿದೆ ಎಂದರೆ ನಂಬುತ್ತೀರಾ?

ಅರೆ, ನಂಬಲೇಬೇಕು ಕಣ್ರೀ. ಅದೇ ಬೇಗೂರ್ ಕಾಲೋನಿ.

ಬೆಂಗಳೂರಿನ ಶಾರದಾ ಟಾಕೀಸ್‌ನಲ್ಲಿ 50 ಡೇಸ್, ಹೊಸೂರು ರಾಘವೇಂದ್ರ ಚಿತ್ರಮಂದಿರದಲ್ಲಿ 100 ಡೇಸ್ ಓಡಿದೆ! ಇದರ ಬಗ್ಗೆ ಬರೆಯುವ ಮುನ್ನ ಒಂದು ಫ್ಲಾಷ್ ಬ್ಯಾಕ್ ಹೇಳಿಬಿಡುತ್ತೇನೆ...




ನಿಮಗೆ ನೆನಪಿರಬೇಕು, ನಮ್ಮಲ್ಲಿ ಆರು ತಿಂಗಳ ಹಿಂದೆ ರಾಜೀವ ಎಂಬೆಸರಿನ ಸಿನಿಮಾ ಬಂದಿತ್ತು. ಮಯೂರ್ ಪಟೇಲ್ ಅದರ ನಾಯಕ ನಟ. ಐಎಎಸ್ ಅಧಿಕಾರಿ ಆದ್ರೂ ರೈತನ ಮುಂದೆ ಏನೇನೂ ಅಲ್ಲ, ಐಎಎಸ್ ಅಂದ್ರೆ, ಇಂಡಿಯನ್ ಅಡ್ಮಿನಿಸ್ಟ್ರೇಷನ್ ಸರ್ವಿಸ್ ಮಾತ್ರವಲ್ಲ, ಇಂಡಿಯನ್ ಅಗ್ರಿಕಲ್ಚರಲ್ ಸರ್ವಿಸ್! ಎಂದು ನಿರೂಪಿಸುವ ಕಥಾ ಹಂದರ 'ರಾಜೀವ' ಚಿತ್ರದ್ದು.ಕನ್ನಡ ಚಿತ್ರರಂಗದಲ್ಲಿ ಹೊಸ ಭಾಷ್ಯ ಬರೆದ ಬಂಗಾರದ ಮನುಷ್ಯ ಚಿತ್ರದಲ್ಲಿ ಅಣ್ಣಾವ್ರ ಹೆಸರು ರಾಜೀವ ಎಂದೇ ಇತ್ತು. ಇದೇ ಹೆಸರಿನಲ್ಲಿ ಕೃಷಿ ಮಹತ್ವ ಸಾರುವ, ರೈತನ ಸಾರ್ಥಕ ಬದುಕನ್ನು ಚಿತ್ರಿಸಿದ್ದ ವ್ಯಕ್ತಿ ಮಂಜು @ ಫ್ಲೈಯಿಂಗ್ ಮಂಜು! ಈತ ಬೆಂಗಳೂರು ಬೊಮ್ಮನಹಳ್ಳಿ ಪ್ರತಿಭೆ. ಮಂಜು ನ್ಯಾಷನಲ್ ಕೋ ಕೋ ಪ್ಲೇಯರ್ ಆಗಿ ಚಿಟ್ಟೆಯಂತೆ ಹಾರುತ್ತಿದ್ದರಿಂದ ಹೆಸರಿನ ಜೊತೆ ಫ್ಲೈಯಿಂಗ್ ಸೇರಿಕೊಂಡು ಫ್ಲೈಯಿಂಗ್ ಮಂಜು ಅಂತಲೇ ಫೇಮಸ್ ಆಗಿಬಿಟ್ಟಿದ್ದರು! ಇವರಿಗೆ ಕಲೆ ಅನ್ನೋದು ರಕ್ತಗತವಾಗಿ ಹರಿದು ಬಂದಿತ್ತು. ಅಜ್ಜ ಅಪ್ಪ ಎಲ್ಲರೂ ಡ್ರಾಮಾಗಳಲ್ಲಿ ಅಭಿನಯಿಸುವುದನ್ನು ನೋಡಿ ಅವರಿಂದ ಪ್ರಭಾವಿತರಾಗಿದ್ದರು. ಇಂಥ ಮಂಜುಗೆ ಸಿನಿಮಾ ರಂಗ ಸೆಳೆದಿದ್ದು ಕಾಕತಾಳಿಯವೇ ನಲ್ಲ, ಇವರು ಯಾವ ಇನ್‌ಸ್ಟಿಟ್ಯೂಟ್‌ಗೂ ಸೇರಿ ಸಿನಿಮಾ ಕೆಲಸ ಕಲಿತವರಲ್ಲ, ಕೆಲವು ಸಿನಿಮಾಗಳಲ್ಲಿ ಸಹನಟನಾಗಿ ನಟಿಸುವಾಗ, ಕ್ಯಾಮೆರಾ ಮೂವ್‌ಮೆಂಟ್ಸ್, ನಿರ್ದೇಶಕರ ಚಾಕಚಕ್ಯತೆಯನ್ನ ಗಮನಿಸುತ್ತ ಬಂದದ್ದಷ್ಟೇ. ಮುಂದೆ ತನ್ನ ಸ್ವಪ್ರಯತ್ನದಿಂದಲೇ ನಿರ್ಮಾಪಕರನ್ನು ಹಿಡಿದು ಕೃಷಿಯ – ರೈತರ ಮಹತ್ವ ಸಾರುವ ರಾಜೀವ ಚಿತ್ರಿಸಿದ್ದರು! ಅದು ಸೂಪರ್ ಹಿಟ್ ಆಗದಿದ್ರೂ ಒಂದು ಮಟ್ಟಕ್ಕೆ ಪ್ರದರ್ಶನ ಕಂಡಿತ್ತು. ಇದೇ ಸಿನಿಮಾ ತೆಲುಗು, ತಮಿಳಲ್ಲಿ ಬಂದಿದ್ರೆ ಮಂಜು ಹೆಸರು ಮುಗಿಲೆತ್ತರಕ್ಕೆ ಹಾರುತ್ತಿತ್ತು!

ಇದೆಲ್ಲ ಸ್ಯಾಂಡಲ್‌ವುಡ್‌ನಲ್ಲಿ ಅಸಾಧ್ಯ... ಅಂತ ಗೊತ್ತಿದ್ದರೂ, ಫ್ಲೈಯಿಂಗ್ ಮಂಜು ಎಲ್ಲೂ ಹಾರದೆ ಇಲ್ಲೇ ಇನ್ನೊಂದು ಅದ್ಭುತ ಚಿತ್ರಕತೆ ಪ್ರಯೋಗ ಮಾಡಿದರು. ಅದೇ 'ಬೇಗೂರ್ ಕಾಲೋನಿ'.

ಈಗ ಮೈನ್ ಮ್ಯಾಟರ್‌ಗೆ ಹಿಂತಿರುಗೋಣ ಬನ್ನಿ....


ಇದು ಬೇಗೂರು ಕಾಲೋನಿ ಎಂಬ ಬಡಾವಣೆಯಲ್ಲಿ ಸ್ಥಳೀಯ ಕ್ರೀಡಾ ಪ್ರತಿಭೆಗಳು ಒಂದು ಆಟದ ಮೈದಾನ ಮಂಜೂರು ಮಾಡಿಸಿಕೊಳ್ಳಲಿಕ್ಕಾಗಿ ಪರದಾಡುವ ಕಥೆ. ಸರ್ಕಾರಿ ಜಾಗವಿದ್ದರೂ ಆಟದ ಮೈದಾನಕ್ಕೆ ಜಾಗ ಕೊಡದೆ ಸತಾಯಿಸೋ ರಾಜಕಾರಣಿಗಳನ್ನು, ಭೂಗಳ್ಳರನ್ನು ಎದಿರು ಹಾಕೊಂಡು ಹೊಡೆದಾಡುವ ಹುಡುಗರು ಕೊಲೆಯಾದರೆ, ವೃದ್ಧ ತಂದೆಯೊಬ್ಬ ಎಲ್ಲರ ರುಂಡ ಚೆಂಡಾಡುವ ಅದ್ಭುತ ಚಿತ್ರಕತೆ.




ಕತೆ, ಚಿತ್ರಕತೆ ಬರೆದು ಈ ಸಿನಿಮಾ ನಿರ್ದೇಶನ ಮಾಡಿದ್ದ ಫ್ಲೈಯಿಂಗ್ ಮಂಜು, ತಂದೆ-ಮಗನಾಗಿ ದ್ವಿಪಾತ್ರದಲ್ಲಿ ನಟಿಸಿ, ಬೇಗೂರ್ ಕಾಲೋನಿಯನ್ನು ಅದ್ಭುತವಾಗಿ ಚಿತ್ರಿಸಿದ್ದರು. ಕೇವಲ 32ರ ಪ್ರಾಯದ ಯುವಕ ಮಂಜು ತಂದೆ ಪಾತ್ರದಲ್ಲಿ ಹಳೇ ಸಿನಿಮಾದಲ್ಲಿ ಟೈಗರ್ ಪ್ರಭಾಕರ್ ಮಿಂಚಿದಂತೆ ನಟಿಸಿದ್ದಾರೆ! ಈ ಪಾತ್ರವೇ ಬೇಗೂರ್ ಕಾಲೋನಿ ಹೈಲೈಟ್!!



ಕಿಚ್ಚ ಸುದೀಪ್ ಕ್ಯಾಂಪ್‌ನ ಕ್ರಿಕೆಟರ್ ರಾಜೀವ, ಪೋಸಾನಿ ಮುರುಳಿಯವರನ್ನು ಬಿಟ್ರೆ ಉಳಿದೆಲ್ಲರೂ ಹೊಸಬರೆ. ಸಿನಿಮಾ ನೋಡಿದ ಬುದ್ಧಿಜೀವಿಗಳು ಇದೇನ್ರಿ ಸ್ಯಾಂಡಲ್‌ವುಡ್‌ನಲ್ಲಿ ಬಾಲಿವುಡ್ ಸಿನಿಮಾ ಬಂದಂತಿದೆ... ಎಂದು ಉದ್ಘರಿಸಿದ್ದರು!



ಹುಡುಗರ ನಟನೆ, ಕ್ಯಾಮೆರಾ ವರ್ಕ್, ಮ್ಯೂಸಿಕ್, ಫೈಟ್ಸ್.... ಎಲ್ಲಾ ಅದ್ಭುತವಾಗಿತ್ತು. ಡಾ. ನಾಗೇಂದ್ರ ಪ್ರಸಾದ್ ಬರೆದ ಸಾಂಗ್ಸ್, ಶಂಕರ್ ಮಹಾದೇವನ್ ಸಿಂಗಿಂಗ್ ಕೇಳಬೇಕೇ... ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಕುರಿತ ಹಾಡಂತು ವಿಶ್ವ ಮಟ್ಟದಲ್ಲೇ ಫೇಮಸ್ ಆಗಿ ಹೋಗಿತ್ತು!

ದುರಂತವೇನು ಅಂದ್ರೆ, ಈ ಸಿನಿಮಾದಲ್ಲಿ ಸಂವಿಧಾನ ಮತ್ತು ಸಂವಿಧಾನ ಶಿಲ್ಪಿಯನ್ನು ಅಳವಡಿಸಲಾಗಿದೆ ಎಂಬ ಏಕೈಕ ಕಾರಣಕ್ಕೆ ಕೆಂಪೇಗೌಡ ರಸ್ತೆಯಲ್ಲಿ ಚಿತ್ರಮಂದಿರ ಸಿಗಲಿಲ್ಲ!

ಸರ್ಕಾರಿ ಜಾಗದಲ್ಲಿ ರಹಸ್ಯವಾಗಿ ಅಂಬೇಡ್ಕರ್ ಪುತ್ಥಳಿಯನ್ನು ಸ್ಥಾಪಿಸಿ, ಬೇರೇನೋ ಕತೆ ಹೇಳಿ, ರಾಜಕಾರಣಿ ಕೈಯಿಂದಲೇ ಓಪನಿಂಗ್ ಸೆರಮನಿ ಮಾಡಿಸುವ ದೃಶ್ಯ.... ಅದ್ಭುತವಾಗಿದೆ!!

ಮಂಜು ಟೀಮ್ ಧೃತಿಗೆಡಲಿಲ್ಲ. ಮಹಾ ಸ್ವಾಭಿಮಾನಿ ಮಂಜು ಯಾರಿಂದಲೂ ಇನ್‌ಫ್ಲ್ಯುಯೆನ್ಸ್ ಕೂಡ ಮಾಡಿಸಲಿಲ್ಲ. ಎಸ್.ಪಿ. ರೋಡ್‌ನಲ್ಲಿರುವ ಮಾಸ್ಟರ್ ಪೀಸ್ ಶಾರದಾ ಟಾಕೀಸ್‌ನಲ್ಲಿ ಬೇಗೂರ್ ಕಾಲೋನಿ ಬಿಡುಗಡೆ ಮಾಡಿದ್ರು.

50 ಡೇಸ್ ಯಶಸ್ವಿ ಪ್ರದರ್ಶನ ಕಂಡಿತ್ತು. ಇದೇ ಸಿನಿಮಾ ತಮಿಳಿನಲ್ಲಿ ಬಂದಿದ್ರೆ ಅದರ ಕತೇನೇ ಬೇರೆ ಆಗಿರುತ್ತಿತ್ತು ಅಂದರು ಕೆಲವರು. ಅವರ ಮಾತು ನಿಜ ಎಂಬಂತೆ, ಕನ್ನಡ ಸಿನಿಮಾ ಬೇಗೂರ್ ಕಾಲೋನಿ ಹೊಸೂರಿನಲ್ಲಿ ನೂರು ದಿನ ಓಡಿತ್ತು!

ಬೆಂಗಳೂರಿನಲ್ಲಿ ಸರಿಯಾಗಿ ಥೀಯೇಟರ್ ಸಿಗದ ಸಿನಿಮಾ ದೂರದ ಕಲಬುರ್ಗಿ, ರಾಯಚೂರು, ಬಿಜಾಪುರದಲ್ಲಿ 50 ಡೇಸ್ ಓಡಿತು. ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲೂ ಉತ್ತಮ ಪ್ರತಿಕ್ರಿಯೆ ದೊರಕಿತ್ತು. ಏನೇ ಆದರೂ ಮಂಜು ಫ್ಲೈಯಿಂಗ್ ಮಂಜು ಎದೆಗುಂದಲಿಲ್ಲ. ತನ್ನ ಚಿತ್ರವನ್ನ ರಜನಿಕಾಂತ್ ಅವರಿಗೂ ತೋರಿಸಿದ್ದಾರೆ. ಅವರ ಸಲಹೆ ಮೇರೆಗೆ, ಬೇಗೂರ್ ಕಾಲೋನಿಯನ್ನು ಒಂದಷ್ಟು ಬದಲಿಸಿ, ರೀ ಶೂಟ್ ಮಾಡಿ ತಮಿಳಿನಲ್ಲಿ ಬಿಡುಗಡೆಗೊಳಿಸಲು ಸಿದ್ಧತೆ ನಡೆಸಿದ್ದಾರೆ. ತೆಲುಗು, ಹಿಂದಿ, ಮಳೆಯಾಳದಲ್ಲೂ ಡಬ್ಬಿಂಗ್ ಮಾಡುವ ಪ್ರಯತ್ನ ಸಾಗಿದೆ.

ಇದಲ್ಲದೆ, ಪ್ರತಿಭಾವಂತ ಮಂಜು ಕೈಯ್ಯಲ್ಲಿ ಐದಾರು ಹೊಸ ಪ್ರಾಜೆಕ್ಟ್‌ಗಳಿವೆ. ಪ್ರತಿಯೊಂದನ್ನು ಶಾರ್ಟ್ ಫಿಲಂ ರೀತಿಯಲ್ಲಿ ಚಿತ್ರಿಸಿಟ್ಟುಕೊಂಡಿದ್ದಾರೆ. ಅವುಗಳನ್ನು ದರ್ಶನ್, ಶಿವಣ್ಣ ನೋಡಿಬಿಟ್ರೆ ಫಿದಾ ಆಗುವುದು ಗ್ಯಾರೆಂಟಿ! ಎನಿವೇ, ಲೋಕಲ್ ಟ್ಯಾಲೆಂಟ್ ಹಾಗೂ ಕನ್ನಡದ ಪ್ರತಿಭೆ ಫ್ಲೈಯಿಂಗ್ ಮಂಜುಗೆ ಆಲ್ ದ ಬೆಸ್ಟ್....

Vol. 40 No. 51 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com